# 2009 - 10 ನೇ ಸಾಲಿನಲ್ಲಿ ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಸಭೆಯ ನಡವಳಿಗಳು.


| ಕ್ರ ಸಂ. | ಸಭೆಯ ವಿವರ | ಪುಟ ಸಂಖ್ಯೆ | |
|---|---|---|---|
| | | ರಿಂದ | ವರೆಗೆ |
| 1 | ದಿನಾಂಕ: 23-05-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 2 | 19 |
| 2 | ದಿನಾಂಕ: 05-09-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 20 | 43 |
| 3 | ದಿನಾಂಕ: 30-10-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 44 | 57 |
| 4 | ದಿನಾಂಕ: 02-01-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 58 | 65 |
| 5 | ದಿನಾಂಕ: 06-03-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 66 | 76 |

# ದಿನಾಂಕ: 23-05-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

## ಸಭೆಯಲ್ಲಿ ಹಾಜರಿದ್ದ ಸದಸ್ಯರು.

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 4 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 8 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 9 | ಸಹಾಯಕ ನಿರ್ದೆಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ನಗರ ಯೋಜನಾ ಸದಸ್ಯರು) | ಸದಸ್ಯರು |
| 10 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಇಂಜಿನಿಯರ್<br>ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 12 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 3 | ಶ್ರೀ ಮದು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |

| | | |
|---|---|---|
| 4 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. | ಸದಸ್ಯರು |
| 5 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 6 | ಸೈಂಟಿಫಿಕ್ ಆಫೀಸರ್,<br>ಪ್ರಕೃತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | ಸದಸ್ಯರು |
| 7 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ವಿಷಯ ನಂ 1.**

ದಿನಾಂಕ: 06-03-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 06-03-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ :**

ದಿನಾಂಕ: 06-03-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಪುನಃ ಚರ್ಚಿಸಿ ನಂತರ ಈ ಕೆಳಕಂಡ ಬದಲಾವಣೆಗಳನ್ನು ಮಾಡಿಕೊಳ್ಳಲು ಸಭೆಯಲ್ಲಿ ಹಾಜರಿದ್ದ ಜಿಲ್ಲಾಧಿಕಾರಿಗಳು ಹಾಗೂ ಚಿಕ್ಕಮಗಳೂರು ವಿಧಾನ ಸಭಾ ಸದಸ್ಯರು ಸಲಹೆ ಮಾಡಿದರು ಅದರಂತೆ ಸಭೆಯು ಒಪ್ಪಿಗೆ ಸೂಚಿಸಿತು.

ವಿಷಯ ಸಂಖ್ಯೆ. 4 ಕ್ಕೆ ಸಂಬಂದಿಸಿದಂತೆ ದಂಟರಮಕ್ಕಿ ಹತ್ತಿರ ವೃತ್ತ ನಿರ್ಮಾಣ ಆರಂಭಿಸುವ ಮುಂಚೆ ಅಲ್ಲಿ ಚತುಷ್ಪದ ರಸ್ತೆ ನಿರ್ಮಾಣ ಆದರಿಸಿ ಅಧ್ಯಯನ ಮಾಡಿದ ನಂತರ ಅನುಷ್ಠಾನ ಮಾಡಲು ನಿರ್ದರಿಸಲಾಯಿತು.

ವಿಷಯ ಸಂಖ್ಯೆ. 7 ಕ್ಕೆ ಸಂಬಂದಿಸಿದಂತೆ ಚಿಕ್ಕಮಗಳೂರು ಮಹಾಯೋಜನಾ ಪರಿಷ್ಕೃತ– 1 ರ ಕರಡು ನಕ್ಷೆಗೆ ಆಹ್ವಾನಿಸಿದ್ದ ಆಕ್ಷೇಪಣೆಗಳು ಹಾಗೂ ಸಲಹೆಗಳಿಗೆ ದಿನಾಂಕ: 12-05-2009 ಕೊನೆಯ ದಿನವಾಗಿದ್ದು ಸಾರ್ವಜನಿಕರ ಹಿತದೃಷಿಯಿಂದ ಮತ್ತೆ 1 ತಿಂಗಳು ವಿಸ್ತರಣೆ ಮಾಡಲು ಸಭೆಯು ನಿರ್ಧರಿಸಿತು.

ವಿಷಯ ಸಂಖ್ಯೆ. 8 ಕ್ಕೆ ಸಂಬಂದಿಸಿದಂತೆ ಪ್ರಾಧಿಕಾರದಿಂದ ಅನುಮೋದನೆ ಆಗುವ ಏಕ ನಿವೇಶನಗಳಿಗೆ ರಸ್ತೆ ಹಾಗೂ ಚರಂಡಿ ನಿರ್ಮಾಣದ ವೆಚ್ಚವನ್ನು ಕಡ್ಡಾಯವಾಗಿ ಪಾವತಿಸಿದ ನಂತರವೇ ನಗರ ಸಭೆಯು ಖಾತೆ ಮಾಡುವ ಬಗ್ಗೆ ನಗರ ಸಭೆಯು ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು.

ವಿಷಯ ಸಂಖ್ಯೆ. 10 ಕ್ಕೆ ಸಂಬಂಧಿಸಿದಂತೆ ಹೊಸದಾಗಿ ನಿವೇಶನ ಹಂಚಿಕೆ ಮಾಡುವಾಗ ಅರ್ಜಿ ಸಲ್ಲಿಸಿರುವ ದಿನಾಂಕದ ಜೇಷ್ಠತೆಯನ್ನು ಸಹ ಪರಿಗಣಿಸಲು ಸಭೆಯು ನಿರ್ಣಯಿಸಿತು. ನಗರಾಭಿವೃದ್ದಿ ಪ್ರಾಧಿಕಾರದಿಂದ ನಿರ್ಮಾಣ ಮಾಡಿರುವ ಬಸ್ ಶೆಲ್ಟರ್‌ಗಳನ್ನು ನಿರ್ವಹಣೆಗಾಗಿ ನಗರ ಸಭೆಗೆ ಹಸ್ತಾಂತರಿಸಲು ಜಿಲ್ಲಾಧಿಕಾರಿಗಳು ಸೂಚಿಸಲಾಗಿ ಸಭೆಯು ಒಪ್ಪಿಗೆ ನೀಡಿತು.

**ವಿಷಯ ನಂ 2.**

2009 ನೇ ಸಾಲಿನ ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಮಾಹೆಯ ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1, ಅನುಬಂಧ–2, ಮತ್ತು ಅನುಬಂಧ–3 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ :**

2009 ನೇ ಸಾಲಿನ ಜನವರಿ ಮಾಹೆಯ ಅನುಬಂಧ–1, ಅನುಬಂಧ–2, ಮತ್ತು ಅನುಬಂಧ–3 ರಲ್ಲಿ ತಯಾರಿಸಿರುವ ವಿವರಗಳನ್ನು ಪರಿಶೀಲಿಸಿ, ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಶ್ರೀ ಪಿ. ಎನ್. ಚನ್ನೇಗೌಡ ಪ್ರಥಮ ದರ್ಜೆ ಸಹಾಯಕರು ಇವರು ಇಂದಾವರ ಗ್ರಾಮದ ಸರ್ವೆ ನಂ. 101 / 4A ರಲ್ಲಿನ 12.00 x 24.00 ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಪಿ. ಎನ್. ಚನ್ನೇಗೌಡ ಪ್ರಥಮ ದರ್ಜೆ ಸಹಾಯಕರು ಇವರು ಇಂದಾವರ ಗ್ರಾಮದ ಸರ್ವೆ ನಂ. 101 / 4A ರಲ್ಲಿನ 12.00 x 24.00 ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುತ್ತಾರೆ ಸದರಿ ಜಾಗವು ಹಾಲಿ ಮಲ್ಲಂದೂರು ಚಿಕ್ಕಮಗಳೂರು ಜಿಲ್ಲಾ ಮುಖ್ಯ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ಈ ರಸ್ತೆಯು 18.00 ಮೀ ಅಗಲವಿರುತ್ತದೆ ಸದರಿ ಜಾಗವು ಹಾಲಿ ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನಾ (ತಾ) ರಲ್ಲಿ ಕೃಷಿ ವಲಯದಲ್ಲಿ ಕಾಯ್ದಿರಿಸಿದ್ದು ಆದರೆ ಜಮೀನನ್ನು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿಯಾಗಿದ್ದು ಸುತ್ತ ಮುತ್ತ ವಸತಿ ಬೆಳವಣಿಗೆಗಳು ಬಂದಿರುತ್ತದೆ. ಈ ಸಂಬಂಧ ಸದರಿ ಜಾಗಕ್ಕೆ ವಸತಿ ಏಕ ನಿವೇಶನ ವಿನ್ಯಾಸವನ್ನು ಅನುಮೋದಿಸಲು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಪಿ. ಎನ್. ಚನ್ನೇಗೌಡ ಪ್ರಥಮ ದರ್ಜೆ ಸಹಾಯಕರು ಇವರು ಇಂದಾವರ ಗ್ರಾಮದ ಸರ್ವೆ ನಂ. 101 / 4A ರಲ್ಲಿನ 12.00 x 24.00 ಮೀ ಅಳತೆಯ ಜಾಗವು ಮಹಾ ಯೋಜನೆ ಪರಿಷ್ಕೃತ– 1 (ತಾತ್ಕಾಲಿಕ) ಅನುಮೋದನೆಯಾಗುವುದಕ್ಕಿಂತ ಮುಂಚಿತವಾಗಿಯೇ ವಸತಿ ಉದ್ದೇಶಕ್ಕೆ ಪರಿವರ್ತನೆಯಾಗಿದೆ, ಸದರಿ ಮಹಾಯೋಜನಾ ನಕ್ಷೆಯಲ್ಲಿ ಕೃಷಿ ಉದ್ದೇಶಕ್ಕೆ ಕಾಯ್ದಿರಿಸಿದೆ. ಈ ಜಮೀನು ವಸತಿ ಉದ್ದೇಶಕ್ಕೆ ಭೂಪರಿವರ್ತನೆಯಾಗಿರುವುದರಿಂದ ಸುತ್ತ ಮುತ್ತ ವಸತಿ ಬೆಳವಣಿಗೆಗಳು ಬಂದಿರುವುದರಿಂದ ವಸತಿ ಏಕ ನಿವೇಶನ ವಿನ್ಯಾಸವನ್ನು ಅನುಮೋದಿಸುವ ಸಂಬಂದ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ವಹಿಸಬಹುದಾಗಿದೆ.

**ತೀರ್ಮಾನ :**

ದಿನಾಂಕ: 09-06-1994 ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿರುತ್ತದೆ, 1996 ರಲ್ಲಿ ಸರ್ಕಾರದಿಂದ ಅನುಮೋದನೆಯಾದ ಸಿ.ಡಿ.ಪಿ. ನಕ್ಷೆಯಲ್ಲಿ ಮತ್ತು 2008 ರಲ್ಲಿ ಅನುಮೋದನೆಯಾದ ಮಹಾಯೋಜನಾ ಪರಿಷ್ಕೃತ– 1 (ತಾತ್ಕಾಲಿಕ) ರಲ್ಲಿ ವ್ಯವಸಾಯ ವಲಯದಲ್ಲಿ ಉಳಿದಿರುತ್ತದೆ ಈ ಜಮೀನನ್ನು ಭೂ ಪರಿವರ್ತನೆ ಆಗಿರುವುದರಿಂದ ಏಕ ನಿವೇಶನ ವಸತಿ ವಿನ್ಯಾಸವನ್ನು ಅನುಮೋದನೆ ನೀಡಲು ಹಾಗೂ ಮಹಾಯೋಜನಾ ಪರಿಷ್ಕೃತ– 1 ರ ಅಂತಿಮ ನಕ್ಷೆಯಲ್ಲಿ ವಸತಿ ಉದ್ದೇಶಕ್ಕಾಗಿಯೇ ಕಾಯ್ದಿರಿಸುವಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಶ್ರೀ ಡಿ. ಟಿ. ಪರಮೇಶ ಬಿನ್ ಡಿ. ಆರ್. ತಿಮ್ಮಪ್ಪ ಇವರು ಮುನ್ಸಿಪಲ್ ಅಸೆಸ್‌ಮೆಂಟ್ ನಂ. 135 / 08 / 09 507 / P ರಲ್ಲಿನ 47.24 ಮೀ x (19.81 + 20.11 + 21.63) / 3 + (13.71 x 12.19) ಮೀ ಅಳತೆಯ ಜಾಗದಲ್ಲಿ ನೆಲ ಅಂತಸ್ತಿನ ಹಾಗೂ ಮೊದಲ ಅಂತಸ್ತಿನ ಆಟೋಮೊಬೈಲ್ ಸರ್ವಿಸ್ ಅಂಡ್ ರಿಪೇರ್ಸ್ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಕ ನಿರ್ಣಯ ಪತ್ರ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಡಿ. ಟಿ. ಪರಮೇಶ ಬಿನ್ ಡಿ. ಆರ್. ತಿಮ್ಮಪ್ಪ ಇವರು ಮುನ್ಸಿಪಲ್ ಅಸೆಸ್‌ಮೆಂಟ್ ನಂ. 135 / 08 / 09 507 / P ರಲ್ಲಿನ 47.24 ಮೀ x (19.81 + 20.11 + 21.63) / 3 + (13.71 x 12.19) ಮೀ ಅಳತೆಯ ಜಾಗದಲ್ಲಿ ನೆಲ ಅಂತಸ್ತಿನ ಹಾಗೂ ಮೊದಲ ಅಂತಸ್ತಿನ ಆಟೋಮೊಬೈಲ್ ಸರ್ವಿಸ್ ಅಂಡ್ ರಿಪೇರ್ಸ್ ಕಟ್ಟಡವನ್ನು ನಿರ್ಮಿಸಲು ಪ್ರಾರಂಭಿಕ ನಿರ್ಣಯ ಪತ್ರ ಕೋರಿರುವ ಜಾಗವು 22.00 ಮೀ ಅಗಲದ ಬೈ–ಪಾಸ್ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಜಾಗದ ಸುತ್ತ ಮುತ್ತ ವಸತಿ / ವಾಣಿಜ್ಯ ಅಭಿವೃದ್ಧಿ ಬೆಳವಣಿಗೆಗಳು ಬಂದಿದ್ದು, ವಾಣಿಜ್ಯ ಬೆಳವಣಿಗೆಗಳಿಗೆ ಈ ಜಾಗವು ಪೂರಕವಾಗಿರುತ್ತದೆ ಸದರಿ ಜಾಗಕ್ಕೆ ದಿನಾಂಕ: 12-05-2008 ರಲ್ಲಿ ವಸತಿ ಏಕ ನಿವೇಶನ ವಿನ್ಯಾಸವು ಅನುಮೋದನೆಯಾಗಿದ್ದು ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಈ ಸಂಬಂಧ ಸದರಿ ಜಾಗದಲ್ಲಿ ಅರ್ಜಿದಾರರು ಕೋರಿರುವಂತೆ ಆಟೋ ಮೋಬೈಲ್ ಸರ್ವಿಸಸ್ ಮತ್ತು ರೀಪೇರ್ಸ್ ಘಟಕವನ್ನು ಸ್ಥಾಪಿಸಲು ಅನುಮತಿ ಕೋರಿರುವಂತೆ ಸದರಿ ಜಾಗವು ವಸತಿ ವಲಯದಲ್ಲಿದ್ದು ವಸತಿ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ ವಲಯ ನಿಯಾಮಾವಳಿಯ ಪುಟ ಸಂಖ್ಯೆ. 65 (ಬಿ) ರನ್ವಯ ಆಟೋ ಮೋಬೈಲ್ ಸರ್ವಿಸಸ್ ಅಂಡ್ ರೀಪೇರ್ಸ್ ಕಟ್ಟಡವನ್ನು ನಿರ್ಮಿಸಲು ಷಡ್ಯೂಲ್– 1 ರ ಕ್ರಮ ಸಂಖ್ಯೆಯಂತೆ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ವಹಿಸಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಡಿ. ಟಿ. ಪರಮೇಶ ಬಿನ್ ಡಿ. ಆರ್. ತಿಮ್ಮಪ್ಪ ಇವರು ಮುನ್ಸಿಪಲ್ ಅಸೆಸ್‌ಮೆಂಟ್ ನಂ. 135 / 08 / 09 507 / P ರಲ್ಲಿನ 47.24 ಮೀ x (19.81 + 20.11 + 21.63) / 3 + (13.71 x 12.19) ಮೀ ಅಳತೆಯ ಪ್ರದೇಶದ ಜಾಗವು ವಸತಿಗೆ ಭೂ ಪರಿವರ್ತನೆಯಾಗಿದ್ದು ವಸತಿ ಏಕ ನಿವೇಶನ ಅನುಮೋದನೆಯಾಗಿದೆ, ವಸತಿ ವಲಯದಲ್ಲಿ ಆಟೋ ಮೋಬೈಲ್ ಸರ್ವಿಸ್ ಮತ್ತು ರೀಪೇರ್ಸ್ (ಟೂ ವೀಲ್ಹರ್ಸ್) ಉದ್ದೇಶಕ್ಕೆ ವಲಯ ನಿಯಮಾವಳಿಗಳಲ್ಲಿ ಅವಕಾಶವಿರುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ವಹಿಸಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಮುನ್ಸಿಪಲ್ ಅಸೆಸ್‌ಮೆಂಟ್ ನಂ. 135 / 08 / 09 507 / P ರಲ್ಲಿನ 47.24 ಮೀ x (19.81 + 20.11 + 21.63) / 3 + (13.71 x 12.19) ಮೀ ಅಳತೆಯ ಪ್ರದೇಶದ ಜಾಗವು ವಸತಿಗೆ ಭೂ ಪರಿವರ್ತನೆಯಾಗಿದ್ದು ವಸತಿ ಏಕ ನಿವೇಶನ ಅನುಮೋದನೆಯಾಗಿರುತ್ತದೆ, ವಸತಿ ವಲಯದಲ್ಲಿ ಆಟೋ ಮೋಬೈಲ್ ಸರ್ವಿಸ್ ಮತ್ತು ರೀಪೇರ್ಸ್ (ಟೂ ವೀಲ್ಹರ್ಸ್) ಉದ್ದೇಶಕ್ಕೆ ವಲಯ ನಿಯಮಾವಳಿಗಳಲ್ಲಿ ಅವಕಾಶವಿರುತ್ತದೆ, ಆದುದರಿಂದ ಸದರಿ ಪ್ರದೇಶದಲ್ಲಿ ಸರ್ವಿಸ್ ರಸ್ತೆ ಮತ್ತು ಪಾರ್ಕಿಂಗ್ ವ್ಯವಸ್ಥೆಗೆ ಹೆಚ್ಚಿಗೆ ಜಾಗ ಮೀಸಲಿಟ್ಟು ಅನುಮತಿ ನೀಡಲು ಸಭೆ ಒಪ್ಪಿಗೆ ನೀಡಿತು.

**ವಿಷಯ ನಂ 5.**

ಶ್ರೀಮತಿ ಕೆ. ಎ. ಜರೀನಾ ಕೊಂ ಹೆಚ್. ಎಂ. ಶಯೀಬ್ ಅಲಿ ಇವರು ಚಿಕ್ಕಮಗಳೂರು ತಾಲ್ಲೂಕು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 108 / 1 ಮತ್ತು 110 ರಲ್ಲಿನ ಜಮೀನಿನಲ್ಲಿ 139.29 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿ.

**ಟಿಪ್ಪಣಿ :**

ಶ್ರೀಮತಿ ಕೆ. ಎ. ಜರೀನಾ ಕೊಂ ಹೆಚ್. ಎಂ. ಶಯೀಬ್ ಅಲಿ ಇವರು ಚಿಕ್ಕಮಗಳೂರು ತಾಲ್ಲೂಕು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 108 / 1 ಮತ್ತು 110 ರಲ್ಲಿನ ಜಮೀನಿನಲ್ಲಿ 139.29 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ಜಾಗದ ಸ್ಥಳ ಪರಿಶೀಲಿಸಲಾಯಿತು ಸದರಿ ಜಾಗವು ಹಾಲಿ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ವಸತಿಗಾಗಿ ಕಾದಿರಿಸಿದೆ. ಈ ಅರ್ಜಿದಾರರು ಕೋರಿರುವ ಜಮೀನು ಒಟ್ಟು 04 ಎಕರೆ 04 ಗುಂಟೆ ವಿಸ್ತೀರ್ಣವುಳ್ಳದಾಗಿದ್ದು ಸದರಿ ಜಮೀನನ್ನು ಈ ಕಛೇರಿಯಿದ ಷರತ್ತುಗಳನ್ನು ವಿಧಿಸಿ ರದ್ದುಪಡಿಸಿರುತ್ತಾರೆ, ಅದರಂತೆ ಜಮೀನಿನ ಮಾಲಿಕರುಗಳು ಸದರಿ ಜಮೀನುಗಳನ್ನು ವಿಭಜಿಸಿರುವ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ, ಈ ಸಂಬಂದ ಅರ್ಜಿದಾರರು ಕೋರಿರುವಂತೆ ಸದರಿ ಜಾಗಕ್ಕೆ ಸರ್ಕಾರದ ಸುತ್ತೋಲೆಯನ್ವಯ ಶುಲ್ಕಗಳನ್ನು ಪಾವತಿಸಿಕೊಂಡು ಷರತ್ತಿಗೊಳಪಟ್ಟು ಅನುಮೋದನೆ ನೀಡಬಹುದಾಗಿರುತ್ತದೆ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಈ ಪ್ರದೇಶವು ಹಿಂದೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ಧಿ ಯೋಜನಾ ನಕ್ಷೆಯಲ್ಲಿ ವಸತಿಗಾಗಿ (ಹಳದಿ ಬಣ್ಣ) ಕಾಯ್ದಿರಿಸಲ್ಪಟ್ಟಿರುವ ಜಾಗದಲ್ಲಿ ಬರುತ್ತಿದೆ ಹಾಗೂ ಈ ಜಾಗವು ವಸತಿಗೆ ಭೂ ಪರಿವರ್ತನೆಯಾಗಿದೆ, ಆದರೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ ಪರಿಷ್ಕೃತ– 1 (ತಾತ್ಕಾಲಿಕ) ದಲ್ಲಿ ಕಾರ್ಟಗ್ರಫಿಕ್ ಎರರ್‌ನಿಂದ ಪಾರ್ಕ್ ಬಣ್ಣ (ಹಸಿರು) ಬಂದಿದೆ. ಈಗಾಗಲೇ ವಸತಿಗೆ ಈ ಜಮೀನು ಭೂ ಪರಿವರ್ತನೆಯಾಗಿರುವುದರಿಂದ ಸದರಿ ಜಮೀನನ್ನು ವಸತಿಗಾಗಿಯೇ ಮಹಾ ಯೋಜನಾ ಪರಿಷ್ಕೃತ– 1 ರ (ಅಂತಿಮ) ತಯಾರಿಸುವಾಗ ಕಾಯ್ದಿರಿಸಬೇಕಾಗಿರುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

**ತೀರ್ಮಾನ :**

ಸರ್ಕಾರದಿಂದ ಹಿಂದೆ ಅನುಮೋದನೆಯಾಗಿರುವ ಸಿ.ಡಿ.ಪಿ. ನಕ್ಷೆಯಲ್ಲಿ ಸದರೀ ಜಮೀನು ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಲ್ಪಟ್ಟಿರುತ್ತದೆ, ಈ ಜಮೀನು ವಸತಿಗಾಗಿ ಭೂ ಅನ್ಯಕ್ರಾಂತವಗಿರುತ್ತದೆ, ಆದರೆ ಮಹಾ ಯೋಜನಾ ಪರಿಷ್ಕೃತ– 1 (ತಾತ್ಕಾಲಿಕ) ದಲ್ಲಿ ಉದ್ಯಾನವನಕ್ಕಾಗಿ ಕಾಯ್ದಿರಿಸಲ್ಪಟ್ಟಿರುತ್ತದೆ, ಈಗಾಗಲೇ ವಸತಿಗಾಗಿ ಭೂ ಪರಿವರ್ತನೆ ಆಗಿರುವುದರಿಂದ ವಸತಿ ಏಕ ನಿವೇಶನವನ್ನು ಅನುಮೋದಿಸುವಂತೆ ಹಾಗೂ ಸದರೀ ಜಾಗವನ್ನು ಮಹಾಯೋಜನಾ ಪರಿಷ್ಕೃತ– 1 ಅಂತಿಮ ನಕ್ಷೆಯಲ್ಲಿ ವಸತಿಗಾಗಿಯೇ ಕಾಯ್ದಿರಿಸಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 6.**

ಶ್ರೀ ಅಸ್ಗರ್ ಅಲಿ ಬಿನ್ ಹೆಚ್. ಎಂ. ಜೈನಲ್ ಅಬಿದ್ದೀನ್ ಇವರು ಚಿಕ್ಕಮಗಳೂರು ತಾಲ್ಲೂಕು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 108 / 1 ಮತ್ತು 110 ರಲ್ಲಿನ ಜಮೀನಿನಲ್ಲಿ 139.29 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿ.

**ಟಿಪ್ಪಣಿ :**

ಶ್ರೀ ಅಸ್ಗರ್ ಅಲಿ ಬಿನ್ ಹೆಚ್. ಎಂ. ಜೈನಲ್ ಅಬಿದ್ದೀನ್ ಇವರು ಚಿಕ್ಕಮಗಳೂರು ತಾಲ್ಲೂಕು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 108 / 1 ಮತ್ತು 110 ರಲ್ಲಿನ ಜಮೀನಿನಲ್ಲಿ 139.29 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ಜಾಗದ ಸ್ಥಳ ಪರಿಶೀಲಿಸಲಾಯಿತು ಸದರಿ ಜಾಗವು ಹಾಲಿ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ವಸತಿಗಾಗಿ ಕಾದಿರಿಸಿದೆ.

ಈ ಅರ್ಜಿದಾರರು ಕೋರಿರುವ ಜಮೀನು ಒಟ್ಟು 04 ಎಕರೆ 04 ಗುಂಟೆ ವಿಸ್ತೀರ್ಣವುಳ್ಳದಾಗಿದ್ದು ಸದರಿ ಜಮೀನನ್ನು ಈ ಕಛೇರಿಯಿದ ಷರತ್ತುಗಳನ್ನು ವಿಧಿಸಿ ರದ್ದುಪಡಿಸಿರುತ್ತಾರೆ, ಆದರಂತೆ ಜಮೀನಿನ ಮಾಲಿಕರುಗಳು ಸದರಿ ಜಮೀನುಗಳನ್ನು ವಿಭಜಿಸಿರುವ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ, ಈ ಸಂಬಂದ ಅರ್ಜಿದಾರರು ಕೋರಿರುವಂತೆ ಸದರಿ ಜಾಗಕ್ಕೆ ಸರ್ಕಾರದ ಸುತ್ತೋಲೆಯನ್ವಯ ಶುಲ್ಕಗಳನ್ನು ಪಾವತಿಸಿಕೊಂಡು ಷರತ್ತಿಗೊಳಪಟ್ಟು ಅನುಮೋದನೆ ನೀಡಬಹುದಾಗಿರುತ್ತದೆ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಈ ಪ್ರದೇಶವು ಹಿಂದೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ದಿ ಯೋಜನಾ ನಕ್ಷೆಯಲ್ಲಿ ವಸತಿಗಾಗಿ (ಹಳದಿ ಬಣ್ಣ) ಕಾಯ್ದಿರಿಸಲ್ಪಟ್ಟಿರುವ ಜಾಗದಲ್ಲಿ ಬರುತ್ತಿದೆ ಹಾಗೂ ಈ ಜಾಗವು ವಸತಿಗೆ ಭೂ ಪರಿವರ್ತನೆಯಾಗಿದೆ, ಆದರೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ ಪರಿಷ್ಕೃತ– 1 (ತಾತ್ಕಾಲಿಕ) ದಲ್ಲಿ ಕಾರ್ಟಗ್ರಫಿಕ್ ಎರರ್‌ನಿಂದ ಪಾರ್ಕ್ ಬಣ್ಣ (ಹಸಿರು) ಬಂದಿದೆ. ಈಗಾಗಲೇ ವಸತಿಗೆ ಈ ಜಮೀನು ಭೂ ಪರಿವರ್ತನೆಯಾಗಿರುವುದರಿಂದ ಸದರಿ ಜಮೀನನ್ನು ವಸತಿಗಾಗಿಯೇ ಮಹಾ ಯೋಜನಾ ಪರಿಷ್ಕೃತ– 1 ರ (ಅಂತಿಮ) ತಯಾರಿಸುವಾಗ ಕಾಯ್ದಿರಿಸಬೇಕಾಗಿರುತ್ತದೆ. ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

**ತೀರ್ಮಾನ :**

ಸರ್ಕಾರದಿಂದ ಹಿಂದೆ ಅನುಮೋದನೆಯಾಗಿರುವ ಸಿ.ಡಿ.ಪಿ. ನಕ್ಷೆಯಲ್ಲಿ ಸದರೀ ಜಮೀನು ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಲ್ಪಟ್ಟಿರುತ್ತದೆ, ಈ ಜಮೀನು ವಸತಿಗಾಗಿ ಭೂ ಅನ್ಯಕ್ರಾಂತವಾಗಿರುತ್ತದೆ, ಆದರೆ ಮಹಾ ಯೋಜನಾ ಪರಿಷ್ಕೃತ– 1 (ತಾತ್ಕಾಲಿಕ) ದಲ್ಲಿ ಉದ್ಯಾನವನಕ್ಕಾಗಿ ಕಾಯ್ದಿರಿಸಲ್ಪಟ್ಟಿರುತ್ತದೆ, ಈಗಾಗಲೇ ವಸತಿಗಾಗಿ ಭೂ ಪರಿವರ್ತನೆ ಆಗಿರುವುದರಿಂದ ವಸತಿ ಏಕ ನಿವೇಶನವನ್ನು ಅನುಮೋದಿಸುವಂತೆ ಹಾಗೂ ಸದರೀ ಜಾಗವನ್ನು ಮಹಾಯೋಜನಾ ಪರಿಷ್ಕೃತ– 1 ಅಂತಿಮ ನಕ್ಷೆಯಲ್ಲಿ ವಸತಿಗಾಗಿಯೇ ಕಾಯ್ದಿರಿಸಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 07.**

ಶ್ರೀ ಅಶ್ರಫ್ ಉಲ್ ಇಸ್ಲಾಮ್ ಬಿನ್ ಗುಲಾಮ್ ರಸೂಲ್ ಸಾಹೇಬ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 06-03-2009 ರಂದು ನಡೆದ ಪ್ರಾಧಿಕಾರದ ಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ವಿಷಯ ಸಂಖ್ಯೆ. 01 ರಲ್ಲಿ ಸದರಿ ಭೂಮಿಯ ಪಕ್ಕದಲ್ಲಿ ದೊಡ್ಡ ನಾಲೆ ಇದ್ದು ಅದರ ಪಕ್ಕದಲ್ಲಿ ಒಂದು ಸರ್ವಿಸ್ ರಸ್ತೆ ಸಹ ಇರುವುದಾಗಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು ಮತ್ತು ನಾಲೆ ತುಂಬಿದಾಗ ಮಳೆ ನೀರು ಹರಿಯಲು ಒಂದು ಸಣ್ಣ ನಾಲೆ ಅಡ್ಡವಾಗಿರುವುದನ್ನು ಮುಚ್ಚಲಾಗಿದ್ದು ಈ ಬಗ್ಗೆ ಸಹ ಪರಿಶೀಲನೆ ಮಾಡಬೇಕೆಂದು ಸಹ ತಿಳಿಸಿದರು. ನಗರ ಯೋಜನಾ ಸದಸ್ಯರು ಮಾತನಾಡಿ ನಿಯಮಾವಳಿಗಳ ಅನ್ವಯ ನಾಲೆ, ಸರ್ವಿಸ್ ರಸ್ತೆ ಎಲ್ಲಾ ಪರಿಶೀಲಿಸುವುದಾಗಿ ಹಾಗೂ ವಸತಿ ವಿನ್ಯಾಸಕ್ಕೆ ಸಂಬಂದಿಸಿದಂತೆ ಇನ್ನೂ ಕೆಲವು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಿದ್ದು, ಅರ್ಜಿದಾರರು ಎಲ್ಲಾ ದಾಖಲಾತಿಗಳನ್ನು ನಿಖರವಾಗಿ ಸಲ್ಲಿಸಿದ ನಂತರ ಪರಿಶೀಲಿಸಿ ಮುಂದಿನ ಸಭೆಯಲ್ಲಿ ವಿಷಯ ಮಂಡಿಸಲು ತೀರ್ಮಾನಿಸಲಾಗಿತ್ತು.

ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಈ ಜಮೀನನ್ನು ತಹಶೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು ಇವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ, ಅದರಂತೆ ಸದರಿ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ಕ್ರಮವಹಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಅಶ್ರಫ್ ಉಲ್ ಇಸ್ಲಾಮ್ ಬಿನ್ ಗುಲಾಮ್ ರಸೂಲ್ ಸಾಹೇಬ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬಹುದಾಗಿರುತ್ತದೆ.

**ತೀರ್ಮಾನ :**

ಸರ್ಕಾರದಿಂದ ಹಿಂದೆ ಅನುಮೋದನೆಯಾಗಿರುವ ಸಿ.ಡಿ.ಪಿ. ನಕ್ಷೆಯಲ್ಲಿ ಸದರೀ ಜಮೀನು ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಲ್ಪಟ್ಟಿರುತ್ತದೆ, ಈ ಜಮೀನು ವಸತಿಗಾಗಿ ಭೂ ಅನ್ಯಕ್ರಾಂತವಗಿರುತ್ತದೆ, ಈಗಾಗಲೇ ವಸತಿಗಾಗಿ ಭೂ ಪರಿವರ್ತನೆ ಆಗಿರುವುದರಿಂದ ಅನ್ಯಕ್ರಾಂತ ಆದೇಶವನ್ನು ಆಧರಿಸಿ ವಸತಿ ವಿನ್ಯಾಸವನ್ನು ಅನುಮೋದಿಸುವಂತೆ ಹಾಗೂ ಸದರೀ ಜಾಗವನ್ನು ಮಹಾಯೋಜನಾ ಪರಿಷ್ಕೃತ– 1 ಅಂತಿಮ ನಕ್ಷೆಯಲ್ಲಿ ವಸತಿಗಾಗಿಯೇ ಕಾಯ್ದಿರಿಸಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 08.**

ಶ್ರೀ ಪರಹನ್ ತಾರೀಮ್ ಬಿನ್ ಅಕ್ತರ್ ಉಲ್ ಇಸ್ಲಾಂ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 105 / 2 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 06-03-2009 ರಂದು ನಡೆದ ಪ್ರಾಧಿಕಾರದ ಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ವಿಷಯ ಸಂಖ್ಯೆ. 02 ರಲ್ಲಿ ಸದರಿ ಭೂಮಿಯ ಪಕ್ಕದಲ್ಲಿ ದೊಡ್ಡ ನಾಲೆ ಇದ್ದು ಅದರ ಪಕ್ಕದಲ್ಲಿ ಒಂದು ಸರ್ವಿಸ್ ರಸ್ತೆ ಸಹ ಇರುವುದಾಗಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು ಮತ್ತು ನಾಲೆ ತುಂಬಿದಾಗ ಮಳೆ ನೀರು ಹರಿಯಲು ಒಂದು ಸಣ್ಣ ನಾಲೆ ಅಡ್ಡವಾಗಿರುವುದನ್ನು ಮುಚ್ಚಲಾಗಿದ್ದು ಈ ಬಗ್ಗೆ ಸಹ ಪರಿಶೀಲನೆ ಮಾಡಬೇಕೆಂದು ಸಹ ತಿಳಿಸಿದರು. ನಗರ ಯೋಜನಾ ಸದಸ್ಯರು ಮಾತನಾಡಿ ನಿಯಮಾವಳಿಗಳ ಅನ್ವಯ ನಾಲೆ, ಸರ್ವಿಸ್ ರಸ್ತೆ ಎಲ್ಲಾ ಪರಿಶೀಲಿಸುವುದಾಗಿ ಹಾಗೂ ವಸತಿ ವಿನ್ಯಾಸಕ್ಕೆ ಸಂಬಂದಿಸಿದಂತೆ ಇನ್ನೂ ಕೆಲವು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಿದ್ದು, ಅರ್ಜಿದಾರರು ಎಲ್ಲಾ ದಾಖಲಾತಿಗಳನ್ನು ನಿಖರವಾಗಿ ಸಲ್ಲಿಸಿದ ನಂತರ ಪರಿಶೀಲಿಸಿ ಮುಂದಿನ ಸಭೆಯಲ್ಲಿ ವಿಷಯ ಮಂಡಿಸಲು ತೀರ್ಮಾನಿಸಲಾಗಿತ್ತು.

ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಈ ಜಮೀನನ್ನು ತಹಶೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು ಇವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ.

ಅದರಂತೆ ಸದರಿ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ಕ್ರಮವಹಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಪರಹನ್ ತಾರೀಮ್ ಬಿನ್ ಅಕ್ತರ್ ಉಲ್ ಇಸ್ಲಾಂ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 105 / 2 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬಹುದಾಗಿರುತ್ತದೆ.

**ತೀರ್ಮಾನ :**

ಸರ್ಕಾರದಿಂದ ಹಿಂದೆ ಅನುಮೋದನೆಯಾಗಿರುವ ಸಿ.ಡಿ.ಪಿ. ನಕ್ಷೆಯಲ್ಲಿ ಸದರೀ ಜಮೀನು ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಲ್ಪಟ್ಟಿರುತ್ತದೆ, ಈ ಜಮೀನು ವಸತಿಗಾಗಿ ಭೂ ಅನ್ಯಕ್ರಾಂತವಗಿರುತ್ತದೆ, ಈಗಾಗಲೇ ವಸತಿಗಾಗಿ ಭೂ ಪರಿವರ್ತನೆ ಆಗಿರುವುದರಿಂದ ಅನ್ಯಕ್ರಾಂತ ಆದೇಶವನ್ನು ಆಧರಿಸಿ ವಸತಿ ವಿನ್ಯಾಸವನ್ನು ಅನುಮೋದಿಸುವಂತೆ ಹಾಗೂ ಸದರೀ ಜಾಗವನ್ನು ಮಹಾಯೋಜನಾ ಪರಿಷ್ಕೃತ– 1 ಅಂತಿಮ ನಕ್ಷೆಯಲ್ಲಿ ವಸತಿಗಾಗಿಯೇ ಕಾಯ್ದಿರಿಸಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 09.**

ಶ್ರೀ ಸೈಯದ್ ಷಾಹಿದ್ ಸಾದಿಕ್ ಬಿನ್ ಅಶ್ರಫ್ ಉಲ್ಲಾ ಇಸ್ಲಾಮ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 17 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 06-03-2009 ರಂದು ನಡೆದ ಪ್ರಾಧಿಕಾರದ ಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ವಿಷಯ ಸಂಖ್ಯೆ. 03 ರಲ್ಲಿ ಶ್ರೀ ಸೈಯದ್ ಷಾಹಿದ್ ಸಾದಿಕ್ ಬಿನ್ ಅಶ್ರಫ್ ಉಲ್ಲಾ ಇಸ್ಲಾಮ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 17 ಗುಂಟೆ ವಿಸ್ತೀರ್ಣದ ಭೂಮಿಯ ಪಕ್ಕದಲ್ಲಿ ದೊಡ್ಡ ನಾಲೆ ಇದ್ದು ಅದರ ಪಕ್ಕದಲ್ಲಿ ಒಂದು ಸರ್ವಿಸ್ ರಸ್ತೆ ಸಹ ಇರುವುದಾಗಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು ಮತ್ತು ನಾಲೆ ತುಂಬಿದಾಗ ಮಳೆ ನೀರು ಹರಿಯಲು ಒಂದು ಸಣ್ಣ ನಾಲೆ ಅಡ್ಡವಾಗಿರುವುದನ್ನು ಮುಚ್ಚಲಾಗಿದ್ದು ಈ ಬಗ್ಗೆ ಸಹ ಪರಿಶೀಲನೆ ಮಾಡಬೇಕೆಂದು ಸಹ ತಿಳಿಸಿದರು.

ನಗರ ಯೋಜನಾ ಸದಸ್ಯರು ಮಾತನಾಡಿ ನಿಯಮಾವಳಿಗಳ ಅನ್ವಯ ನಾಲೆ, ಸರ್ವಿಸ್ ರಸ್ತೆ ಎಲ್ಲಾ ಪರಿಶೀಲಿಸುವುದಾಗಿ ಹಾಗೂ ವಸತಿ ವಿನ್ಯಾಸಕ್ಕೆ ಸಂಬಂದಿಸಿದಂತೆ ಇನ್ನೂ ಕೆಲವು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಿದ್ದು, ಅರ್ಜಿದಾರರು ಎಲ್ಲಾ ದಾಖಲಾತಿಗಳನ್ನು ನಿಖರವಾಗಿ ಸಲ್ಲಿಸಿದ ನಂತರ ಪರಿಶೀಲಿಸಿ ಮುಂದಿನ ಸಭೆಯಲ್ಲಿ ವಿಷಯ ಮಂಡಿಸಲು ತೀರ್ಮಾನಿಸಲಾಗಿತ್ತು. ಅರ್ಜಿದಾರರು ಮತ್ತೊಮ್ಮೆ ಅರ್ಜಿ ಸಲ್ಲಿಸಿ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಈ ಜಮೀನನ್ನು ತಹಶೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು ಇವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ, ಅದರಂತೆ ಸದರಿ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ಕ್ರಮವಹಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಸೈಯದ್ ಷಾಹಿದ್ ಸಾದಿಕ್ ಬಿನ್ ಅಶ್ರಫ್ ಉಲ್ಲಾ ಇಸ್ಲಾಮ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 17 ಗುಂಟೆ ವಿಸ್ತೀರ್ಣದ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬಹುದಾಗಿರುತ್ತದೆ.

**ತೀರ್ಮಾನ :**

ಶ್ರೀ ಸೈಯದ್ ಷಾಹಿದ್ ಸಾದಿಕ್ ಬಿನ್ ಅಶ್ರಫ್ ಉಲ್ಲಾ ಇಸ್ಲಾಮ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 17 ಗುಂಟೆ ವಿಸ್ತೀರ್ಣದ ಪ್ರದೇಶವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿರುತ್ತದೆ, ಸದರಿ ಪ್ರದೇಶವು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿದ್ದು ಸದರಿ ಪ್ರದೇಶಕ್ಕೆ ತಹಶೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು ಇವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ, ಅನ್ಯಕ್ರಾಂತ ಆದೇಶವನ್ನು ಆಧರಿಸಿ ಸದರಿ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 10.**

ಶ್ರೀಮತಿ ಎನ್. ಕೆ. ಛಾಯಾ ಕೊಂ ಶಾಂತಿನಾಥ್ ಇವರು ರಿ. ಸ. ನಂ. 108 / 1 ಮತ್ತು 110 ರಲ್ಲಿನ 397.44 ಚ. ಮೀ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿ.

**ಟಿಪ್ಪಣಿ :**

ಶ್ರೀಮತಿ ಎನ್. ಕೆ. ಛಾಯಾ ಕೊಂ ಶಾಂತಿನಾಥ್ ಇವರು ರಿ. ಸ. ನಂ. 108 / 1 ಮತ್ತು 110 ರಲ್ಲಿನ 397.44 ಚ. ಮೀ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಹಾಲಿ 9.00 ಮೀ ಮತ್ತು 6.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ.

ಈ ಸಂಬಂದ ಸದರಿ ಜಾಗವನ್ನು ವಸತಿಗಾಗಿ ಭೂ ಪರಿವರ್ತನೆ ಮಂಜೂರಾತಿ ಆದೇಶ ನೀಡಿರುತ್ತಾರೆ, ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ವಸತಿಗಾಗಿ ಕಾದಿರಿಸಿದೆ. ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ ಕಾರ್ಟಗ್ರಫಿಕ್ ಎರರ್‌ನಿಂದ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಉಪಯೋಗಕ್ಕಾಗಿ ಕಾದಿರಿಸಿದೆ, ಆದುದರಿಂದ ಕಾರ್ಟಗ್ರಫಿಕ್ ಎರರ್‌ನಿಂದಾಗಿರುವ ಈ ನ್ಯೂನತೆಯನ್ನು ಸರಿಪಡಿಸಿಕೊಂಡು ವಸತಿ ಏಕ ನಿವೇಶನ ವಿನ್ಯಾಸವನ್ನು ಅನುಮೋದಿಸುವ ಸಂಬಂದ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ಎನ್. ಕೆ. ಛಾಯಾ ಕೊಂ ಶಾಂತಿನಾಥ್ ಇವರು ರಿ. ಸ. ನಂ. 108 / 1 ಮತ್ತು 110 ರಲ್ಲಿನ 397.44 ಚ. ಮೀ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಹಾಲಿ 9.00 ಮೀ ಮತ್ತು 6.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸದರಿ ಜಾಗವು ಹಿಂದೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿಗಾಗಿ ಕಾದಿರಿಸಿದೆ.

ವಸತಿಗಾಗಿ ಭೂ ಪರಿವರ್ತನೆ ಮಂಜೂರಾತಿ ಆದೇಶ ನೀಡಿರುತ್ತಾರೆ, ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ ಕಾರ್ಟಗ್ರಫಿಕ್ ಎರರ್‌ನಿಂದ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಉದ್ದೇಶಕ್ಕೆ ಕಾದಿರಿಸಿದೆ (ಕೆಂಪು ಬಣ್ಣ) ಈಗಾಗಲೇ ವಸತಿಗೆ ಭೂ ಪರಿವರ್ತನೆಯಾಗಿರುವುದರಿಂದ ಮಹಾಯೋಜನೆ ಪರಿಷ್ಕೃತ –1 ಅಂತಿಮದಲ್ಲಿ ವಸತಿಗೆ ಕಾಯ್ದಿರಿಸಬೇಕಾಗಿದೆ. ಏಕ ನಿವೇಶನ ವಸತಿ ವಿನ್ಯಾಸ ಅನುಮೋದಿಸುವ ಸಂಬಂದ ಅಂದರೆ ಈ ಎರಡು ವಿಷಯಗಳನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿದೆ.

**ತೀರ್ಮಾನ :**

ಶ್ರೀಮತಿ ಎನ್. ಕೆ. ಛಾಯಾ ಕೊಂ ಶಾಂತಿನಾಥ್ ಇವರು ರಿ. ಸ. ನಂ. 108 / 1 ಮತ್ತು 110 ರಲ್ಲಿನ 397.44 ಚ. ಮೀ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಸದರಿ ಜಾಗವು ಈ ಹಿಂದೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ದಿ ಯೋಜನೆಯಲ್ಲಿ ವಸತಿಗಾಗಿ ಕಾದಿರಿಸಿದೆ. ವಸತಿಗಾಗಿ ಭೂ ಪರಿವರ್ತನೆ ಮಂಜೂರಾತಿ ಆದೇಶ ನೀಡಿರುತ್ತಾರೆ, ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ ಕಾರ್ಟಗ್ರಫಿಕ್ ಎರರ್‌ನಿಂದ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಉದ್ದೇಶಕ್ಕೆ ಕಾದಿರಿಸಿದೆ (ಕೆಂಪು ಬಣ್ಣ) ಈಗಾಗಲೇ ವಸತಿಗೆ ಭೂ ಪರಿವರ್ತನೆಯಾಗಿರುವುದರಿಂದ ಮಹಾಯೋಜನೆ ಪರಿಷ್ಕೃತ –I ಅಂತಿಮದಲ್ಲಿ ವಸತಿಗೆ ಕಾಯ್ದಿರಿಸಿ ನಕ್ಷೆಯಲ್ಲಿ ಸರಿಪಡಿಸಿಕೊಳ್ಳಬೇಕೆಂದು ಹಾಗೂ ಏಕನಿವೇಶನ ವಸತಿ ವಿನ್ಯಾಸ ಅನುಮೋದಿಸಬಹುದು ಎಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 11.**

ಶ್ರೀಮತಿ ಎನ್. ಕೆ. ಛಾಯಾ ಕೊಂ ಶಾಂತಿನಾಥ್ ಇವರು ರಿ. ಸ. ನಂ. 108 / 1 ಮತ್ತು 110 ರಲ್ಲಿನ 156.01 ಚ. ಮೀ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿ.

**ಟಿಪ್ಪಣಿ :**

ಶ್ರೀಮತಿ ಎನ್. ಕೆ. ಛಾಯಾ ಕೊಂ ಶಾಂತಿನಾಥ್ ಇವರು ರಿ. ಸ. ನಂ. 108 / 1 ಮತ್ತು 110 ರಲ್ಲಿನ 156.01 ಚ. ಮೀ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಹಾಲಿ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಈ ಸಂಬಂದ ಸದರಿ ಜಾಗವನ್ನು ವಸತಿಗಾಗಿ ಭೂ ಪರಿವರ್ತನೆ ಮಂಜೂರಾತಿ ಆದೇಶ ನೀಡಿರುತ್ತಾರೆ, ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ವಸತಿಗಾಗಿ ಕಾದಿರಿಸಿದೆ. ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ ಕಾರ್ಟಗ್ರಫಿಕ್ ಎರರ್‌ನಿಂದ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಉಪಯೋಗಕ್ಕಾಗಿ ಕಾದಿರಿಸಿದೆ, ಆದುದರಿಂದ ಕಾರ್ಟಗ್ರಫಿಕ್ ಎರರ್‌ನಿಂದಾಗಿರುವ ಈ ನ್ಯೂನತೆಯನ್ನು ಸರಿಪಡಿಸಿಕೊಂಡು ವಸತಿ ಏಕ ನಿವೇಶನ ವಿನ್ಯಾಸವನ್ನು ಅನುಮೋದಿಸುವ ಸಂಬಂದ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ಎನ್. ಕೆ. ಛಾಯಾ ಕೊಂ ಶಾಂತಿನಾಥ್ ಇವರು ರಿ. ಸ. ನಂ. 108 / 1 ಮತ್ತು 110 ರಲ್ಲಿನ 156.01 ಚ. ಮೀ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಹಾಲಿ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸದರಿ ಜಾಗವು ಹಿಂದೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ದಿ ಯೋಜನೆಯಲ್ಲಿ ವಸತಿಗಾಗಿ ಕಾದಿರಿಸಿದೆ. ವಸತಿಗಾಗಿ ಭೂ ಪರಿವರ್ತನೆ ಮಂಜೂರಾತಿ ಆದೇಶ ನೀಡಿರುತ್ತಾರೆ, ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ ಕಾರ್ಟಗ್ರಫಿಕ್ ಎರರ್‌ನಿಂದ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಉದ್ದೇಶಕ್ಕೆ ಕಾದಿರಿಸಿದೆ (ಕೆಂಪು ಬಣ್ಣ) ಈಗಾಗಲೇ ವಸತಿಗೆ ಭೂ ಪರಿವರ್ತನೆಯಾಗಿರುವುದರಿಂದ ಮಹಾಯೋಜನೆ ಪರಿಷ್ಕೃತ –I ಅಂತಿಮದಲ್ಲಿ ವಸತಿಗೆ ಕಾಯ್ದಿರಿಸಬೇಕಾಗಿದೆ. ಏಕ ನಿವೇಶನ ವಸತಿ ವಿನ್ಯಾಸ ಅನುಮೋದಿಸುವ ಸಂಬಂದ ಅಂದರೆ ಈ ಎರಡು ವಿಷಯಗಳನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿದೆ.

**ತೀರ್ಮಾನ :**

ಶ್ರೀಮತಿ ಎನ್. ಕೆ. ಛಾಯಾ ಕೊಂ ಶಾಂತಿನಾಥ್ ಇವರು ರಿ. ಸ. ನಂ. 108 / 1 ಮತ್ತು 110 ರಲ್ಲಿನ 156.01 ಚ. ಮೀ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಸದರಿ ಜಾಗವು ಈ ಹಿಂದೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿಗಾಗಿ ಕಾದಿರಿಸಿದೆ. ವಸತಿಗಾಗಿ ಭೂ ಪರಿವರ್ತನೆ ಮಂಜೂರಾತಿ ಆದೇಶ ನೀಡಿರುತ್ತಾರೆ, ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ ಕಾರ್ಟಗ್ರಫಿಕ್ ಎರರ್‌ನಿಂದ ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಉದ್ದೇಶಕ್ಕೆ ಕಾದಿರಿಸಿದೆ (ಕೆಂಪು ಬಣ್ಣ) ಈಗಾಗಲೇ ವಸತಿಗೆ ಭೂ ಪರಿವರ್ತನೆಯಾಗಿರುವುದರಿಂದ ಮಹಾಯೋಜನೆ ಪರಿಷ್ಕೃತ –I ಅಂತಿಮದಲ್ಲಿ ವಸತಿಗೆ ಕಾಯ್ದಿರಿಸಿ ನಕ್ಷೆಯಲ್ಲಿ ಸರಿಪಡಿಸಿಕೊಳ್ಳಬೇಕೆಂದು ಹಾಗೂ ಏಕನಿವೇಶನ ವಸತಿ ವಿನ್ಯಾಸ ಅನುಮೋದಿಸಬಹುದು ಎಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 12.**

ಶ್ರೀ ಬಿ. ಆರ್. ನಾಗರಾಜ ಬಿನ್ ಬಿ. ಪಿ. ರಾಜು ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 148 / 2 ರಲ್ಲಿನ 0.06.04 ಗುಂಟೆ ವಿಸ್ತೀರ್ಣದ ಜಮೀನನ್ನು ವಸತಿಗಾಗಿ ಭೂ ಪರಿವರ್ತನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಬಿ. ಆರ್. ನಾಗರಾಜ ಬಿನ್ ಬಿ. ಪಿ. ರಾಜು ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 148 / 2 ರಲ್ಲಿನ 0.06.04 ಗುಂಟೆ ವಿಸ್ತೀರ್ಣದ ಜಮೀನನ್ನು ವಸತಿಗಾಗಿ ಭೂ ಪರಿವರ್ತನೆ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಹಾಲಿ 20.00 ಮೀ ಅಗಲದ ಬೇಲೂರು ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ಸುತ್ತ ಮುತ್ತ ಅಭಿವೃದ್ಧಿ ಬೆಳವಣಿಗೆಗಳು ಬಂದಿರುತ್ತದೆ, ಈ ಸಂಬಂದ ಸದರಿ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿರುವಂತೆ ಸದರಿ ಜಾಗವನ್ನು ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ಕೈಗಾರಿಕೆಗಾಗಿ ಕಾದಿರಿಸಿದೆ. ಹಾಗೂ ಸರ್ಕಾರದಿಂದ ದಿನಾಂಕ: 31-12-2008 ರಂದು ಅನುಮೋದನೆಯಾಗಿರುವಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ನಕ್ಷೆ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ ವಸತಿ ಉಪಯೋಗಕ್ಕಾಗಿ ಕಾದಿರಿಸಿದೆ, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಬಿ. ಆರ್. ನಾಗರಾಜ ಬಿನ್ ಬಿ. ಪಿ. ರಾಜು ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 148 / 2 ರಲ್ಲಿನ 0.06.04 ಗುಂಟೆ ವಿಸ್ತೀರ್ಣದ ಜಮೀನಿಗೆ ಹಾಲಿ 20.00 ಮೀ ಅಗಲದ ಬೇಲೂರು ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸದರಿ ಜಾಗವು ಹಿಂದೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ಕೈಗಾರಿಕಾ ಉದ್ದೇಶಕ್ಕಾಗಿ ಕಾದಿರಿಸಲ್ಪಟ್ಟಿದೆ. ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ (ಪಾರ್ಕ್‌ಗಾಗಿ) ಕಾರ್ಟಗ್ರಫಿಕ್ ಎರರ್‌ನಿಂದ ಹಸಿರು ಬಣ್ಣ ಬಂದಿರುತ್ತದೆ, ಇದನ್ನು ಮಹಾ ಯೋಜನಾ ಪರಿಷ್ಕೃತ– 1 (ಅಂತಿಮ) ನಕ್ಷೆಯಲ್ಲಿ ವ್ಯಾಪಕಾಭಿವೃದ್ಧಿ ಯೋಜನೆಯಂತೆ ಕ್ರಮವಹಿಸಬಹುದಾಗಿರುತ್ತದೆ, ಮಾನ್ಯ ಜಿಲ್ಲಾಧಿಕಾರಿಗಳಿಗೆ ಅಭಿಪ್ರಾಯ ನೀಡುವ ಸಂಬಂದ, ಸದರಿ ಪ್ರದೇಶವನ್ನು ಕೈಗಾರಿಕಾ ಉದ್ದೇಶಕ್ಕೆ (ಆಟೋ ಮೊಬೈಲ್ ಸರ್ವಿಸ್ ಮತ್ತಿ ರೀಪೆರ್ಸ್ (ಟೂ ವೀಲರ್ಸ್)] ಪರಿಗಣಿಸುವ ಸಂಬಂದ ಈ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಮಹಾಯೋಜನೆ ಪರಿಷ್ಕೃತ– 1 (ತಾತ್ಕಾಲಿಕ) ನಕ್ಷೆಯಲ್ಲಿ ಕಾರ್ಟ್ರೊಗ್ರಾಫಿಕ್ ಎರರ್‌ನಿಂದ್ ಹಸಿರು ಬಣ್ಣ ಬಂದಿರುವುದನ್ನು ಸರಿಪಡಿಸಿ ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಕೈಗಾರಿಕಾ ಉದ್ದೇಶಕ್ಕೆ (ಆಟೋಮೋಬೈಲ್ ಟೂ ವೀಲ್ಡರ್ಸ್ ಸರ್ವಿಸ್ ಮತ್ತು ರೀಪೇರ್ಸ್) ಉದ್ದೇಶಕ್ಕೆ ಅನುಮತಿ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

**ವಿಷಯ ನಂ 13.**

ಪ್ರಾಧಿಕಾರಕ್ಕೆ ಸರ್ಕಾರದಿಂದ ಮಂಜೂರಾಗಿ ಮುಂದುವರಿಯುತ್ತಿರುವ ಒಟ್ಟು 9 ಹುದ್ದೆಗಳಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರು, ಎರಡನೇ ದರ್ಜೆ ಸಹಾಯಕರು ಹಾಗೂ ಬೆರಳಚ್ಚುಗಾರರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸಭೆಯ ಅನುಮೋದನೆ ಕೋರಿ.

**ಟಿಪ್ಪಣಿ :**

ಪ್ರಾಧಿಕಾರದ ಕಛೇರಿಗೆ ಈ ಕೆಳಕಂಡಂತೆ ಒಂಬತ್ತು ಹುದ್ದೆಗಳು ಮಂಜೂರಾಗಿದ್ದು ಅವುಗಳ ಮಂಜೂರಾತಿ ಅವಧಿಯು ದಿನಾಂಕ: 30-06-2008 ಕ್ಕೆ ಮುಕ್ತಾಯವಾಗಿದ್ದು ಅವುಗಳನ್ನು ಖಾಯಂ ಆಗಿ ಮುಂದುವರಿಸಲು ಮಂಜೂರಾತಿ ನೀಡುವಂತೆ ಈ ಕಛೇರಿಯ ಪತ್ರದ ಸಂಖ್ಯೆ. ನಅಪ್ರಾಚಿ : ಸಿಬ್ಬಂದಿ : 16 : 2008 - 09, ದಿನಾಂಕ: 24-09-2008 ರಲ್ಲಿ ಸರ್ಕಾರಕ್ಕೆ ಕೋರಲಾಗಿತ್ತು, ಆದರೆ ಈವರೆವಿಗೆ ಮಂಜೂರಾತಿ ನೀಡಿಕೆ ಆದೇಶ ಬಂದಿರುವುದಿಲ್ಲ.

| ಕ್ರ ಸಂ. | ಹುದ್ದೆಯ ಹೆಸರು | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|
| 1. | ಸಹಾಯಕ ಇಂಜಿನಿಯರ್ | 11400 - 21600 | 1 | |
| 2. | ಲಿಟರೇಟ್ ಅಸಿಸ್ಟೆಂಟ್ | 5800 - 10500 | 1 | |
| 3. | ನಾಲ್ಕನೇ ದರ್ಜೆ ಸಹಾಯಕರು | 5200 - 8200 | 1 | |
| 4. | “ಡಿ” ಗ್ರೂಪ್ ನೌಕರರು | 4800 – 7275 | 1 | |
| 5. | ಲೆಕ್ಕಾಧೀಕ್ಷಕರು | 10800 - 20025 | 1 | |
| 6. | ಪ್ರಥಮ ದರ್ಜೆ ಸಹಾಯಕರು | 7275 - 13350 | 1 | |
| 7. | ಎರಡನೇ ದರ್ಜೆ ಸಹಾಯಕರು | 5500 - 10500 | 1 | |
| 8. | ಬೆರಳಚ್ಚುಗಾರರು | 5500 - 10500 | 1 | |
| 9. | ವರ್ಕ್ ಇನ್ಸ್‌ಪೆಕ್ಟರ್ | 5500 - 10500 | 1 | |

ಈ ಮೇಲ್ಕಂಡ ಹುದ್ದೆಗಳಲ್ಲಿ ಕ್ರಮ ಸಂಖ್ಯೆ. 1 ಮತ್ತು 5 ರ ಹುದ್ದೆಗಳು ನಿಯೋಜನೆ ಮೇರೆಗೆ ಲೋಕೋಪಯೋಗಿ ಹಾಗೂ ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಪಡೆಯಬೇಕಾಗಿರುತ್ತದೆ, ಹಾಲಿ ಕ್ರಮ ಸಂಖ್ಯೆ 5 ಕ್ಕೆ ಸಂಬಂದಿಸಿದಂತೆ ಲೆಕ್ಕಾಧೀಕ್ಷಕರು ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಸಹಾಯಕ ಇಂಜಿನಿಯರ್ ಹುದ್ದೆ ಖಾಲಿ ಇರುತ್ತದೆ. ಕ್ರಮ ಸಂಖ್ಯೆ. 2 ಮತ್ತು 3 ರಲ್ಲಿನ ಲಿಟರೇಟ್ ಸಹಾಯಕರು ಹಾಗೂ ನಾಲ್ಕನೇ ದರ್ಜೆ ಸಹಾಯಕರುಗಳು ಮಾತ್ರ ಇಲಾಖೆಯವರು ಕಾರ್ಯ ನಿರ್ವಹಿಸುತ್ತಿರುತ್ತಾರೆ ಕ್ರಮ ಸಂಖ್ಯೆ. 4 ಮತ್ತು 9 ರಲ್ಲಿನ “ಡಿ” ದರ್ಜೆ ನೌಕರರು ಹಾಗೂ ವರ್ಕ್ ಇನ್ಸ್‌ಪೆಕ್ಟರ್ ರವರು ದಿನಗೂಲಿ ಮಾಸಿಕ ಆದಾರದ ಮೇಲೆ ಕೆಲಸ ನಿರ್ವಹಿಸುತ್ತಿರುತ್ತಾರೆ, ಉಳಿದ ಕ್ರಮ ಸಂಖ್ಯೆ. 6, 7 ಮತ್ತು 8 ರ ಹುದ್ದೆಗಳು ಖಾಲಿ ಇದ್ದು ಪ್ರಾಧಿಕಾರದಲ್ಲಿ ಇತ್ತೀಚೆಗೆ ಹೊಸದಾಗಿ ವಸತಿ ಬಡಾವಣೆ ಅಭಿವೃದ್ಧಿ ಪಡಿಸುತ್ತಿರುವ ಯೋಜನೆಗಳು ಜಾರಿಯಲ್ಲಿದ್ದು ಕಛೇರಿ ಕೆಲಸಗಳು ಅಧಿಕವಾಗಿರುವುದರಿಂದ 1 ಪ್ರಥಮ ದರ್ಜೆ ಸಹಾಯಕರು, 1 ದ್ವಿತಿಯ (ಎರಡನೇ) ದರ್ಜೆ ಸಹಾಯಕರು ಹಾಗೂ 1 ಬೆರಳಚ್ಚುಗಾರರು ಹೀಗೆ ಒಟ್ಟು 3 ಜನ ನೌಕರರನ್ನು ಖಾಯಂ ಆಗಿ ನಿಯಮಾನುಸಾರ ಸರ್ಕಾರದ ಅನುಮತಿ ಪಡೆದು ಪ್ರಾಧಿಕಾರವು ನೇಮಕ ಮಾಡಿಕೊಳ್ಳುವಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಜಿಲ್ಲಾಧಿಕಾರಿಗಳು ಮಾತನಾಡಿ ಈ ಹಂತದಲ್ಲಿ ಯಾವುದೇ ನೇರ ನೇಮಕಾತಿ ಮಾಡಿಕೊಳ್ಳದೆ ಹೊರಗುತ್ತಿಗೆ / ಪ್ರಾಜೆಕ್ಟ್ ವರ್ಕ್ ಆಧಾರದಲ್ಲಿ ನೇಮಕಾತಿಗಳಿಗೆ ಅವಕಾಶ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದರು ಸಭೆಯು ಇದಕ್ಕೆ ಒಪ್ಪಿಗೆ ನೀಡಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು.

**ವಿಷಯ ನಂ 1.**

ಚಿಕ್ಕಮಗಳೂರು ನಗರದ ಗವನಹಳ್ಳಿ ಬಳಿ ಒಂದು ಬಸ್ ಶೆಲ್ಟರ್ (Bus shelter) ನಿರ್ಮಾಣ ಮಾಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಕಡೂರು ಮಂಗಳೂರು ರಸ್ತೆಯಲ್ಲಿ ಗವನಹಳ್ಳಿ ಹತ್ತಿರ ಸಾರ್ವಜನಿಕರಿಗೆ ಅನುಕೂಲಕ್ಕಾಗಿ ಒಂದು ಬಸ್ ಶೆಲ್ಟರ್ ಅವಶ್ಯಕವಾಗಿರುತ್ತದೆ. ಆದುದರಿಂದ ಸದರಿ ಸ್ಥಳದಲ್ಲಿ ಒಂದು ಬಸ್ ಶೆಲ್ಟರ್ ನಿರ್ಮಾಣದ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ದರಸೂಚಿಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಿ ತಾಂತ್ರಿಕ ಅನುಮೋದನೆ ಪಡೆದು ನಿಯಮಾನುಸಾರ ಬಸ್ ಶೆಲ್ಟರ್ ಕಾಮಗಾರಿಯನ್ನು ನಿರ್ವಹಿಸಲು ಸಭೆಯ ಮುಂದೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ, ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದಲ್ಲಿ ಬಸ್ ಶೆಲ್ಟರ್ ನಿರ್ಮಾಣ ಮಾಡುವ ಬಗ್ಗೆ ಚರ್ಚಿಸಲಾಯಿತು, ಆದುನಿಕ ಬಸ್ ಶೆಲ್ಟರ್‌ಗಿಂತ ಕಾಂಕ್ರೀಟ್ ಬಸ್ ಶೆಲ್ಟರ್‌ಗಳನ್ನು ನಿರ್ಮಾಣ ಮಾಡುವುದು ಸೂಕ್ತವಾಗಿರುತ್ತದೆ, ಗವನಹಳ್ಳಿ ಹಾಗೂ ರಾಮನಹಳ್ಳಿ ಹತ್ತಿರ ಎರಡು ಬಸ್ ಶೆಲ್ಟರ್ ನಿರ್ಮಾಣ ಮಾಡಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**ವಿಷಯ ನಂ 2.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ 0 ಎ – 38 ಗುಂಟೆ ವಿಸ್ತೀರ್ಣದ ಲ್ಯಾಂಡ್ ಬ್ಯಾಂಕಿನ ಪ್ರದೇಶದಲ್ಲಿ ನಿವೇಶನವನ್ನಾಗಿ ಮಾಡಿ ಹರಾಜು ಮಾಡುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯಲ್ಲಿನ 00 ಎ – 38 ಗುಂಟೆ ವಿಸ್ತೀರ್ಣದ ಪ್ರದೇಶದ ಜಮೀನನ್ನು ವಸತಿ ನಿವೇಶನಗಳನ್ನಾಗಿ ವಿಂಗಡಿಸಿ ಅಭಿವೃದ್ಧಿಪಡಿಸಿ ಹರಾಜು ಮೂಲಕ ವಿಲೆ ಮಾಡಬಹುದಾಗಿದ್ದು ಸದರಿ ನಿವೇಶನಗಳಿಂದ ಬರುವ ಆದಾಯದಿಂದ ಈಗ ಹೊಸದಾಗಿ ರಚಿಸುತ್ತಿರುವ ಬಡಾವಣೆ ಅಭಿವೃದ್ಧಿಪಡಿಸಲು ಹಾಗೂ ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳಿಗೆ ವ್ಯಯಿಸಲು ಅನುಕೂಲವಾಗುತ್ತದೆ. ಆದುದರಿಂದ ಸದರಿ ಲ್ಯಾಂಡ್ ಬ್ಯಾಂಕಿನ ಜಾಗವನ್ನು ವಸತಿ ನಿವೇಶನಗಳನ್ನಾಗಿ ವಿಂಗಡಿಸಿ ಹರಾಜು ಮಾಡಲು ವಿಷಯವನ್ನು ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಸದರಿ ಪ್ರದೇಶದಲ್ಲಿ ಹೆಚ್ಚಿನ ವಸತಿ ನಿರ್ಮಾಣಗಳು ಹಾಗೂ ಅಭಿವೃದ್ಧಿಯಾಗದೆ ಇರುವುದರಿಂದ ಹರಾಜು ಮೊತ್ತ ಕಡಿಮೆ ಆಗುವ ಅವಕಾಶವಿರುತ್ತದೆ, ಆದ್ದರಿಂದ ಇದನ್ನು ಅಭಿವೃದ್ಧಿ ಪಡಿಸುವ ವಿಚಾರವನ್ನು ಮುಂದೂಡುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು.

**ವಿಷಯ ನಂ. 3.**

ಶ್ರೀ ಎಸ್. ಆರ್. ತೆರದಾಳ್ ಬಿನ್ ಲೇಟ್ ರಾಜಪ್ಪ ಹೆಚ್. ಪಿ. ಗ್ಯಾಸ್ ಏಜೆನ್ಸಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶದ ಪೈಕಿ ಅವರ ಹೆಸರಿನಲ್ಲಿರುವ 35 ಗುಂಟೆ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಎಸ್. ಆರ್. ತೆರದಾಳ್ ಬಿನ್ ಲೇಟ್ ರಾಜಪ್ಪ ಹೆಚ್. ಪಿ. ಗ್ಯಾಸ್ ಏಜೆನ್ಸಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ರಲ್ಲಿ 00 ಎಕರೆ 16 ಗುಂಟೆ ಸರ್ವೆ ನಂ. 119 ರಲ್ಲಿನ 01 ಎಕರೆ 06 ಗುಂಟೆ ಒಟ್ಟು 01 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿಗೆ ಭೂ ಪರಿವರ್ತನೆಯಾಗಿದ್ದು 01 ಎಕರೆ 22 ಗುಂಟೆ ಪೈಕಿ ಸರ್ವೆ ನಂ. 119 ರಲ್ಲಿ 27 ಗುಂಟೆಯನ್ನು ಶ್ರೀಮತಿ ಕಸ್ತೂರಿ ಎಸ್ ಪವಾರ್ ಇವರಿಗೆ ಅಂದರೆ ಅವರ ಧರ್ಮ ಪತ್ನಿಯವರಿಗೆ ಧಾನ ಪತ್ರ ಮಾಡಿದ್ದು 35 ಗುಂಟೆ ಜಮೀನನ್ನು ಅರ್ಜಿದಾರರಾದ ಶ್ರೀ ಎಸ್. ಆರ್. ತೆರದಾಳ್ ರವರು ಉಳಿಸಿಕೊಂಡಿದ್ದು ಈಗ ವಸತಿ ವಿನ್ಯಾಸ ಅನುಮೋದಿಸಿ ಕೊಡುವಂತೆ ಕೋರಿರುತ್ತಾರೆ. ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಎಸ್. ಆರ್. ತೆರದಾಳ್ ಬಿನ್ ಲೇಟ್ ರಾಜಪ್ಪ, ಹೆಚ್. ಪಿ. ಗ್ಯಾಸ್ ಏಜೆನ್ಸಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ರಲ್ಲಿ 00 ಎಕರೆ 16 ಗುಂಟೆ, ಮತ್ತು ಸರ್ವೆ ನಂ. 119 ರಲ್ಲಿನ 01 ಎಕರೆ 06 ಗುಂಟೆ ಒಟ್ಟು 01 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿಗೆ ಭೂ ಪರಿವರ್ತನೆಯಾಗಿದ್ದು, 01 ಎಕರೆ 22 ಗುಂಟೆ ಪೈಕಿ ಸರ್ವೆ ನಂ. 119 ರಲ್ಲಿ 27 ಗುಂಟೆಯನ್ನು ಶ್ರೀಮತಿ ಕಸ್ತೂರಿ ಎಸ್ ಪವಾರ್ ಇವರಿಗೆ ಅಂದರೆ ಅವರ ಧರ್ಮ ಪತ್ನಿಯವರಿಗೆ ಧಾನ ಪತ್ರ ಮಾಡಿದ್ದು 35 ಗುಂಟೆ ಜಮೀನನ್ನು ಅರ್ಜಿದಾರರಾದ ಶ್ರೀ ಎಸ್. ಆರ್. ತೆರದಾಳ್ ರವರು ಉಳಿಸಿಕೊಂಡಿದ್ದು ಈಗ ವಸತಿ ವಿನ್ಯಾಸ ಅನುಮೋದಿಸಿ ಕೊಡುವಂತೆ ಕೋರಿರುತ್ತಾರೆ. ಈ 35 ಗುಂಟೆ ಜಮೀನಿನ ಪೈಕಿ ಅರ್ಜಿದಾರರಿಗೆ ಸೇರಿದ ಜಮೀನು, ಶ್ರೀಮತಿ ಕಸ್ತೂರಿ ಎಸ್. ಪವಾರ್ ಇವರಿಗೆ ಸಂಬಂದಿಸಿದ ಜಮೀನಿನ ಉತ್ತರದಲ್ಲಿ ಸರ್ವೆ ನಂ. 118 ರಲ್ಲಿ 16 ಗುಂಟೆ ಬರುತ್ತಿದ್ದು, ಮತ್ತು ದಕ್ಷಿಣದಲ್ಲಿ ಸರ್ವೆ ನಂ. 119 ರಲ್ಲಿ 19 ಗುಂಟೆ ಬರುತ್ತಿದೆ, ಸರ್ವೆ ನಂ. 119 ಕ್ಕೆ ಮಾತ್ರ ಸಂಪರ್ಕ ರಸ್ತೆ ಇದ್ದು ಸರ್ವೆ ನಂ. 118 ಕ್ಕೆ ಸಂಪರ್ಕ ರಸ್ತೆ ಇರುವುದಿಲ್ಲ ಆದ್ದರಿಂದ ಸರ್ವೆ ನಂ. 119 ರಲ್ಲಿನ 19 ಗುಂಟೆ ಜಮೀನಿಗೆ ವಸತಿ ಏಕ ನಿವೇಶನ ಅನುಮೋದಿಸಲು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ತೀರ್ಮಾನದಂತೆ ಕ್ರಮ ವಹಿಸಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಎಸ್. ಆರ್. ತೆರದಾಳ್ ಬಿನ್ ಲೇಟ್ ರಾಜಪ್ಪ ಹೆಚ್. ಪಿ. ಗ್ಯಾಸ್ ಏಜೆನ್ಸಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ರಲ್ಲಿ 00 ಎಕರೆ 16 ಗುಂಟೆ ಸರ್ವೆ ನಂ. 119 ರಲ್ಲಿನ 01 ಎಕರೆ 06 ಗುಂಟೆ ಒಟ್ಟು 01 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿಗೆ ಭೂ ಪರಿವರ್ತನೆಯಾಗಿರುತ್ತದೆ, ಸದರಿ ವಸತಿ ವಿನ್ಯಾಸದಲ್ಲಿ ಅನುಮೋದನೆ ಕೋರಿದ್ದು ಈಗಾಗಲೇ ಗ್ಯಾಸ್ ಗೋಡಾನ್ ಇರುವುದರಿಂದ ಅನುಮೋದನೆ ನೀಡುವುದು ಸಮಂಜಸ ಅಲ್ಲವೆಂದು ಸಭೆ ಅಭಿಪ್ರಾಯಪಟ್ಟಿತು, ಗ್ಯಾಸ್ ಕಂಪನಿಯಿಂದ ನಿರಾಕ್ಷೇಪಣಾ ಪತ್ರ ಪಡೆದು ನಂತರ ತಾಂತ್ರಿಕ ಅಭಿಪ್ರಾಯ ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

**ವಿಷಯ ನಂ. 4.**

ಚಿಕ್ಕಮಗಳೂರು ಪಟ್ಟಣದ ಸಿ. ಡಿ. ಪಿ. ನಕ್ಷೆಯಲ್ಲಿ ಈ ಹಿಂದೆ ನಿಗದಿಪಡಿಸಿರುವ ವಸತಿ ಉಪಯೋಗಗಳನ್ನು ಈಗ ತಯಾರಿಸುತ್ತಿರುವ ಮಹಾಯೋಜನೆ ಪರಿಷ್ಕೃತ– 1 ರ (ತಾತ್ಕಾಲಿಕ) ನಕ್ಷೆಯಲ್ಲಿ ವಸತಿಗಾಗಿಯೇ ಮೀಸಲಿಡುವ ಕುರಿತು.

**ಟಿಪ್ಪಣಿ :**

ಹಿರೇಮಗಳೂರು ಗ್ರಾಮದ ಸರ್ವೆ ನಂ. 327 ರ ಭೂ ಪರಿವರ್ತನೆಗೆ ಕೋರಿರುವ ಜಮೀನು ಈ ಹಿಂದೆ 1996 ರಲ್ಲಿ ಸರ್ಕಾರದಿಂದ ಅನುಮೋದನೆಯಾಗಿರುವ ನಕ್ಷೆಯಲ್ಲಿ ಭಾಗಶಃ ಕೈಗಾರಿಕೆಗೆ, ಭಾಗಶಃ ವಸತಿಗೆ ಕಾಯ್ದಿರಿಸಲಾಗಿದೆ ಇದನ್ನು ಮಹಾಯೋಜನಾ ಪರಿಷ್ಕೃತ– 1 ರ (ತಾತ್ಕಾಲಿಕ) ನಕ್ಷೆಯಲ್ಲಿ ಭಾಗಶಃ ವಾಣಿಜ್ಯಕ್ಕೆ, ಭಾಗಶಃ ವಸತಿಗೆ ಮತ್ತು ಭಾಗಶಃ ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸಲಾಗಿದೆ, ಇದನ್ನು ವಸತಿ ಉದ್ದೇಶಕ್ಕೆ ಪರಿಗಣಿಸಲು ಹಾಗೂ ಸರ್ವೆ ನಂ. 519 ರಲ್ಲಿಯೂ ಸಹ ಸಿ.ಡಿ.ಪಿ. ನಕ್ಷೆಯಲ್ಲಿ ವಸತಿಗೆ ಕಾಯ್ದಿರಿಸಿದೆ, ಈಗ ಮಹಾ ಯೋಜನಾ ನಕ್ಷೆಯಲ್ಲಿ ಭಾಗಶಃ ವಸತಿಗೆ ಮತ್ತು ಬಾಗಶಃ ಉದ್ಯಾನವನಕ್ಕೆ ಕಾಯ್ದಿರಿಸಲಾಗಿದೆ, ಇದನ್ನೂ ಸಹ ವಸತಿಗೆ ಪರಿಗಣಿಸಲು ಅಂದರೆ, ಮೇಲ್ಕಂಡ ಸರ್ವೆ ನಂಬರುಗಳಲ್ಲಿನ ಪೂರ್ಣ ಜಮೀನುಗಳನ್ನು ವಸತಿಗಾಗಿಯೇ ಮೀಸಲಿಡಬೇಕೆಂದು ಹಾಗೂ ಈ ಹಿಂದೆ ಸಿ.ಡಿ.ಪಿ. ನಕ್ಷೆಯಲ್ಲಿ ವಸತಿಗಾಗಿ ಮೀಸಲಿಟ್ಟಿರುವ ಜಮೀನುಗಳನ್ನು ಹಾಗೂ ಕೈಗಾರಿಕಾ ಉದ್ದೇಶಕ್ಕೆ ಮೀಸಲಿಟ್ಟಿರುವ ಜಮೀನುಗಳನ್ನು (ಭೂ ಬದಲಾವಣೆ ಮಾಡಿದ್ದಲ್ಲಿ) ಸದರಿ ಜಮೀನುಗಳನ್ನು ಸಹ ಮಹಾ ಯೋಜನೆಯಲ್ಲಿ ವಸತಿಗಾಗಿಯೇ ಪರಿಗಣಿಸಬೇಕೆಂದು ಹಾಗೂ ಈಗಾಗಲೇ ವಸತಿಗೆ ಭೂಪರಿವರ್ತನೆಯಾಗಿರುವ ಜಮೀನುಗಳನ್ನು ಸಹ ವಸತಿಗಾಗಿಯೇ ಪರಿಗಣಿಸಬೇಕೆಂದು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ವಿಷಯ ಸಂಖ್ಯೆ. 4 ಮತ್ತು ಅದರ ಟಿಪ್ಪಣಿಯನ್ನು ಒಪ್ಪಿದೆ, ಸದರಿ ಟಿಪ್ಪಣಿಯಲ್ಲಿನ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಆಕ್ಷೇಪಣೆಗಳನ್ನು ಸ್ವೀಕರಿಸಲು ಇನ್ನು 1 ತಿಂಗಳ ಕಾಲಾವಧಿ ವಿಸ್ತರಿಸಲು ನಿರ್ಣಯಿಸಲಾಯಿತು, ಈ ಹಿಂದೆ ವಸತಿ ಪ್ರದೇಶದಲ್ಲಿದ್ದ ಭೂಮಿಯನ್ನು ವಸತಿಗಾಗಿಯೇ ಮುಂದುವರಿಸಲು ಹಾಗೂ ಈ ಹಿಂದೆ ಕೈಗಾರಿಕಾ ವಲಯದಲ್ಲಿದ್ದ ಭೂಮಿಯನ್ನು ಬದಲಾವಣೆ ಮಾಡುವಾಗ ಗರಿಷ್ಠ ಮಟ್ಟದಲ್ಲಿ ವಸತಿಗಾಗಿಯೇ ಮೀಸಲಿಡಲು ಮತ್ತು ಈ ಹಿಂದೆ ಕೃಷಿ ವಲಯದಲ್ಲಿದ್ದು ವಸತಿಗಾಗಿ ಭೂ ಪರಿವರ್ತನೆ ಆಗಿರುವ ಪ್ರಕರಣಗಳನ್ನು ವಸತಿಗಾಗಿಯೇ ಮೀಸಲಿಡಲು ಸಭೆಯು ನಿರ್ಣಯ ಕೈಗೊಂಡಿತು, ಆದರೆ ಭೂ ಪರಿವರ್ತನೆ ಆಗದಿರುವ ಭೂಮಿಯನ್ನು ವಸತಿಗಾಗಿ ಬದಲಾವಣೆ ಮಾಡುವಾಗ ಮಹಾ ಯೋಜನಾ ಪರಿಷ್ಕೃತ– 1 ಅಂತಿಮವಾದ ನಂತರ ಅನುಮೋದನೆ ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

**ವಿಷಯ ನಂ 5.**

ಶ್ರೀ ಜಿ. ಪಿ. ನಜೀರ್ ಅಹಮ್ಮದ್ ಬಿನ್ ಬಿ. ಪಿ. ಶೇಖಬ್ಬ ಇವರು ಮುನ್ಸಿಪಲ್ ಅಸೆಸ್‌ಮೆಂಟ್ ನಂ. 10422 / 10422 / 38 / 1 ರಲ್ಲಿನ ನಿವೇಶನದಲ್ಲಿ ನೆಲ ಅಂತಸ್ತು, ಮೊದಲ ಅಂತಸ್ತು, ಎರಡನೇ ಅಂತಸ್ತು ಮತ್ತು ಮೂರನೇ ಅಂತಸ್ತಿನ ವಸತಿ ಕಟ್ಟಡವನ್ನು ನಿರ್ಮಿಸುತ್ತಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಜಿ. ಪಿ. ನಜೀರ್ ಅಹಮ್ಮದ್ ಬಿನ್ ಬಿ. ಪಿ. ಶೇಖಬ್ಬ ಇವರು ಚಿಕ್ಕಮಗಳೂರು ನಗರದ ನೆಹರು ನಗರ ಬಡಾವಣೆಯಲ್ಲಿನ ಮುನ್ಸಿಪಲ್ ಅಸೆಸ್‌ಮೆಂಟ್ ನಂ. 10422 / 10422 / 38 / 1 ರಲ್ಲಿನ ನಿವೇಶನದಲ್ಲಿ ನೆಲ ಅಂತಸ್ತು, ಮೊದಲ ಅಂತಸ್ತು, ಎರಡನೇ ಅಂತಸ್ತು ಮತ್ತು ಮೂರನೇ ಅಂತಸ್ತಿನ ವಸತಿ ಕಟ್ಟಡವನ್ನು ಅನದೀಕೃತವಾಗಿ ನಿರ್ಮಿಸುತ್ತಿದ್ದು ಸದರಿ ಅನಧೀಕೃತ / ಅನುಮೋದಿತ ನಕ್ಷೆ ಉಲ್ಲಂಘನೆ ಮಾಡಿರುವ ಕಟ್ಟಡವನ್ನು ಕಾನೂನಿನನ್ವಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1987 ಮತ್ತು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961 ರನ್ವಯ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ಅರ್ಜಿದಾರರು ದಿನಾಂಕ: 30-01-2009 ರಂದು ಖುದ್ದಾಗಿ ಈ ಕಛೇರಿಗೆ ಮನವಿ ಸಲ್ಲಿಸಿರುವಂತೆ ಪರಿಶೀಲಿಸಿದಾಗ ಅರ್ಜಿದಾರರು ಈ ಕಛೇರಿಯಿಂದ ನೀಡಿರುವ ನಕ್ಷೆಯಂತೆ ಒಟ್ಟು 618.48 ಚದರ ಮೀಟರ್ ವಿಸ್ತೀರ್ಣದ ಕಟ್ಟಡವನ್ನು (Plinth Area) ನಿರ್ಮಿಸಲು ಅನುಮತಿ ನೀಡಲಾಗಿತ್ತು, ಹಾಗೂ ಪ್ರತಿ ಅಂತಸ್ತಿನಲ್ಲೂ ಒಂದೇ ಒಂದು ಮನೆಗೆ ಅಂದರೆ ಮೂರು ಅಂತಸ್ತಿನಲ್ಲಿಯೂ ಸೇರಿ ಮೂರು ವಸತಿ ಮನೆ ಕಟ್ಟಡಗಳನ್ನು ನಿರ್ಮಿಸಲು ತಾಂತ್ರಿಕ ಅನುಮೋದನೆ ಹಾಗೂ ಕಟ್ಟಡ ಪರವಾನಗಿಯನ್ನು ಪಡೆಯಲಾಗಿದೆ, ಆದರೆ ಸದರಿಯವರು ಈಗ ಅನುಮೋದಿತ ನಕ್ಷೆಯನ್ನು ಉಲ್ಲಂಘನೆ ಮಾಡಿ ವಸತಿ ಸಮುಚ್ಚಯ (Apartment) ಕಟ್ಟಡವನ್ನು ನಿರ್ಮಿಸುತ್ತಿರುತ್ತಾರೆ, ಈ ಸಂಬಂದ ಹಾಲಿ ಈಗ ನಿರ್ಮಾಣ ಮಾಡುತ್ತಿರುವ ಕಟ್ಟಡಕ್ಕೂ ಹಾಗೂ ಅನುಮೋದನೆ ನೀಡಿರುವ ನಕ್ಷೆಯ ವ್ಯತ್ಯಾಸದ ವಿವರಗಳನ್ನು ಈ ಕೆಳಕಂಡಂತೆ ಇರುತ್ತದೆ.

| ವಿಷಯ | ಅನುಮೋದಿತ ನಕ್ಷೆಯಂತೆ | ಹಾಲಿ ನಿರ್ಮಾಣದಂತೆ | ವ್ಯತ್ಯಾಸ |
|---|---|---|---|
| ಮುಂಭಾಗ ನಡು ಜಾಗ | 6.00 ಮೀ | 0.91 ಮೀ | 5.09 ಮೀ |
| ಹಿಂಭಾಗ ನಡು ಜಾಗ | 6.00 ಮೀ | 0.91 ಮೀ | 5.09 ಮೀ |
| ಎಡಭಾಗ ನಡು ಜಾಗ | 3.00 ಮೀ | 1.05 ಮೀ | 1.95 ಮೀ |
| ಬಲಭಾಗ ನಡು ಜಾಗ | 3.00 ಮೀ | 1.05 ಮೀ | 1.95 ಮೀ |
| ಪ್ಲಿಂತ್ ವಿಸ್ತೀರ್ಣ ಒಟ್ಟು | 618.18 ಚ. ಮೀ | 1716.72 ಚ. ಮೀ | 1098.54 ಚ. ಮೀ |
| ಎಫ್. ಎ. ಆರ್. | 1.18 | 2.46 | 1.28 |
| ಕವರೇಜ್ | 39.49 % | 82.25 % | 42.76 % |
| ಕಾಂಪೌಂಡ್ | 97.54 ಮೀ | – | – |
| ಒಟ್ಟು ವಸತಿ ಗೃಹಗಳು | 03 | 15 | 12 |
| ಉತ್ತರ | 9.45 ಮೀ | 12.76 ಮೀ | 3.31 ಮೀ |
| ಅಂತಸ್ತು | 1 + 1 | 1 + 3 | 01 |

ಮೇಲ್ಕಂಡ ನ್ಯೂನ್ಯತೆಗಳಿಂದ ಕೂಡಿರುವ ನಿಯಮಗಳನ್ನು ಹಾಗೂ ಉಲ್ಲಂಘನೆ ಮಾಡಿರುವ ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಹೆಚ್ಚುವರಿಯಾಗಿ ನಿರ್ಮಾಣ ಮಾಡಿರುವ ಕಟ್ಟಡದ ಭಾಗವನ್ನು ನಿಯಮಾನುಸಾರ ದಂಡ ಶುಲ್ಕವನ್ನು ಪಾವತಿಸಿಕೊಂಡು ಕಟ್ಟಡದ ಅನದೀಕೃತವಾಗಿ ನಿರ್ಮಿಸಿರುವ (ಉಲ್ಲಂಘಿತ) ಭಾಗವನ್ನು ಸಕ್ರಮ ಮಾಡುವಂತೆ, ಹಾಗೂ ಸರ್ಕಾರವು ಸಕ್ರಮ ಯೋಜನೆಯಡಿ ಮುಂದಕ್ಕೆ ನೀಡುವ ಆದೇಶದಂತೆ ಕಾನೂನಿನ ವ್ಯಾಪ್ತಿಯಲ್ಲಿ ಸಕ್ರಮಗೊಳಿಸಿಕೊಳ್ಳಲು ಅಥವಾ ಸಕ್ರಮ ಸಾಧ್ಯವಾಗದಿದ್ದಲ್ಲಿ ಅನದೀಕೃತವಾಗಿ ನಿರ್ಮಾಣ ಮಾಡಿರುವ ಭಾಗವನ್ನು ತೆರವುಗೊಳಿಸಲು ಬದ್ದರಾಗುವುದಾಗಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ, ಆದರಂತೆ ಅನದೀಕೃತವಾಗಿ ನಿರ್ಮಾಣ ಮಾಡಿರುವ ಕಟ್ಟಡದ ಭಾಗಕ್ಕೆ ದಂಡಶುಲ್ಕವನ್ನು ಪಾವತಿಸಿಕೊಳ್ಳಲು ನಿಯಮಾನುಸಾರ ಅವಕಾಶವಿರುವುದಿಲ್ಲ, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ವಿಷಯದಲ್ಲಿ ತಿಳಿಸಿರುವ ಅಸೆಸ್‌ಮೆಂಟ್ ನಂಬರಿನಲ್ಲಿನ ವಸತಿ ಕಟ್ಟಡ ನಿರ್ಮಿಸಲು ವಲಯ ನಿಯಮಾವಳಿಯನ್ವಯ ಕವರೇಜ್, ಎಫ್‌ಎಆರ್ ಕಟ್ಟಡದ ಎತ್ತರ ಹಾಗೂ ಸೆಟ್ ಬ್ಯಾಕ್‌ಗಳನ್ನು ಪರಿಶೀಲಿಸಿ ನಕ್ಷೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡಿ ಪರವಾನಗಿ ಸಂಬಂಧ ನಗರಸಭೆಗೆ ಕಳುಹಿಸಿಕೊಡಲಾಗಿತ್ತು, ಅನುಮೋದಿತ ನಕ್ಷೆಯಲ್ಲಿ ಕವರೇಜ್‌ನ್ನು 39.49 % ಕ್ಕೆ ಎಫ್‌ಎಆರ್‌ನ್ನು 1.18 ಗೆ ಕಟ್ಟಡದ ಎತ್ತರವನ್ನು 9.45 ಮೀಟರ್‌ಗೆ ನಿಗದಿಪಡಿಸಲಾಗಿದೆ ಹಾಗೂ ಮುಂಭಾಗದಲ್ಲಿ 6.0 ಮೀ, ಎಡಭಾಗದಲ್ಲಿ 3.0 ಮೀ ಮತ್ತು ಬಲಭಾಗದಲ್ಲಿ 3.0 ಮೀ ಸೆಟ್‌ಬ್ಯಾಕ್‌ಗಳನ್ನು ತೋರಿಸಲಾಗಿದೆ, ಆದರೆ ಕಟ್ಟಡವನ್ನು ಪರಿಶೀಲಿಸಿದಾಗ ಕವರೇಜ್ 82.25, ಎಫ್‌ಎಆರ್ 2.46 ಹಾಗೂ ಕಟ್ಟಡದ ಎತ್ತರ 12.76 ಮೀಟರ್ ಇರುತ್ತದೆ, ಮುಂಭಾಗದಲ್ಲಿ 0.91 ಮೀಟರ್, ಹಿಂಭಾಗದಲ್ಲಿ 1.05 ಮೀಟರ್, ಸೆಟ್ ಬ್ಯಾಕ್‌ನ್ನು ಬಿಟ್ಟಿರುತ್ತಾರೆ, ಹಾಲಿ ಕಟ್ಟಡವು ಅನುಮೋದಿತ ನಕ್ಷೆಯನ್ವಯ ನಿರ್ಮಾಣವಾಗಿರುವುದಿಲ್ಲ, ವಲಯ ನಿಯಮಾವಳಿಗಳ ಉಲ್ಲಂಘನೆಯಾಗಿರುತ್ತದೆ, ಅರ್ಜಿದಾರರ ಕೋರಿಕೆಯಂತೆ ಪರಿಷ್ಕೃತ ನಕ್ಷೆಗಳನ್ನು ಅನುಮೋದಿಸಲು ವಲಯ ನಿಯಮಾವಳಿಗಳಲ್ಲಿ ಅವಕಾಶ ಇರುವುದಿಲ್ಲ, ವಿಷಯವನ್ನು ಪ್ರಾಧಿಕರದ ಸಭೆಯಲ್ಲಿ ಮಂಡಿಸಿ, ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ವಿಷಯ ಮತ್ತು ಟಿಪ್ಪಣಿಯಲ್ಲಿ ವಿವರಿಸಿರುವಂತೆ ಕಟ್ಟಡ ನಿರ್ಮಾಣದ ನಕ್ಷೆಯನ್ನು ಸಂಪೂರ್ಣವಾಗಿ ಉಲ್ಲಂಘಿಸಿ ಬಹುಮನೆಗಳ ಕಟ್ಟಡ (ಒಟ್ಟು 15 ಮನೆಗಳು) ನಿರ್ಮಾಣ ಹಂತದಲ್ಲಿದ್ದು, ಈ ಬಗ್ಗೆ ಇದನ್ನು ಸಕ್ರಮಗೊಳಿಸಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲವೆಂದು ತಾಂತ್ರಿಕ ಅಭಿಪ್ರಾಯ ನೀಡಲಾಗಿದ್ದು ನಿರ್ಮಾಣ ಕಾರ್ಯ ಸ್ಥಗಿತಗೊಳಿಸಿ ಕಟ್ಟಡವನ್ನು ತೆರವುಗೊಳಿಸಲು ಮಾಲಿಕರಿಗೆ ನೋಟೀಸ್ ನೀಡಲಾಗಿದೆ ಎಂದು ಆಯುಕ್ತರು ಸಭೆಗೆ ತಿಳಿಸಿದರು, ಸದಸ್ಯರು ಈ ಬಗ್ಗೆ ಮಾತನಾಡಿ ಇದು 5 ಅಂತಸ್ತಿನ ಕಟ್ಟಡವಾಗಿದ್ದು ಒಟ್ಟು 45 ಮನೆಗಳು ನಿರ್ಮಾಣವಾಗಿರುತ್ತವೆ ಎಂದು ತಿಳಿಸಿದರು, ನಗರ ಯೋಜನಾ ಸದಸ್ಯರು ಮಾತನಾಡಿ ತಮ್ಮ ಸ್ಥಳ ಪರಿಶೀಲನೆ ಸಂದರ್ಭದಲ್ಲಿ, ಕೇವಲ 3 ಅಂತಸ್ತು ಮತ್ತು 15 ಮನೆಗಳು ಮತ್ತು ಕೆಳಗೆ ಸಂಪೂರ್ಣ ಪಾರ್ಕಿಂಗ್ ವ್ಯವಸ್ಥೆಗೆ ಖಾಲಿ ಬಿಟ್ಟಿರುವುದಾಗಿ ತಿಳಿಸಿದರು ಈ ಬಗ್ಗೆ ಮಾಲೀಕರು ಮತ್ತೊಮ್ಮೆ ಮನವಿ ನೀಡಿದ್ದು ಕಟ್ಟಡವನ್ನು ಸಕ್ರಮಗೊಳಿಸಿ ಅವಶ್ಯವಿರುವ ದಂಡ ಶುಲ್ಕ ಪಾವತಿಸಲು ಸಿದ್ದವಿರುವುದಾಗಿ ತಿಳಿಸಿರುತ್ತಾರೆ, ಆದರೆ ಸದ್ಯಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲವೆಂದು ಆಯುಕ್ತರು ಸಭೆಗೆ ತಿಳಿಸಿದರು, ಜಿಲ್ಲಾಧಿಕಾರಿಗಳು ಮಾತನಾಡಿ ಸ್ಥಳ ಪರಿಶೀಲನೆ ನಡೆಸಿ 5 ಅಂತಸ್ತಿನ ಕಟ್ಟಡ ನಿರ್ಮಾಣವಾಗಿದ್ದಲ್ಲಿ ಕಟ್ಟಡವನ್ನು ತೆರವುಗೊಳಿಸಲು ಅಥವಾ 3 ಅಂತಸ್ತು ಇದ್ದಲ್ಲಿ ಕಾನೂನಿನ ಅಡಿಯಲ್ಲಿ ಪರಿಷ್ಕೃತ ಪರವಾನಗಿ ನೀಡಲು ನಗರಸಭೆಗೆ ಕೋರಿ ನಂತರ ಸೂಕ್ತ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು.

**ವಿಷಯ ನಂ 6.**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯ ಸಿವಿಲ್ ಕಾಮಗಾರಿಗಳ ಟೆಂಡರನ್ನು ದಿನಾಂಕ: 18-05-2009. ರಂದು ತೆರೆದಿದ್ದು ದರಗಳನ್ನು ಅನುಮೋದಿಸುವ ಬಗ್ಗೆ ಹಾಗೂ ಕಾಮಗಾರಿಗಳಿಗೆ ಕಾರ್ಯಾದೇಶ ನೀಡುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯ ಸಿವಿಲ್ ಕಾಮಗಾರಿಗಳ ಟೆಂಡರ್ ಕರೆದಿದ್ದು ಸದರಿ ಟೆಂಡರನ್ನು ದಿನಾಂಕ: 18-05-2009. ರಂದು ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗಿದೆ ಆದರಂತೆ ಟೆಂಡರ್ ಸಲ್ಲಿಸಿರುವ ಕೆಲವು ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಿಂದ ಅನುಮೋದನೆಯಾಗಿರುವ ದರದಂತೆ ನಮೂದಿಸಿದ್ದು, ಇನು ಕೆಲವು ಗುತ್ತಿಗೆದಾರರು ಎಸ್. ಆರ್. ದರಕ್ಕಿಂತ ಹೆಚ್ಚಿಗೆ ಹಾಗೂ ಕಡಿಮೆ ದರಕ್ಕೆ ನಮೂದಿಸಿರುತ್ತಾರೆ, ಆದುದರಿಂದ ಗುತ್ತಿಗೆದಾರರು ನಮೂದಿಸಿರುವ ದರವನ್ನು ಅಂಗೀಕರಿಸಲು ಮತ್ತು ಗುತ್ತಿಗೆದಾರರಿಗೆ ಕಾಮಗಾರಿಯನ್ನು ನಿರ್ವಹಿಸಲು ಕಾರ್ಯದೇಶ ನೀಡಬೇಕಾಗಿರುತ್ತದೆ, ಹಾಗೂ ಒಂದು ಕಾಮಗಾರಿಗೆ ಯಾವ ಗುತ್ತಿಗೆದಾರರು ಟೆಂಡರ್ ಹಾಕಿರುವುದಿಲ್ಲ ಹಾಗಾಗಿ ಸದರಿ ಕಾಮಗಾರಿಯನ್ನು ಮತ್ತೊಮ್ಮೆ ಟೆಂಡರ್ ಕರೆದು ಕಾಮಗಾರಿ ನಿರ್ವಹಿಸುವುದು ಅದಿಕ ವೆಚ್ಚವಾಗುವುದರಿಂದ ಕೆಲವು ಅಗತ್ಯ ಮತ್ತು ಮುಖ್ಯವಾಗಿ ತುರ್ತಾಗಿ ಮಾಡಬೇಕಾಗಿರುವ ಕಾಮಗಾರಿಗಳನ್ನು ಪ್ರಾಧಿಕಾರದ ಕಛೇರಿಯಿಂದಲೇ ಪೀಸ್ ವರ್ಕ್ ಟೆಂಡರ್ ಆದಾರದ ಮೇಲೆ ಕೆಲಸ ನಿರ್ವಹಿಸಲು ವಿಷಯವನ್ನು ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ವಹಿಸಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣ ನಗರ ವಸತಿ ಬಡಾವಣೆಯಲ್ಲಿ 17 ಎಕರೆ 37½ ಗುಂಟೆ ಜಮೀನಿನಲ್ಲಿ ವಸತಿ ಯೋಜನೆ ನಿರ್ಮಾಣ ಮಾಡಲು ಈಗಾಗಲೇ 82 ವಿವಿದ ಸಿವಿಲ್ ಕಾಮಗಾರಿಗಳನ್ನು ವಿಭಜಿಸಿ ಟೆಂಡರ್ ಕರೆಯಲಾಗಿತ್ತು, ಈ ರೀತಿ ಕಾಮಗಾರಿಗಳನ್ನು ವಿಭಜಿಸಿ ಕಾಮಗಾರಿಯನ್ನು ನಿರ್ವಹಿಸಿದರೆ ಕಾಮಗಾರಿಯ ಗುಣಮಟ್ಟ ಕಳಪೆಯಾಗಬಹುದೆಂದು ಸಭೆಯಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ವಿಧಾನ ಸಭಾ ಸದಸ್ಯರು ಶಂಕೆ ವ್ಯಕ್ತಪಡಿಸಿದರು ಕೆಲವು ಕಾಮಗಾರಿಗಳಿಗೆ ಎಸ್. ಆರ್. ದರಕ್ಕಿಂತ ಶೇಕಡ 18 ರಷ್ಟು ಕಡಿಮೆ ಮೊತ್ತಕ್ಕೆ ಟೆಂಡರ್ ದರ ನಮೂದಿಸಿರುತ್ತಾರೆ, ಅದೇ ಬೆಲೆಗೆ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲು ಒಪ್ಪಿಗೆ ಪಡೆಯುವುದು ತಪ್ಪಿದಲ್ಲಿ, ಈಗಾಗಲೇ 82 ಕಾಮಗಾರಿಗಳಿಗೆ ಟೆಂಡರ್ ಕರೆದು ಟೆಂಡರ್ ಫಾರಂ ಸ್ವೀಕರಿಸಿರುವ ಟೆಂಡರ್ ಅರ್ಜಿಗಳನ್ನು ರದ್ದುಗೊಳಿಸಿ ಕಾಮಗಾರಿಯು ಉತ್ತಮ ಗುಣಮಟ್ಟ ಕಾಪಾಡಲು ಪ್ಯಾಕೇಜ್ ಟೆಂಡರ್ ಕರೆಯುವಂತೆ ಸಭೆಗೆ ಸಲಹೆ ನೀಡಿದರು, ನಂತರ ಸಭೆಯು ಅದಕ್ಕೆ ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 05-09-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 4 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 8 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 9 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 10 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ನಗರ ಯೋಜನಾ ಸದಸ್ಯರು) | ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. | ಸದಸ್ಯರು |
| 12 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 13 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 14 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 15 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 2 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. | ಸದಸ್ಯರು |
| 3 | ಸೈಂಟಿಫಿಕ್ ಆಫೀಸರ್,<br>ಪ್ರಕೃತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | ಸದಸ್ಯರು |
| 4 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ವಿಷಯ ನಂ 1.**

ದಿನಾಂಕ: 23-05-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 23-05-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ:**

ದಿನಾಂಕ: 23-05-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಣಕ್ಕೆ ಮಂಡಿಸಲಾಯಿತು. ಸದರೀ ಸಭೆಯ ತೀರ್ಮಾನಗಳನ್ನು ಪುನಃ ಚರ್ಚಿಸಿ ಈ ಕೆಳಕಂಡ ಬದಲಾವಣೆಗಳೊಂದಿಗೆ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ. 3, 5, 6, 10, 11, 12 ರಲ್ಲಿ ಏಕ ನಿವೇಶನ ಅನುಮೋದನೆಗೆ ಪರಿಗಣಿಸುವ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಈ ಬಗ್ಗೆ ರಸ್ತೆ ಮತ್ತು ಚರಂಡಿ ಮತ್ತು ಇತರೆ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಆಯಾ ಇಲಾಖೆಗಳ ಅಂದಾಜು ದರಪಟ್ಟಿಯಂತೆ ಹಣ ಪಾವತಿಸಿದ ನಂತರ ನಗರ ಸಭೆಯಲ್ಲಿ ಖಾತೆಯನ್ನು ಮಾಡಿಕೊಡುವ ಬಗ್ಗೆ ಸ್ಪಷ್ಟವಾದ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಭಯು ತೀರ್ಮಾನಿಸಿತು. ಏಕ ನಿವೇಶನ ಅನುಮೋದನೆಗೆ ಸಂಬಂಧಪಟ್ಟಂತೆ, ನಗರ ಯೋಜನಾ ಸದಸ್ಯರು ಮಾತನಾಡಿ, ಸಂಬಂಧಪಟ್ಟ ಭೂಮಿಯು ಅನಧಿಕೃತ ಮತ್ತು ಅಕ್ರಮ ವಿಭಾಗ ಆಗಿದ್ದಲ್ಲಿ ಏಕ ನಿವೇಶನ ಅನುಮೋದನೆ ನೀಡುವ ಸಂಬಂದ ಸರ್ಕಾರದಿಂದ ಸೂಕ್ತ ಮಾರ್ಗದರ್ಶನ ಇರುವುದಿಲ್ಲ. ಈ ಹಿಂದೆ ಕೆಲವು ಅನಧಿಕೃತ ಬಡಾವಣೆಗಳು ನಿರ್ಮಾಣವಾಗಿ ಹಲವು ಏಕ ನಿವೇಶನ ಅನುಮೋದನೆ ಮತ್ತು ಖಾತೆ ಮತ್ತು ಮನೆ ನಿರ್ಮಾಣ ಸಹ ಆಗಿರುತ್ತದೆ. ಅಂತಹ ಬಡಾವಣೆಗಳಲ್ಲಿ ಉಳಿದ ನಿವೇಶನಗಳಿಗೆ ಅನುಮೋದನೆಗಾಗಿ ಸಾರ್ವಜನಿಕರಿಂದ ತೀವ್ರತರವಾದ ಒತ್ತಡವಿರುತ್ತದೆ ಎಂದು ತಿಳಿಸಿದರು ಇದಕ್ಕೆ ಸಂಬಂಧಿಸಿದ ರಸ್ತೆಗಳು 30 ಅಡಿಗಳಿಗಿಂತ ಕಡಿಮೆ ಇರುತ್ತದೆ. ಅಂತಹ ಪ್ರಕರಣಗಳಲ್ಲಿ ಭೂ ಅನ್ಯಕ್ರಾಂತ ಆಗಿದ್ದಲ್ಲಿ, ಕನಿಷ್ಠ 30 ಅಡಿಗಳ ರಸ್ತೆಯ ಮಾರ್ಜಿನ್ ಗುರುತಿಸಿ, ಮೇಲಿನ ತೀರ್ಮಾನದಂತೆ ನಿವೇಶನ ಅನುಮೋದನೆ ಮಾಡುವ ಪದ್ದತಿ ಪಾಲಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಬಗ್ಗೆ ಮಾನ್ಯ ಶಾಸಕರು ಹಾಗೂ ಜಿಲ್ಲಾಧಿಕಾರಿಗಳವರು ಮಾತನಾಡಿ ಇಂತಹ ಅನಧಿಕೃತ ಬಡಾವಣೆಗಳಲ್ಲಿ ಎಲ್ಲಾ ನಿವೇಶನಗಳ ಮಾಲೀಕರಿಂದ ಬಡಾವಣೆಗೆ ಸಂಬಂಧಿಸಿದ ರಸ್ತೆಗಳನ್ನು (ಕನಿಷ್ಠ 30 ಅಡಿ) ಪ್ರಾಧಿಕಾರಕ್ಕೆ ನೋಂದಣಿ ಮಾಡಿಕೊಡತಕ್ಕದ್ದು ಮತ್ತು ಸಂಬಂಧಿಸಿದ ರಸ್ತೆ ಮತ್ತು ಚರಂಡಿ ಹಾಗೂ ಇತರೆ ಮೂಲ ಭೂತ ಸೌಕರ್ಯಗಳ ಅಭಿವೃದ್ಧಿ ಮಾಡಿಸಲು ತಗಲುವ ವೆಚ್ಚದ ಅಂದಾಜು ಪಟ್ಟಿಯಂತೆ ನಗರಸಭೆಗೆ ಪಾವತಿಸಿದ ನಂತರ ಅಥವಾ ನಿಯಮಾನುಸಾರ ಅಭಿವೃದ್ಧಿ ಪಡಿಸಿದ ನಂತರ ಖಾತೆ ತೆರೆಯುವ ಷರತ್ತಿನೊಂದಿಗೆ ನಿವೇಶನ ಅನುಮೋದನೆಗೆ, ಕ್ರಮ ಕೈಗೊಳ್ಳಬಹುದೆಂದು ಅಭಿಪ್ರಾಯ ಪಟ್ಟರು ಬಡಾವಣೆಯ ಎಲ್ಲ ನಿವೇಶನದಾರರು ಜವಬ್ದಾರಿ ವಹಿಸಿಕೊಂಡಲ್ಲಿ ಮಾತ್ರ ಅಂತಹ ಬಡಾವಣೆ ನಿವೇಶನಗಳಿಗೆ ಕಾನೂನಿನ ವ್ಯಾಪ್ತಿಯಲ್ಲಿ ಅನುಮೋದನೆಗೆ ಕ್ರಮವಹಿಸಲು ಸಭೆಯು ತೀರ್ಮಾನಿಸಿತು.

ಇತರೆ ವಿಷಯ ಸಂಖ್ಯೆ. (1) ರಲ್ಲಿ ಈ ಹಿಂದೆ ನಿರ್ಧರಿಸಿದಂತೆ ಗವನಹಳ್ಳಿ, ರಾಮನಹಳ್ಳಿ ಜೊತೆಗೆ ಶಾಂತಿನಗರ ಪ್ರದೇಶದಲ್ಲಿ ಬಸ್‌ಶೆಲ್ಟರ್‌ಗಳನ್ನು ನಿರ್ಮಾಣ ಮಾಡಲು ಸಭೆಯು ತೀರ್ಮಾನಿಸಿತು. ಉಳಿದಂತೆ, ಹಿಂದಿನ ಸಭೆಯ ಎಲ್ಲಾ ನಡವಳಿಗಳನ್ನು ಸ್ಥಿರೀಕರಿಸಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ ನಂ 2.**

2009 ನೇ ಸಾಲಿನ ಮೇ, ಜೂನ್ ಮತ್ತು ಜುಲೈ ಮಾಹೆಗಳ ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

2009 ನೇ ಸಾಲಿನ ಮೇ, ಜೂನ್ ಮತ್ತು ಜುಲೈ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1, ಅನುಬಂಧ–2, ಮತ್ತು ಅನುಬಂಧ–3 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ:**

2009 ನೇ ಸಾಲಿನ ಮೇ, ಜೂನ್ ಮತ್ತು ಜುಲೈ ಮಾಹೆಗಳ ಅನುಬಂಧ –1, ಅನುಬಂಧ –2, ಮತ್ತು ಅನುಬಂಧ – 3 ರಲ್ಲಿ ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಿ ಲೆಕ್ಕಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆಗಾಗಿ ಕೋರಿ ಬಂದಿರುವ ವಿವಿಧ ಸಂಘ ಸಂಸ್ಥೆಗಳು ಹಾಗೂ ಸರ್ಕಾರಿ ಕಛೇರಿಗಳಿಗೆ ನಾಗರೀಕ ಸೌಲಭ್ಯ ನಿವೇಶನಗಳನ್ನು (ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳು 1991 ರ ಅನ್ವಯ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ :**

**ಅ)** ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ನಾಗರೀಕ ಸೌಲಭ್ಯ ನಿವೇಶನ ಮಂಜೂರಾತಿ ಕೋರಿ. 1) ಬನಶಂಕರಿ ಮಹಿಳಾ ಸಮಾಜ, ಚಿಕ್ಕಮಗಳೂರು ರವರು ಹಿರೇಮಗಳೂರು ವಸತಿ ಬಡಾವಣೆಯ ನಿವೇಶನ ನಂ. 171 ರಲ್ಲಿ ಒಟ್ಟು 110.51 ಚದರ ಮೀಟರ್ ಹಾಗೂ ನಿವೇಶನ ನಂ. 172 ರಲ್ಲಿ 111.41 ಚದರ ಮೀಟರ್ ಅಳತೆಯ ಒಟ್ಟು 221.92 ಚದರ ಮೀಟರ್ ಅಳತೆಯ 2 ನಿವೇಶನಗಳನ್ನು ಸಂಘ ಸಂಸ್ಥೆಯ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಕೋರಿ ದಿನಾಂಕ: 02-02-2009 ರಂದು ಅರ್ಜಿ ಸಲ್ಲಿಸಿರುವ ಬಗ್ಗೆ.

**ಟಿಪ್ಪಣಿ:**

ಸದರೀ ಸಂಘದವರು ಮೇಲಿನ ನಿವೇಶನಗಳ ಹಂಚಿಗೆಗಾಗಿ ಈ ಗಾಗಲೇ ಈ ಹಿಂದೆ ಅರ್ಜಿ ಸಲ್ಲಿಸಿ ಶೇಕಡ 10 ರ ನಿವೇಶನ ಮೊತ್ತವನ್ನು ಪಾವತಿಸಿರುತ್ತಾರೆ. ಆದ್ದರಿಂದ ನಿಯಮಾನುಸಾರ ಸಂಘದಿಂದ ವಿವರ ಪಡೆದು ನಿವೇಶನ ಹಂಚಿಕೆ ಮಾಡಲು ಸಭೆಯ ಮುಂದೆ ವಿಷಯವನ್ನು ಮಂಡಿಸಿದೆ.

**ಆ)** ಸಹಾಯಕ ನಿರ್ದೇಶಕರು ನಗರ ಯೋಜನಾ ಇಲಾಖೆ ಚಿಕ್ಕಮಗಳೂರು ರವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 503 / 1, 2, 3, 4, 504 / 7, 8, 505 / 1, 2, 3, 4, 506 / 21, 507 / 1P ಹಾಗೂ 508 ರಲ್ಲಿ ಅನುಮೋದನೆಗೊಂಡಿರುವ ವಿನ್ಯಾಸದಲ್ಲಿ 30.48 x 32.75 ಮೀಟರ್ ಅಳತೆ ಒಟ್ಟು 998.22 ಚದರ ಮೀಟರ್ ಅಳತೆ ನಾಗರೀಕ ಸೌಲಭ್ಯದ ನಿವೇಶನವನ್ನು ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಕೋರಿ ದಿನಾಂಕ: 09-06-2009 ರಂದ ಅರ್ಜಿ ಸಲ್ಲಿಸಿರುವ ಬಗ್ಗೆ.

**ಟಿಪ್ಪಣಿ:**

ನಿಯಮಾನುಸಾರ ಶೇಕಡ 50 ರಷ್ಟು ಹಣ ಪಾವತಿಸಿಕೊಂಡು ಕಛೇರಿ ಕಟ್ಟಡ ನಿರ್ಮಾಣ ಮಾಡಲು ನಿವೇಶನ ಹಂಚಿಕೆ ಮಾಡಲು ಸಭೆಯ ಮುಂದೆ ವಿಷಯವನ್ನು ಮಂಡಿಸಿದೆ.

**ಇ)** ಕಾರ್ಯದರ್ಶಿ, ರಚಿತ ಮಹಿಳಾ ಸಮಾಜ (ರಿ) ಚಿಕ್ಕಮಗಳೂರು ರವರು ತಮ್ಮ ಸಂಸ್ಥೆ ಕಟ್ಟಡ ನಿರ್ಮಾಣಕ್ಕಾಗಿ ಒಂದು ನಾಗರೀಕ ಸೌಲಭ್ಯವನ್ನು ಉಚಿತವಾಗಿ ನೀಡುವಂತೆ ದಿನಾಂಕ: 22-01-2009 ರಂದು ಮನವಿ ಸಲ್ಲಿಸಿರುವ ಬಗ್ಗೆ.

**ಟಿಪ್ಪಣಿ:**

ನಿಯಮಾನುಸಾರ ನಾಗರೀಕ ಸೌಲಭ್ಯ ಹಂಚಿಕೆ ನಿಯಮ 1991 ರ ಅನ್ವಯ ಉಚಿತವಾಗಿ ನಿವೇಶನ ಹಂಚಿಕೆ ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಈ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಲಾಗಿದೆ.

**ಈ)** ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ) ಚಿಕ್ಕಮಗಳೂರು ರವರು ಸಂಘದ ಕಟ್ಟಡ ನಿರ್ಮಿಸಲು 100 x 100 ಅಡಿಗಳ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಮಾಡುವಂತೆ ಕೋರಿರುವ ಬಗ್ಗೆ.

**ಟಿಪ್ಪಣಿ:**

ನಿವೇಶನಗಳ ಬಗ್ಗೆ ಜಾಹಿರಾತು ನೀಡಿ ನಿಯಮಾನುಸಾರ ಅರ್ಜಿ ಸಲ್ಲಿಸಿದಾಗ ಅರ್ಹತೆ ಮೇರೆಗೆ ಹಂಚಿಕೆಗೆ ಪರಿಗಣಿಸಬಹುದು. ಈ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಲಾಗಿದೆ.

**ಉ)** ಮೇ|| ಇಂಡಿಯನ್ಸ್ ಮೆಡಿಕಲ್ ಅಸೋಸಿಯೇಟ್ಸ್ ಸಂಸ್ಥೆ ಚಿಕ್ಕಮಗಳೂರು ಹಾಗೂ ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಚಿಕ್ಕಮಗಳೂರು ರವರಿಗೆ ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಕ್ರಮವಾಗಿ ಮೇ|| ಇಂಡಿಯನ್ ಮೆಡಿಕಲ್ ಅಸೋಶಿಯೇಟ್ಸ್ ಸಂಸ್ಥೆಯವರಿಗೆ 830.52 ಚದರ ಮೀಟರ್ ಅಳತೆಯ ಹಾಗೂ ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಚಿಕ್ಕಮಗಳೂರು ರವರಿಗೆ 684.00 ಚದರ ಮೀಟರ್ ಅಳತೆಯ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಮಾಡಿ ಚದರ ಮೀಟರ್ ಒಂದಕ್ಕೆ ರೂ. 1722.00 ರಂತೆ (ಚದರ ಅಡಿ ಒಂದಕ್ಕೆ ರೂ. 160.00 ರಂತೆ) ಹಂಚಿಕೆ ಮಾಡಿ ಆದೇಶ ನೀಡಲಾಗಿದ್ದು ಎರಡೂ ಸಂಸ್ಥೆಯವರೂ ಈಗಾಗಲೇ ಶೇಕಡ 10 ರಷ್ಟು ಮೊತ್ತ ಪಾವತಿಸಿದ್ದು, ಸದರೀ ನಿವೇಶನಕ್ಕೆ ನಿಗದಿಗೊಳಿಸಿರುವ ದರವು ಉಪನೊಂದಣಾಧಿಕಾರಿಗಳು ಚಿಕ್ಕಮಗಳೂರು ರವರು ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಾಗಿರುತ್ತದೆಯೆಂದು ತಿಳಿಸಿ ಸ್ವಲ್ಪ ದರವನ್ನು ಕಡಿಮೆ ಮಾಡಿಕೊಡುವಂತೆ ಕೋರಿ ಪುನಃ ಮನವಿ ನೀಡಿರುವ ಬಗ್ಗೆ.

**ಟಿಪ್ಪಣಿ:**

ನಿಯಮಾನುಸಾರ ಉಪನೊಂದಣಾಧಿಕಾರಿ ಕಛೇರಿ ದರದಂತೆ ಅಂದರೆ ಪ್ರತಿ ಅಡಿಗೆ ರೂ. 90=00 ರಂತೆ ಪುನಃ ದರ ಪರಿಷ್ಕರಿಸಬಹುದಾಗಿದ್ದು, ಈ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ಊ)** ಅಧ್ಯಕ್ಷರು ಜಿಲ್ಲಾ ಒಕ್ಕಲಿಗರ ಮಹಿಳಾ ಸಂಘ (ರಿ) ವಿಜಯಪುರ ಚಿಕ್ಕಮಗಳೂರು ರವರು ಸಂಘ ಸಂಸ್ಥೆ ಕಟ್ಟಡ ನಿರ್ಮಾಣಕ್ಕಾಗಿ ಒಂದು ದೊಡ್ಡದಾದ ನಾಗರೀಕ ಸೌಕರ್ಯದ ನಿವೇಶನ ಹಂಚಿಕೆ ಮಾಡಲು ದಿನಾಂಕ: 17-08-2009 ರಂದು ಮನವಿ ಸಲ್ಲಿಸಿರುವ ಬಗ್ಗೆ.

**ಟಿಪ್ಪಣಿ:**

ವಿವಿದ ಉದ್ದೇಶಗಳಿಗೆ ಮೀಸಲಿಟ್ಟು ಜಾಹಿರಾತು ನೀಡಿದ ಸಂದರ್ಭದಲ್ಲಿ ನಿಯಮಾನುಸಾರ ಅರ್ಜಿ ಸಲ್ಲಿಸಿದಲ್ಲಿ, ಸದರೀ ಸಂಸ್ಥೆಗೆ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಲಭ್ಯವಿರುವ ಒಂದು ನಾಗರೀಕ ಸೌಕರ್ಯದ ನಿವೇಶನ ಹಂಚಿಕೆಗೆ ಪರಿಗಣಿಸಬಹುದು. ಈ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ,

**ಋ)** ಶ್ರೀ ಕುಮಾರ್ ರವರು ಮೆ|| ಸನ್ ಆಟೋವರ್ಕ್ಸ್ ಮಾಲೀಕರು ಇವರು ಒಂದು ಅರ್ಜಿ ಸಲ್ಲಿಸಿ ಹಲವಾರು ವರ್ಷಗಳಿಂದ ಚಿಕ್ಕಮಗಳೂರು ನಗರದಲ್ಲಿ ಬಾಡಿಗೆ ಪ್ರದೇಶದಲ್ಲಿ ಗ್ಯಾರೇಜ್ ನಡೆಸುತ್ತಿದ್ದು ಈಗ ಸ್ವಂತ ನಿವೇಶನದಲ್ಲಿ ಗ್ಯಾರೇಜ್ ಮತ್ತು ಬಡ ಮಕ್ಕಳಿಗೆ ತರಬೇತಿ ಕೇಂದ್ರ ಆರಂಭಿಸಲು ಸೂಕ್ತ ನಿವೇಶನದ ಅವಶ್ಯಕತೆ ಇರುತ್ತದೆ. ಆದ್ದರಿಂದ ಉಪ್ಪಳ್ಳಿಯಲ್ಲಿ ಗ್ಯಾರೇಜ್ ಮತ್ತು ಬಡ ಮಕ್ಕಳಿಗೆ ತರಬೇತಿ ಕೇಂದ್ರಕ್ಕಾಗಿ ನಿವೇಶನ ನೀಡಲು ಮನವಿ ಮಾಡಿರುವ ಬಗ್ಗೆ.

**ಟಿಪ್ಪಣಿ:**

ನಿಯಮಾನುಸಾರ ಪ್ರಕಟಣೆ ನೀಡಿದ ಸಂದರ್ಭದಲ್ಲಿ ಅರ್ಜಿ ಸಲ್ಲಿಸಿದರೆ ನಿವೇಶನ ಹಂಚಿಗೆ ಬಗ್ಗೆ ಪರಿಗಣಿಸಲಾಗುವುದು. ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಹಂಚಿಕೆಯಾಗಬೇಕಾಗಿರುವ ಹಾಲಿ ಖಾಲಿ ಇರುವ ನಾಗರೀಕ ಸೌಕರ್ಯದ ನಿವೇಶನಗಳ ವಿವರಗಳನ್ನು ಈ ಕೆಳಕಂಡಂತಿದ್ದು, ಅವುಗಳ ಉಪಯೋಗ ಬದಲಾವಣೆ ಮಾಡಿ ಹಂಚಿಕೆ ಮಾಡುವ ಬಗ್ಗೆ ಸಭೆಯ ಮುಂದೆ ವಿಷಯವನ್ನು ಮಂಡಿಸಿದೆ.

**ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಒಡೆತನದಲ್ಲಿರುವ ನಾಗರೀಕ ಸೌಲಭ್ಯದ ಖಾಲಿ ಇರುವ ನಿವೇಶನಗಳ ವಿವರಗಳು.**

| ಕ್ರ. ಸಂ. | ಸರ್ವೆ ನಂ. | ಪ್ರಾಧಿಕಾರದಲ್ಲಿನ ಒಟ್ಟು ಸಿ.ಎ. ಸೈಟುಗಳ ಸಂಖ್ಯೆ. (ಚದರ ಮೀಟರ್‌ಗಳಲ್ಲಿ) | ಈ ಸೈಟಿನ ಪ್ರಸ್ತುತ ಮಾರುಕಟ್ಟೆಯ ಮೌಲ್ಯ (ಚದರ ಮೀಟರ್ ಒಂದಕ್ಕೆ) | ಗುತ್ತಿಗೆ ಮೇರೆಗೆ ಮಂಜೂರಾತಿ ಪಡೆದ ಸಂಸ್ಥೆ / ವ್ಯಕ್ತಿಯ ವಿಳಾಸ ಮಂಜೂರಾತಿ ದಿನಾಂಕ. | ಯಾವ ಉದ್ದೇಶಕ್ಕಾಗಿ ಮಂಜೂರಾತಿ ನೀಡಲಾಗಿದೆ ಮತ್ತು ಗುತ್ತಿಗೆ ಅವದಿ ಮುಕ್ತಾಯಗೊಳ್ಳುವ ದಿನಾಂಕ. | ಯಾವ ಉದ್ದೇಶಕ್ಕೆ ಬದಾವಣೆ ಮಾಡಬ ಹುದು. | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | |
| 1 | ಹಿರೇಮಗಳೂರು ಗ್ರಾಮದ ಸ.ನಂ. 318 ಮತ್ತಿತರೆ. | 1024.00 ಚ. ಮೀ. | 1292.00 | ಖಾಲಿ ಇದೆ. | – | – | |
| 2 | | 780.16 ಚ. ಮೀ. | 1292.00 | ಖಾಲಿ ಇದೆ. | – | – | |

| ಕ್ರ.ಸಂ. | ಸರ್ವೆ ನಂ. | ಪ್ರಾಧಿಕಾರದಲ್ಲಿನ ಒಟ್ಟು ಸಿ.ಎ. ಸೈಟುಗಳ ಸಂಖ್ಯೆ. (ಚದರ ಮೀಟರ್‌ಗಳಲ್ಲಿ) | ಈ ಸೈಟಿನ ಪ್ರಸ್ತುತ ಮಾರುಕಟ್ಟೆಯ ಮೌಲ್ಯ (ಚದರ ಮೀಟರ್ ಒಂದಕ್ಕೆ) | ಗುತ್ತಿಗೆ ಮೇರೆಗೆ ಮಂಜೂರಾತಿ ಪಡೆದ ಸಂಸ್ಥೆ / ವ್ಯಕ್ತಿಯ ವಿಳಾಸ ಮಂಜೂರಾತಿ ದಿನಾಂಕ. | ಯಾವ ಉದ್ದೇಶಕ್ಕಾಗಿ ಮಂಜೂರಾತಿ ನೀಡಲಾಗಿದೆ ಮತ್ತು ಗುತ್ತಿಗೆ ಅವದಿ ಮುಕ್ತಾಯಗೊಳ್ಳುವ ದಿನಾಂಕ. | ಯಾವ ಉದ್ದೇಶಕ್ಕೆ ಬಡಾವಣೆ ಮಾಡಬ ಹುದು. | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | |
| 3 | | 110.51 ಚ. ಮೀ. | 1292.00 | ಖಾಲಿ ಇದೆ. | – | – | |
| 4 | | 111.41 ಚ. ಮೀ. | 1292.00 | ಖಾಲಿ ಇದೆ. | – | – | |
| 5 | ಹಿರೇಮಗಳೂರು ಗ್ರಾಮದ ಸ.ನಂ. 318 ಮತ್ತಿತರೆ. | 1160.02 ಚ. ಮೀ. | 1292.00 | ಖಾಲಿ ಇದೆ. | – | – | |
| 6 | | 1603.00 ಚ. ಮೀ. | 1292.00 | ಖಾಲಿ ಇದೆ. | – | – | |

**ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಅನುಮೋದಿಸಿರುವ ಖಾಸಗಿ ರೂಪರೇಖೆಗಳಲ್ಲಿನ ಪ್ರಾಧಿಕಾರದ ನಾಗರೀಕ ಸೌಲಭ್ಯದ ಖಾಲಿ ಇರುವ ನಿವೇಶನಗಳ ವಿವರಗಳು.**

| ಕ್ರ.ಸಂ. | ಸರ್ವೆ ನಂ. | ಪ್ರಾಧಿಕಾರದಲ್ಲಿನ ಒಟ್ಟು ಸಿ.ಎ. ಸೈಟುಗಳ ಸಂಖ್ಯೆ. (ಚದರ ಮೀಟರ್‌ಗಳಲ್ಲಿ) | ಈ ಸೈಟಿನ ಪ್ರಸ್ತುತ ಮಾರುಕಟ್ಟೆಯ ಮೌಲ್ಯ (ಚದರ ಮೀಟರ್ ಒಂದಕ್ಕೆ) | ಗುತ್ತಿಗೆ ಮೇರೆಗೆ ಮಂಜೂರಾತಿ ಪಡೆದ ಸಂಸ್ಥೆ / ವ್ಯಕ್ತಿಯ ವಿಳಾಸ ಮಂಜೂರಾತಿ ದಿನಾಂಕ. | ಯಾವ ಉದ್ದೇಶಕ್ಕಾಗಿ ಮಂಜೂರಾತಿ ನೀಡಲಾಗಿದೆ ಮತ್ತು ಗುತ್ತಿಗೆ ಅವದಿ ಮುಕ್ತಾಯಗೊಳ್ಳುವ ದಿನಾಂಕ. | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಚಿಕ್ಕಮಗಳೂರು ಗ್ರಾಮದ ಸ.ನಂ. 92 / 2 ಮತ್ತಿತರೆ. | 231.08 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 2 | ಉಪ್ಪಳ್ಳಿ ಗ್ರಾಮದ ಸ.ನಂ. 147 / 1, 147 / 2, 147 / 3, 163 ಮತ್ತು 148. | 766.19 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 3 | ಬಸವನಹಳ್ಳಿ ಗ್ರಾಮದ ಸ.ನಂ. 108, 109, 110, 111 ಮತ್ತು 112. | 279.42 ಚ. ಮೀ. | 1884.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 4 | ಬಸವನಹಳ್ಳಿ ಗ್ರಾಮದ ಸ.ನಂ. 108, 109, 110, 111 ಮತ್ತು 112. | 1031.78 ಚ. ಮೀ. | 1884.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 5 | ಬಸವನಹಳ್ಳಿ ಗ್ರಾಮದ ಸ.ನಂ. 108, 109, 110, 111 ಮತ್ತು 112. | 64.97 ಚ. ಮೀ. | 1884.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |

| ಕ್ರ.ಸಂ. | ಸರ್ವೆ ನಂ. | ಪ್ರಾಧಿಕಾರ ದಲ್ಲಿನ ಒಟ್ಟು ಸಿ.ಎ. ಸೈಟುಗಳ ಸಂಖ್ಯೆ. (ಚದರ ಮೀಟರ್‌ಗಳ ‌ಲ್ಲಿ) | ಈ ಸೈಟಿನ ಪ್ರಸ್ತುತ ಮಾರುಕಟ್ಟೆಯ ಮೌಲ್ಯ (ಚದರ ಮೀಟರ್ ಒಂದಕ್ಕೆ) | ಗುತ್ತಿಗೆ ಮೇರೆಗೆ ಮಂಜೂರಾತಿ ಪಡೆದ ಸಂಸ್ಥೆ / ವ್ಯಕ್ತಿಯ ವಿಳಾಸ ಮಂಜೂರಾತಿ ದಿನಾಂಕ. | ಯಾವ ಉದ್ದೇಶಕ್ಕಾಗಿ ಮಂಜೂರಾತಿ ನೀಡಲಾಗಿದೆ ಮತ್ತು ಗುತ್ತಿಗೆ ಅವಧಿ ಮುಕ್ತಾಯಗೊಳ್ಳುವ ದಿನಾಂಕ. | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 6 | ಚಿಕ್ಕಮಗಳೂರು ಗ್ರಾಮದ ಸ.ನಂ. 101, 102P, 102, 103, 104, 105 / 1, 107 ಉಪ್ಪಳ್ಳಿ 193, 194, 195. | 1170.24 ಚ. ಮೀ. | 1938.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 7 | ಚಿಕ್ಕಮಗಳೂರು ಗ್ರಾಮದ ಸ.ನಂ. 101, 102P, 102, 103, 104, 105 / 1, 107 ಉಪ್ಪಳ್ಳಿ 193, 194, 195. | 2969.91 ಚ. ಮೀ. | 1938 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 8 | ಚಿಕ್ಕಮಗಳೂರು ಗ್ರಾಮದ ಸ.ನಂ. 55 / 2. | 235.34 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 9 | ಚಿಕ್ಕಮಗಳೂರು ಗ್ರಾಮದ ಸ.ನಂ. 55 / 2. | 97.93 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 10 | ಚಿಕ್ಕಮಗಳೂರು ಗ್ರಾಮದ ಸ.ನಂ. 55 / 2. | 204.30 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 11 | ಹಿರೇಮಗಳೂರು ಗ್ರಾಮದ ಸ.ನಂ. 506 / 2B, 507 / 1, 508 / 2, 505 / 2, 505 / 3, 505 / 1, 504 / 8, 503 / 1, 2, 4, 504 / 4, 504 / 7. | 465.86 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 12 | ಹಿರೇಮಗಳೂರು ಗ್ರಾಮದ ಸ.ನಂ. 506 / 2B, 507 / 1, 508 / 2, 505 / 2, 505 / 3, 505 / 1, 504 / 8, 503 / 1, 2, 4, 504 / 4, 504 / 7. | 998.22 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 13 | ಚಿಕ್ಕಮಗಳೂರು ಗ್ರಾಮದ ಸ.ನಂ. 355. | 232.10 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 14 | ಚಿಕ್ಕಮಗಳೂರು ಗ್ರಾಮದ ಸ.ನಂ. 355. | 359.58 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |
| 15 | ದಂಟರಮಕ್ಕಿ ಗ್ರಾಮದ ಸ.ನಂ. 22 / 1, 2A, 2B, 25 / 3A, 2B. | 296.80 ಚ. ಮೀ. | 1292.00 | ಖಾಲಿ ಇದೆ. | – | ಪ್ರಾಧಿಕಾರದ ಒಡೆತನದಲ್ಲಿ ಇರುತ್ತದೆ |

**ತೀರ್ಮಾನ :**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆಗಾಗಿ ವಿವಿಧ ಸಂಸ್ಥೆಗಳಿಂದ ಬಂದಿರುವ ಅರ್ಜಿಗಳ ಬಗ್ಗೆ ಚರ್ಚಿಸಲಾಯಿತು, ಈ ಬಗ್ಗೆ ಸರ್ಕಾರದ ನಿಯಮಾವಳಿಗಳಂತೆ ಪ್ರಾಧಿಕಾರದಲ್ಲಿ ಲಭ್ಯವಿರುವ ಎಲ್ಲಾ ನಿವೇಶನಗಳಿಗೆ ಆಯಾ ಭಾಗದಲ್ಲಿ ಅವಶ್ಯವಿರುವ ನಾಗರೀಕ ಸೌಲಭ್ಯಗಳನ್ನು ಒದಗಿಸುವ ಉದ್ದೇಶಕ್ಕೆ ಮೀಸಲಾತಿ ಗುರುತಿಸಿ ಅದನ್ನು ಸಾರ್ವಜನಿಕ ಪ್ರಕಟಣೆ ನೀಡಲು ಕ್ರಮ ಕೈಗೊಳ್ಳಲು ಆಯುಕ್ತರಿಗೆ ಸೂಚನೆ ನೀಡಿತು. ಸರ್ಕಾರಿ ಮತ್ತು ಅರೆಸರ್ಕಾರಿ ಕಛೇರಿಗಳಿಗೆ ಪ್ರಥಮ ಆಧ್ಯತೆ ನೀಡಿ ನಿಯಮಾನುಸಾರ ಹಂಚಿಕೆ ಮಾಡಬಹುದು (ನಗರಯೋಜನಾ ಇಲಾಖೆಗೆ, ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ 65 x 65 ಅಡಿ ನಿವೇಶನ ಮತ್ತು ಯೋಜನಾ ಸಮನ್ವಯಾಧಿಕಾರಿ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಚಿಕ್ಕಮಗಳೂರು ರವರಿಗೆ ಪರಿಶಿಷ್ಠ ವರ್ಗದ ಮೆಟ್ರಿಕ್ ಪೂರ್ವ ಬಾಲಕೀಯರ ವಿಧ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಮುನೀರ್ ಅಹಮದ್ ಲೇಔಟ್‌ನಲ್ಲಿ 39.90 x 29.90 ಮೀಟರ್ ವಿಸ್ತೀರ್ಣದ ನಿವೇಶನ ಹಂಚಿಕೆ ಮಾಡಲು ಸಭೆಯು ತೀರ್ಮಾನಿಸಿತು.) ಉಳಿದಂತೆ, ಇತರ ಉದ್ದೇಶಗಳಿಗೆ ಸಲ್ಲಿಸಿರುವ ಅರ್ಜಿಗಳಿಗೆ ನಿಯಮಾನುಸಾರ ಪ್ರಕಟಣೆ ನೀಡಿ ಅರ್ಜಿ ಆಹ್ವಾನಿಸಿದಾಗ ಸರ್ಕಾರದ ಕನಿಷ್ಠ ದರವನ್ನು ಪ್ರಕಟಿಸಿ ಹರಾಜು ಮೂಲಕ ಹಂಚಿಕೆ ಮಾಡಲು ಆದ್ಯತೆ ನೀಡಲು ಸಭೆಯು ತೀರ್ಮಾನಿಸಿತು. ಈ ನಿವೇಶನಗಳಿಗಾಗಿ ಕನಿಷ್ಠ ಅರ್ಜಿಗಳು ಬಂದಲ್ಲಿ, ನಿಯಮಾನುಸಾರ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ನಿಯಮಗಳು 91 ರನ್ವಯ ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಲಾಯಿತು. ಈ ಹಿಂದೆ ಪತ್ರಿಕಾ ಪ್ರಕಟಣೆ ನೀಡಿದಾಗ ನಿಯಮಾನುಸಾರ ಅರ್ಜಿ ಸಲ್ಲಿಸಿ ಶೇಕಡ 10 ನಿವೇಶನದ ಮೊತ್ತ ಪಾವತಿಸಿರುವ ಬನಶಂಕರಿ ಮಹಿಳಾ ಸಮಾಜ ಚಿಕ್ಕಮಗಳೂರು ಇವರಿಗೆ ಹಿರೇಮಗಳೂರು ವಸತಿ ಬಡಾವಣೆಯ ಸರ್ವೆ ನಂ. 171 ರಲ್ಲಿ ಒಟ್ಟು 110.51 ಚದರ ಮೀಟರ್ ಹಾಗೂ ಸರ್ವೆ ನಂ. 172 ರಲ್ಲಿ 111.41 ಚದರ ಮೀಟರ್ ಅಳತೆಯ ಒಟ್ಟು 221.92 ಚದರ ಮೀಟರ್ ಅಳತೆ ನಿವೇಶನಗಳನ್ನು ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಕಟ್ಟಡ ಕಟ್ಟುವ ಉದ್ದೇಶಕ್ಕಾಗಿ ಹಂಚಿಕೆ ಮಾಡುವಂತೆ ಮಾನ್ಯ ಅಧ್ಯಕ್ಷರು ಒತ್ತಾಯಿಸಿದ ಮೇರೆಗೆ ಈ ನಿವೇಶನಗಳನ್ನು ಹಿಂದೆ ನ್ಯಾಯಬೆಲೆ ಅಂಗಡಿ ಮತ್ತು ಮಾರುಕಟ್ಟೆ ಉದ್ದೇಶಕ್ಕೆ ಇಟ್ಟಿದ ಉದ್ದೇಶವನ್ನು ಸಿಕ್ಷಣಮತ್ತು ತರಬೇತಿ ಉದ್ದೇಶಕ್ಕೆ ಬದಲಾವಣೆ ಮಾಡಿ ಈ ಬಗ್ಗೆ ನಿಯಮಾನುಸಾರ ಎಲ್ಲಾ ಅರ್ಹತೆಗಳನ್ನು ಹೊಂದಿದ್ದಲ್ಲಿ ಪರಿಶೀಲಿಸಿ ಹಂಚಿಕೆ ಮಾಡಬಹುದೆಂದು ಸರ್ವಾನುಮತದಿಂದ ಸಭೆಯು ತೀರ್ಮಾನಿಸಿತು.

ಮೇ|| ಇಂಡಿಯನ್ ಮೆಡಿಕಲ್ ಅಸೋಸಿಯೇಟ್ಸ್ ಮತ್ತು ಸಹಾಯಕ ನಿಯಂತ್ರಕರು ಸ್ಥಳಿಯ ಲೆಕ್ಕ ಪರಿಶೋಧನಾ ವೃತ್ತ ಚಿಕ್ಕಮಗಳೂರು ರವರಿಗೆ ಈಗಾಗಲೇ ಹಂಚಿಕೆ ಮಾಡಲು ನಿರ್ಧರಿಸಲಾಗಿದ್ದ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಸದರೀ ವಿಷಯವನ್ನು ಪರಿಶೀಲಿಸಿದ ಸಭೆಯು ಪ್ರತಿ ಚದರ ಅಡಿಗೆ ರೂ. 90 ರಂತೆ ದರ ಪರಿಷ್ಕರಿಸಿ ನಿವೇಶನ ಹಂಚಿಕೆ ಮಾಡಲು ಸರ್ವಾನುಮತದಿಂದ ಒಪ್ಪಿಗೆ ನೀಡಲಾಯಿತು.

ಮೇ|| ಸನ್‌ಆಟೋ ವರ್ಕ್ಸ್ ಮಾಲೀಕರು ಗ್ಯಾರೇಜ್ ನಿರ್ಮಾಣಕ್ಕಾಗಿ ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದು, ಇದು ವಾಣಿಜ್ಯ ಉದ್ದೇಶಕ್ಕಾಗಿ ಇರುವುದರಿಂದ ಇದನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ಸಭೆಯು ತೀರ್ಮಾನಿಸಿತು.

**ವಿಷಯ ನಂ 4.**

ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿ ಡಾ|| ಕೆ. ಇ. ಕುಮಾರಸ್ವಾಮಿ (ಜಿ.ಪಿ.ಎ. ಹೋಲ್ಡರ್) ರವರು 15 ಎಕರೆ ಭೂಮಿಯನ್ನು ವಸತಿ ಬಡಾವಣೆ ಮಾಡಿರುವ ಬಗ್ಗೆ.

**ಟಿಪ್ಪಣಿ :**

ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿ ಡಾ|| ಕೆ.ಇ. ಕುಮಾರಸ್ವಾಮಿ (ಜಿ.ಪಿ.ಎ. ಹೋಲ್ಡರ್) ಇವರು 15 ಎಕರೆ ಭೂಮಿಯಲ್ಲಿ ವಸತಿ ಬಡಾವಣೆಗೆ 05-11-2007 ದಿನಾಂಕದಂದು ಈ ಕಛೇರಿಯಿಂದ ವಸತಿ ವಿನ್ಯಾಸ ಅನುಮೋದನೆ ನೀಡಲಾಗಿರುತ್ತದೆ.

ದಿನಾಂಕ: 02-06-2009 ರಂದು ಸಾರ್ವಜನಿಕರಿಂದ ಒಂದು ದೂರು ಬಂದಿದ್ದು ಬಡಾವಣೆಯಲ್ಲಿ ಪಾರ್ಕ್ ಎಂದು ಗುರುತಿಸಿರುವ ಭಾಗ ತಮ್ಮ ಖಾಸಗಿ ಆಸ್ತಿ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಸರ್ವೆ ಮಾಡಿಸಿದಾಗ ಸರ್ವೆ ನಂ. 5 ರಲ್ಲಿ 1 ಎಕರೆ 10 ಗುಂಟೆ ಭಾಗ ಖಾಸಗಿ ಸ್ವತ್ತನ್ನು ಬಡಾವಣೆಯ ಪಾರ್ಕ್ ಮತ್ತು ರಸ್ತೆಯನ್ನಾಗಿ ಗುರುತಿಸಿರುವುದಾಗಿ ವರದಿ ಬಂದಿರುತ್ತದೆ. ಈ ಬಗ್ಗೆ ಬಡಾವಣೆ ಮಾಲೀಕರಿಗೆ ಹಾಗೂ ಸಂಬಂದಿಸಿದ ಅಧಿಕಾರಿಗಳಿಗೆ ನೋಟೀಸ್ ನೀಡಲಾಗಿದೆ. ಮಾಲೀಕರು ಮತ್ತೊಮ್ಮೆ ಸರ್ವೆ ಮಾಡಿಸಿರುತ್ತಾರೆ ಮತ್ತು ಪ್ರಾಧಿಕಾರದ ಮನವಿಯ ಮೇರೆಗೆ ಮತ್ತೊಮ್ಮೆ ಜಂಟಿ ಸರ್ವೆ ಸಹ ಮಾಡಿ ವರದಿ ಮಾಡಿರುತ್ತಾರೆ. ಅದರಂತೆ ಬಡಾವಣೆಗೆ ಸಂಬಂಧಿಸದ ಒಟ್ಟು 00 ಎಕರೆ 39 ಗುಂಟೆ ಖಾಸಗಿ ಜಮೀನಿನಲ್ಲಿ ಪಾರ್ಕ್ ಮತ್ತು ರಸ್ತೆ ಎಂದು ಗುರುತು ಮಾಡಿ ಅಕ್ರಮವಾಗಿ ಅನುಮೋದನೆ ಆಗಿರುವುದು ದೃಡಪಟ್ಟಿದೆ. ಸದರಿ ಬಡಾವಣೆಗೆ ನಕ್ಷೆಯನ್ನು ರದ್ದುಗೊಳಿಸಿ, ನಿಯಮಾನುಸಾರ ಪಾರ್ಕ್ ಮತ್ತು ರಸ್ತೆಗೆ ಅವಶ್ಯವಿರುವ ಭೂಮಿಯನ್ನು ಗುರುತು ಮಾಡಿ ಹೊಸ ನಕ್ಷೆ ಅನುಮೋದನೆಗೆ ಹಾಗೂ ಈ ಕುರಿತು ತಪ್ಪಿತಸ್ಥರ ಮೇಲೆ ನಿಯಮಾನುಸಾರ ಕ್ರಮ ಕೈಗೊಳ್ಳಲು ತೀರ್ಮಾನಕ್ಕಾಗಿ ಸಭೆಯ ಮುಂದೆ ವಿಷಯ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ದಿನಾಂಕ: 05-11-2007 ರಂದು ಅನುಮೋದಿಸಲಾಗಿದ್ದ ವಿನ್ಯಾಸ ನಕ್ಷೆಯನ್ನು ರದ್ದು ಪಡಿಸಲು ತೀರ್ಮಾನಿಸಲಾಯಿತು. ಪ್ರಾಧಿಕಾರದಿಂದ ಶೇಕಡ 60 ರಷ್ಟು ನಿವೇಶನಗಳನ್ನು ಮಾತ್ರ ಮಾರಾಟಕ್ಕೆ ಅನುಮತಿ ನೀಡಲಾಗಿತ್ತು. ಶೇಕಡ 40 ರಷ್ಟು ಉಳಿದಿರುವ ನಿವೇಶನಗಳ ಭೂಮಿಯಲ್ಲಿ ನಿಯಮಾನುಸಾರ ಕಾಯ್ದಿರಿಸಬೇಕಾದ ಪಾರ್ಕ್ ಪ್ರದೇಶವನ್ನು ಗುರುತಿಸಬಹುದೆಂದು ಆಯುಕ್ತರು ಹಾಗೂ ನಗರ ಯೋಜನಾ ಸದಸ್ಯರು ಅಭಿಪ್ರಾಯ ಪಟ್ಟರು. ಅದರಂತೆ, ಸಭೆಯು ಒಪ್ಪಿಗೆ ಸೂಚಿಸಿತು. ಮತ್ತು ಈ ರೀತಿ ಅಕ್ರಮವಾಗಿ ಖಾಸಗಿ ಭೂಮಿಯಲ್ಲಿ ಈ ಬಡಾವಣೆಯ ಮಾಲೀಕತ್ವ ಅಲ್ಲದ ಭೂಮಿಯನ್ನು ಬಡಾವಣೆಯ ಉದ್ಯಾನವನ ಎಂದು ಗುರುತಿಸಿರುವ ಬಗ್ಗೆ ತಪಿಕಸ್ಥರ ವಿರುದ್ದ, ಅಗತ್ಯ ಶಿಸ್ತು ಕ್ರಮಕ್ಕಾಗಿ ಪೂರಕವಾಗಿ ಸರ್ಕಾರಕ್ಕೆ ವರದಿ ಕಳುಹಿಸಿಕೊಡಲು ಸಭೆಯು ತೀರ್ಮಾನಿಸಿತು.

**ವಿಷಯ ನಂ 5.**

ಪ್ರಾಧಿಕಾರದ ಕಛೇರಿಯಲ್ಲಿ ಏಕ ನಿವೇಶನ ಮಂಜೂರಾತಿ ನಿರಾಕ್ಷೇಪಣಾ ಪತ್ರ ವಿತರಣೆ ಹಾಗೂ ಹೊಸದಾಗಿ ಲೇಔಟ್ ನಿರ್ಮಾಣಗಳು ಸೇರಿದಂತೆ ಎಲ್ಲಾ ದಿನನಿತ್ಯದ ಕಡತಗಳನ್ನು ಪ್ರಾಧಿಕಾರದ ಅಧ್ಯಕ್ಷರಿಗೆ ಸಲ್ಲಿಸಿ ಅನುಮೋದನೆ ಪಡೆದ ನಂತರ ಕ್ರಮ ಕೈಗೊಳ್ಳುವ ವಿಚಾರದ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದ ಕಛೇರಿಯಲ್ಲಿ ಏಕ ನಿವೇಶನ ಮಂಜೂರಾತಿ ನಿರಾಕ್ಷೇಪಣಾ ಪತ್ರ ವಿತರಣೆ ಹಾಗೂ ಹೊಸದಾಗಿ ಲೇಔಟ್‌ಗಳ ನಿರ್ಮಾಣ ಸೇರಿದಂತೆ ದಿನನಿತ್ಯದ ಎಲ್ಲಾ ಕಡತಗಳನ್ನು ಪ್ರಾಧಿಕಾರದ ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿ ಮುಂದಿನ ಕ್ರಮಕೈಗೊಳ್ಳಬೇಕೆಂದು ಅಧ್ಯಕ್ಷರು ಸೂಚಿಸಿ ಈ ಬಗ್ಗೆ ನಿರ್ಣಯಕ್ಕೆ ಸಭೆಗೆ ವಿಷಯ ಮಂಡಿಸಲು ಸೂಚಿಸಿರುತ್ತಾರೆ. ದಿನಾಂಕ: 29-01-2005 ರ ಸರ್ಕಾರಿ ಸುತ್ತೋಲೆಯಲ್ಲಿ ಪ್ರಾಧಿಕಾರಗಳಲ್ಲಿ ಮಾನ್ಯ ಅಧ್ಯಕ್ಷರ ಅಧಿಕಾರಗಳ ಬಗ್ಗೆ ವಿವರಣೆ ನೀಡಿರುತ್ತಾರೆ. ಈ ವಿಚಾರಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ.

**ತೀರ್ಮಾನ :**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಈ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 191 : ಬೆಂರೂಪ್ರಾ : 2004 ದಿನಾಂಕ: 29-01-2005 ರಂತೆ ತಿಳಿಸಿರುವ ಕರ್ತವ್ಯಗಳನ್ನು ಮಾತ್ರ ನಿರ್ವಹಿಸಲು ಅವಕಾಶವಿರುತ್ತದೆ. ಉಳಿದಂತೆ ಪ್ರತಿನಿತ್ಯದ ಕಡತಗಳನ್ನು ನಿರ್ವಹಿಸಲು ಅವಕಾಶವಿರುವುದಿಲ್ಲವೆಂದು ಸಭೆಗೆ ಸ್ಪಷ್ಟಪಡಿಸಿದರು. ಅದರಂತೆ ಕ್ರಮವಹಿಸಲು ಸಭೆಯು ತಿರ್ಮಾನಿಸಿತು.

**ವಿಷಯ ನಂ 6.**

ಹಿರೇಮಗಳೂರು ಗ್ರಾಮದ ವಿವಿಧ ಸರ್ವೆ ನಂಬರುಗಳ 40 ಎಕರೆ ಜಮೀನನ್ನು ಭೂಸ್ವಾಧೀನತೆಯಿಂದ ಕೈಬಿಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ದಿನಾಂಕ: 27-09-2008 ರ ಮಾಸಿಕ ವಿಶೇಷ ಸಭೆಯನ್ನು ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳ ಸಂಖ್ಯೆ. 2 ರಲ್ಲಿ ಕೈಗೊಂಡ ತೀರ್ಮಾನದಂತೆ,

ಹಿರೇಮಗಳೂರು ಗ್ರಾಮದ ಸರ್ವೆ ನಂ. 338, 340, 344, 348, 352, 353, 358, 359, 368, 369, 370 ಮತ್ತು 371 ಗಳಲ್ಲಿನ ಸುಮಾರು 40 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಪ್ರಾಧಿಕಾರದ ವಸತಿ ಯೋಜನೆಯನ್ನು ರೂಪಿಸುವ ಸಂಬಂದ ನಿರ್ಣಯ ಕೈಗೊಳ್ಳಲಾಗಿತ್ತು. ಆದರೆ, ಸದರೀ 40 ಎಕರೆಯಲ್ಲಿ ವಾಟರ್ ಪಾರ್ಕ್ ಮತ್ತು ಕೆರೆ ಅಭಿವೃದ್ಧಿ ಪಡಿಸುವ ಸಲುವಾಗಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 4, 372, 374, 375, 376 ಮತ್ತು 377 ರಲ್ಲಿನ 8 ಎಕರೆ ಜಮೀನನ್ನು ಬಿಟ್ಟು ಉಳಿದ ಸರ್ವೆ ನಂಬರುಗಳ ಜಮೀನನ್ನು ಬಡಾವಣೆ ನಿರ್ಮಾಣ ಉದ್ದೇಶದಿಂದ ಕೈಬಿಡಲು ವಿಷಯ ಮಂಡಿಸಿ ಈಗಾಗಲೆ ಬೇರೆ ಭೂಮಿಗಳ ಭೂ ಸ್ವಾಧೀನ ಪ್ರಕ್ರಿಯೆ ಕೈಗೊಂಡು ವಸತಿ ಬಡಾವಣೆ ಕಾರ್ಯಗಳು ಪ್ರಗತಿಯಲ್ಲಿರುವುದರಿಂದ ಅದನ್ನು ಪೂರ್ಣಗೊಳಿಸಲು ಆದ್ಯತೆ ನೀಡುವ ದೃಷ್ಠಿಯಿಂದ ಹಾಗೂ ಸದರೀ ಜಮೀನಿಗೆ ಭೂ ಸ್ವಾಧೀನ ಪಡಿಸಿಕೊಳ್ಳುವ ಕುರಿತು ಬೇಡಿಕೆ ಸಮೀಕ್ಷೆ ನಡೆಸದೆ ಇರುವುದರಿಂದ ಮೇಲಿನ ಸರ್ವೆ ನಂಬರುಗಳ ಒಟ್ಟು 40 ಎಕರೆ ಜಮೀನನ್ನು ಭೂಸ್ವಾಧೀನತೆಯಿಂದ ಕೈಬಿಡಬಹುದಾಗಿದ್ದು, ಸದರೀ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ, ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಹಿರೇಮಗಳೂರು ಭಾಗದ ರೈತರ ಭೂಮಿಯನ್ನು ಇದುವರೆಗೂ ಭೂಸ್ವಾಧೀನ ಮೂಲಕ ಪಡೆಯಲಾಗುತ್ತಿದೆ ಪ್ರತಿ ಬಾರಿಯೂ ಇದೇ ಭಾಗದ ರೈತರ ಭೂಮಿಯನ್ನು ವಶಪಡಿಸುತ್ತಿರುವ ಬಗ್ಗೆ ಸ್ಥಳೀಯ ಜನರು ಅಭಿಪ್ರಾಯ ಮತ್ತು ವಿರೋಧ ವ್ಯಕ್ತಪಡಿಸಿರುತ್ತಾರೆ. ಆದ್ದರಿಂದ ಉಳಿದ ಬೇರೆ ಭಾಗದ ಭೂಮಿಯನ್ನು ಪಡೆಯುವ ಮೂಲಕ ಈ ಭಾಗದ ಭೂಮಿಯನ್ನು ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸುವುದನ್ನು ತಪ್ಪಿಸುವ ಬಗ್ಗೆ ಚಿಂತಿಸಲು ಮಾನ್ಯ ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದರು. ಆಯುಕ್ತರು ಮಾತನಾಡಿ ಇದೇ ಭಾಗದ ಹಿರೇಮಗಳೂರು ಸರ್ವೆ ನಂಬರುಗಳಲ್ಲಿ 42 ಎಕರೆ ಭೂಮಿಯಲ್ಲಿ ಬಡಾವಣೆ ನಿರ್ಮಿಸಲು ಸರ್ಕಾರದ ಅನುಮತಿ ಕೋರಲಾಗಿತ್ತು. ಆದರೆ ಸದರೀ ಭೂಮಿಯ ಗರಿಷ್ಠ ಭಾಗವನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಕರ್ನಾಟಕ ಗೃಹಮಂಡಳಿಯಿಂದ ದಿನಾಂಕ: 30-03-2009 ರಂದು ಅಧಿಸೂಚನೆ ಹೊರಡಿಸಲಾಗಿದೆ. ಇನ್ನುಳಿದ ಕನಿಷ್ಠ ಭೂಮಿಯನ್ನೂ ಸಹ ಕೈಬಿಟ್ಟು ಬೇರೆ ಪ್ರದೇಶದಲ್ಲಿ ಬೃಹತ್ ಬಡಾವಣೆ ನಿರ್ಮಿಸುವ ಬಗ್ಗೆ ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು. ಈ ಬಗ್ಗೆ ಅಧ್ಯಕ್ಷರು ಸಹ ಸಹಮತ ವ್ಯಕ್ತಪಡಿಸಿದರು. ಹಿರೇಕೊಳಲೆ ರಸ್ತೆಯ ಉಪ್ಪಳ್ಳಿ ಗ್ರಾಮದ ಸರ್ವೆ ನಂಬರುಗಳಲ್ಲಿ 200 ಎಕರೆ ಮತ್ತು ತೇಗೂರು ಗ್ರಾಮದ ಸರ್ವೆ ನಂಬರುಗಳಲ್ಲಿ 110 ಎಕರೆ ಬೃಹತ್ ಬಡಾವಣೆಗಳನ್ನು ನಿರ್ಮಿಸಲು ಆಧ್ಯತೆಯನ್ನು ನೀಡುತ್ತಿರುವುದರಿಂದ ಹಿರೇಮಗಳೂರು ಭಾಗದಲ್ಲಿ ಪ್ರಾಧಿಕಾರದ ವತಿಯಿಂದ ಬಡಾವಣೆ ನಿರ್ಮಿಸುವುದನ್ನು ಕೈಬಿಡಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ ನಂ 7.**

ತೇಗೂರು ಗ್ರಾಮದ ಸರ್ವೆ ನಂ. 110 ಮತ್ತಿತರೆ ಸರ್ವೆ ನಂಬರುಗಳಲ್ಲಿ ವಸತಿ ಬಡಾವಣೆ ನಿರ್ಮಾಣಕ್ಕೆ ಭೂಮಿ ವಶಪಡಿಸಿಕೊಳ್ಳಲು ಮೂರು ಪರ್ಯಾಯ ಅವಕಾಶಗಳೊಂದಿಗೆ ಸರ್ಕಾರಕ್ಕೆ ಪ್ರಸ್ಥಾವನೆ ಸಲ್ಲಿಸುವ ಬಗ್ಗೆ.

**ಟಿಪ್ಪಣಿ :**

ವಸತಿ ಬಡಾವಣೆ ನಿರ್ಮಾಣದ ಬಗ್ಗೆ ಭೂಸ್ವಾಧೀನ ವಿರೋದಿಸಿ ಭೂಮಾಲೀಕರು / ರೈತರು ಸರ್ಕಾರಕ್ಕೆ ವಿರೋದ ವ್ಯಕ್ತಪಡಿಸಿ ಪ್ರತಿಭಟನೆ ಮಾಡುತ್ತಿರುತ್ತಾರೆ. ಇತ್ತೀಚೆಗೆ ಕೆಲವು ರೈತರು (ಸುಮಾರು 35 ಎಕರೆ) ಭೂಮಿಯನ್ನು ಸ್ವಯಂ ಇಚ್ಛೆಯಿಂದ ಮಾರಾಟ ಮಾಡಲು ಒಪ್ಪಿಗೆ ಸೂಚಿಸಿರುತ್ತಾರೆ. ಇತರೆ ಭೂಮಿ ಮಾಲೀಕರು ಇದಕ್ಕೆ ಒಪ್ಪುತ್ತಿಲ್ಲ. ಸರ್ಕಾರವು ಇತ್ತೀಚೆಗೆ ನಗರಾಭಿವೃದ್ಧಿ ಪ್ರಾಧಿಕಾರಗಳು ಬಡಾವಣೆ ನಿರ್ಮಾಣ ಮಾಡುವಾಗ ಭೂಮಿಯ ಮಾಲೀಕರನ್ನು ಪಾಲುದಾರರನ್ನಾಗಿ ಮಾಡಿಕೊಂಡು ನಿರ್ಮಾಣ ಮಾಡಲು ಹೆಚ್ಚಿನ ಆದ್ಯತೆ ನೀಡಬೇಕೆಂದು ಸೂಚಿಸಿರುತ್ತದೆ.

ಈ ಬಗ್ಗೆ ಅಭಿವೃದ್ಧಿ ಹೊಂದಿದ ನಿವೇಶನಗಳಲ್ಲಿ ಶೇಕಡ 35 ರಿಂದ ಶೇಕಡ 40 ಭಾಗ ಮಾಲೀಕರಿಗೆ ನೀಡುವ ಯೋಜನೆಗೆ ಆದ್ಯತೆ ನೀಡಲು ಸಹ ಸೂಚಿಸಿರುತ್ತಾರೆ. ಯೋಜನೆಯ ಶೀಘ್ರ ಅನುಷ್ಠಾನ ದೃಷ್ಠಿಯಿಂದ ಪ್ರಾಧಿಕಾರವು ರೈತರಿಗೆ ಮೂರು ಪರ್ಯಾಯ ವ್ಯವಸ್ಥೆಗಳ ಮೂಲಕ ಪರಿಹಾರ ನೀಡಲು ಕ್ರಮಕೈಗೊಂಡು ಸರ್ಕಾರದ ಅನುಮತಿ ಪಡೆದು ಅಧಿಸೂಚನೆ ಹೊರಡಿಸಬಹುದಾಗಿರುತ್ತದೆ.

ಅ) ಶೇಕಡ 35 : 65 ಅನುಪಾತದಲ್ಲಿ ಪಾಲುಗಾರಿಕೆ ಯೋಜನೆಯಡಿ ಭೂಮಿ ಪಡೆಯುವುದು.
ಆ) ಭೂಮಾಲೀಕರು / ರೈತರ ಜೊತೆಗೆ ಮಾತುಕತೆ ಮೂಲಕ ದರ ನಿಗದಿಪಡಿಸಿ ಭೂಮಿ ಖರೀಧಿ ಮಾಡುವುದು ಮತ್ತು
ಇ) ಭೂ ಸ್ವಾಧೀನ ಕಾಯ್ದೆಯನ್ವಯ ಭೂಮಿ ಪಡೆಯುವುದು.

ಮೇಲಿನಂತೆ ವಿಷಯವನ್ನು ತೀರ್ಮಾನಕ್ಕೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ರೈತರಿಗೆ ಶೇಕಡ 40 ನಿವೇಶನಗಳನ್ನು ನೀಡಲು ಹಾಗೂ ನಿವೇಶನಕ್ಕೆ ಪ್ರತಿ ಚದುರ ಅಡಿಗೆ ರೂ 180.00 ರಿಂದ 200 ರವರೆಗೆ ನಿಗದಿಪಡಿಸಲು ತೀರ್ಮಾನಿಸಿತು. ಉಳಿದಂತೆ ಸರ್ಕಾರದ ಹೊಸ ನೀತಿಯಂತೆ ಮೇಲ್ಕಂಡ ಮೂರು ಪರ್ಯಾಯ ವ್ಯವಸ್ಥೆಯಲ್ಲಿ ಬಡಾವಣೆ ನಿರ್ಮಾಣಕ್ಕೆ ಪೂರಕವಾಗಿ ಸರ್ಕಾರದ ಪ್ರಾಥಮಿಕ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಸಭೆಯು ತೀರ್ಮಾನಿಸಿತು.

**ವಿಷಯ ನಂ 8.**

ನಗರದ ಪಾರ್ಕ್ ಮತ್ತು ರಸ್ತೆ ಜಾಗಗಳನ್ನು ಅಕ್ರಮವಾಗಿ ನಿವೇಶನಗಳಾಗಿ ಅನುಮೋದನೆ ನೀಡಿರುವುದನ್ನು ರದ್ದು ಪಡಿಸುವ ಬಗ್ಗೆ.

**ಟಿಪ್ಪಣಿ :**

ಅ) ದಂಟರಮಕ್ಕಿ ಸರ್ವೆ ನಂ. 16 / 2 ರಲ್ಲಿ ಶ್ರೀ ಶ್ರೀನಿವಾಸ ಹೆಗ್ಡೆ ಕೆ. ಎಸ್., ಇವರಿಗೆ ಸೇರಿದ 01 ಎಕರೆ 03 ಗುಂಟೆ ಭೂಮಿಯಲ್ಲಿ 02-09-1985 ರಲ್ಲಿ ಆಗಿನ ಯೋಜನಾ ಪ್ರಾಧಿಕಾರವು ಬಡಾವಣೆ ನಕ್ಷೆಯನ್ನು ಅನುಮೋದನೆ ನೀಡಿರುತ್ತದೆ. ಸದರೀ ಬಡಾವಣೆಯಲ್ಲಿ ಒಂದು ಪಾರ್ಕ್ ಸಹ ಗುರುತಿಸಿ ಅನುಮೋದನೆ ನೀಡಲಾಗಿತ್ತು. ದಿನಾಂಕ: 04-03-1994 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯ ವಿಷಯ ನಂ. 7 ರಲ್ಲಿ ಸದರೀ ಪಾರ್ಕ್ ಪಕ್ಕದಲ್ಲಿರುವ 30 ಅಡಿ ರಸ್ತೆಯನ್ನು 30 x 60 ಅಳತೆ ನಿವೇಶನವನ್ನಾಗಿ ಪರಿವರ್ತಿಸಲು ವಿಷಯ ಮಂಡಿಸಿ ಅದರಂತೆ ಮಾರ್ಪಾಡು ನಕ್ಷೆಯನ್ನು ನೀಡಲೂ ಸಹ ತೀರ್ಮಾನಿಸಲಾಗಿತ್ತು. ನಂತರ ಈ ತೀರ್ಮಾನದ ಆದಾರದ ಮೇಲೆ ಮತ್ತು ಅಂದಿನ ಪ್ರಾಧಿಕಾರದ ಅಧ್ಯಕ್ಷರ ಟಿಪ್ಪಣಿ ಸೂಚನೆ ಪ್ರಕಾರ ಸಭೆ ನಿರ್ಣಯದಲ್ಲಿ ತಿಳಿಸಿರುವ ರಸ್ತೆ ಜೊತೆಗೆ ನಕ್ಷೆಯಲ್ಲಿದ್ದ ಪಾರ್ಕ್‌ನ್ನು ಸಹ ನಿವೇಶನಗಳನ್ನಾಗಿ ಗುರ್ತಿಸಿ ಮಾರ್ಪಾಡು ನಕ್ಷೆಯನ್ನು ಅನುಮೋದಿಸಿ ನೀಡಲಾಗಿದೆ.

ಈಗ ಸದರೀ ರಸ್ತೆಯಲ್ಲಿ ಮನೆ ನಿರ್ಮಾಣ ಆರಂಭಿಸಿದಾಗ ಸಾರ್ವಜನಿಕರಿಂದ ದೂರುಗಳು ಬಂದಿದ್ದು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ವಯ ಸದರೀ ಅಕ್ರಮ ಖಾತೆಗಳನ್ನು ರದ್ದುಪಡಿಸಲು ನಗರ ಸಭೆಗೆ ಪತ್ರ ಬರೆಯಲಾಗಿದ್ದು, ರದ್ದು ಮಾಡಲಾಗಿದೆ. ಪ್ರಾಧಿಕಾರವು ನಿಯಮಾವಳಿ ಪ್ರಕಾರ ಅನುಮೋದಿಸಿರುವ ಬಡಾವಣೆ ಮೂಲ ನಕ್ಷೆಯಲ್ಲಿರುವ ರಸ್ತೆ ಮತ್ತು ಪಾರ್ಕ್‌ಗಳನ್ನು ನಿವೇಶನಗಳನ್ನಾಗಿ ಮಾರ್ಪಾಡಿಸುವ ಅಧಿಕಾರ ಆಯುಕ್ತರಿಗಾಗಲಿ ಅಥವಾ ಪ್ರಾಧಿಕಾರಕ್ಕಾಗಲಿ ಇರುವುದಿಲ್ಲ. ಆದ್ದರಿಂದ ಈ ಅಕ್ರಮ ಮಾರ್ಪಾಡು ನಕ್ಷೆಯನ್ನು ರದ್ದುಪಡಿಸಲು ವಿಷಯವನ್ನು ಮಂಡಿಸಿದೆ.

ಆ) 1984-85 ರಲ್ಲಿ ಶ್ರೀಮತಿ ಗಂಗಮ್ಮ ಕೊಂ ಗಂಗಣ್ಣ ಇವರಿಗೆ ಸೇರಿದ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 7 ರಲ್ಲಿನ 01 ಎಕರೆ 22 ಗುಂಟೆ ಭೂಮಿಯಲ್ಲಿ ಅಂದಿನ ಯೋಜನಾ ಪ್ರಾಧಿಕಾರವು ವಸತಿ ಬಡಾವಣೆ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುತ್ತದೆ. ಸದರೀ ನಕ್ಷೆಯಲ್ಲಿ ಒಂದು ಪಾರ್ಕ್‌ನ್ನು ಗುರುತಿಸಿ ನೀಡಲಾಗಿತ್ತು.

(80 + 90) / 2 x (90 + 60) / 2 ಆದರೆ, ದಿನಾಂಕ: 24-12-2004 ರಲ್ಲಿ ಆಯುಕ್ತರು ಸದರೀ ಪಾರ್ಕ್‌ನ ಭೂಮಿಯನ್ನು ನಿವೇಶನವನ್ನಾಗಿ ಪರಿವರ್ತಿಸಲು ತಮ್ಮ ಆಕ್ಷೇಪಣೆ ಇರುವುದಿಲ್ಲವೆಂಬುದಾಗಿ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ. ಈ ಭೂಮಿಗೆ, ನಗರಸಭೆಯಲ್ಲಿ ಖಾತೆ ಸಹ ಆಗಿರುತ್ತದೆ. ಸದರೀ ಬಡಾವಣೆಯು ಅಕ್ರಮವಾಗಿರುವುದರಿಂದ ಅದನ್ನು ರದ್ದುಗೊಳಿಸಿ ಮೂಲ ನಕ್ಷೆಯಂತೆ ಪಾರ್ಕ್ ವಶಪಡಿಸಿಕೊಳ್ಳಲು ಮಾನ್ಯ ಅಧ್ಯಕ್ಷರು ಸೂಚನೆ ನೀಡಿರುತ್ತಾರೆ. ಈ ಅಕ್ರಮ ಮಾರ್ಪಾಡನ್ನು ರದ್ದುಗೊಳಿಸಬಹುದಾಗಿದ್ದು, ವಿಷಯನ್ನು ತೀರ್ಮಾನಕ್ಕಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ದಂಟರಮಕ್ಕಿ ಗ್ರಾಮದ ಸರ್ವೆ ನಂ. 16 / 2 ರ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ: 04-03-1994 ರ ಪ್ರಾಧಿಕಾರದ ಸಭೆಯಲ್ಲಿ ಕೈಗೊಂಡ ನಿರ್ಣಯವು ಕಾನೂನು ಬಾಹಿರವಾಗಿರುವುದರಿಂದ ಅದನ್ನು ರದ್ದು ಪಡಿಸಲು ಮತ್ತು ಅಧ್ಯಕ್ಷರ ಸೂಚನೆ ಮೇರೆಗೆ ಎಂದು ನಮೂದಿಸಿ ಅಂದಿನ ಆಯುಕ್ತರು ಮಾರ್ಪಾಡು ಮಾಡಿರುವ ವಿನ್ಯಾಸ ನಕ್ಷೆಯು ಅಕ್ರಮವಾಗಿರುವುದರಿಂದ ಅದನ್ನು ರದ್ದು ಪಡಿಸಿ, ಇದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳ ಮೇಲೆ ಸೂಕ್ತ ಶಿಸ್ತು ಕ್ರಮಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸಲು ಸಭೆಯು ತೀರ್ಮಾನಿಸಿತು. ದಿನಾಂಕ: 04-03-1994 ರ ನಿರ್ಣಯದಂತೆ ರಸ್ತೆಯನ್ನು ನಿವೇಶನವನ್ನಾಗಿ ಮಾರ್ಪಾಡಿಸಿರುವ ಜಾಗದಲ್ಲಿ ಕಟ್ಟಡ ನಿರ್ಮಾಣ ಆಗುತ್ತಿದ್ದು, ಅದನ್ನು ತಕ್ಷಣ ಸ್ಥಗಿತಗೊಳಿಸಲು ಹಾಗೂ ಈ ಬಗ್ಗೆ ವಿಷಯ ನ್ಯಾಯಾಲಯದಲ್ಲಿ ಇರುವುದರಿಂದ ತೀರ್ಪಿನ ನಂತರ ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.

ಶ್ರೀಮತಿ ಗಂಗಮ್ಮ ಕೋಂ ಗಂಗಣ್ಣ ಇವರಿಗೆ ಸೇರಿದ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 7 ರಲ್ಲಿನ ಯೋಜನಾ ಪ್ರಾಧಿಕಾರ ಅನುಮೋದಿಸಿದ್ದ, ವಿನ್ಯಾಸ ನಕ್ಷೆಯಲ್ಲಿ ಗುರುತಿಸಲಾಗಿದ್ದ, ಉದ್ಯಾನವನ ಜಾಗವನ್ನು (80 + 90 ) / 2 x (90 + 60) / 2 ಅಕ್ರಮವಾಗಿ ಏಕ ನಿವೇಶನ ಅನುಮೋದನೆ ಹಾಗೂ ಖಾತೆ ಮಾಡಿರುವುದನ್ನು ತಕ್ಷಣದಿಂದ ರದ್ದು ಪಡಿಸಲು ಹಾಗೂ ಸದರೀ ವಿಷಯವು ನ್ಯಾಯಾಲಯದಲ್ಲಿರುವುದರಿಂದ ಅದನ್ನು ಪರಿಶೀಲಿಸಿನಂತರ ನಗರ ಸಭೆಯು ಸದರಿ ಉದ್ಯಾನವನವನ್ನು ವಶಕ್ಕೆ ಪಡೆಯಲು (ಕ್ರಮ: ನಗರಸಭೆ, ಚಿಕ್ಕಮಗಳೂರು) ಅಗತ್ಯ ಕ್ರಮ ಕೈಗೊಳ್ಳಬಹುದೆಂದು ಸಭೆಯು ತೀರ್ಮಾನಿಸಿತು.

**ವಿಷಯ ನಂ 9.**

ನಾಗರೀಕ ಸೌಲಭ್ಯ ನಿವೇಶನದಲ್ಲಿ ಖಾಸಗಿಯವರು ಕಟ್ಟಡ ಕಟ್ಟಿದ್ದು, ಅದನ್ನು ಖಾಸಗಿಯವರಿಗೆ ಪ್ರಸಕ್ತ ಬೆಲೆಯಲ್ಲಿ ಮಾರಾಟ ಮಾಡುವ ಬಗ್ಗೆ.

**ಟಿಪ್ಪಣಿ :**

ರಾಮೇಶ್ವರ ನಗರದ ಪ್ರಾಧಿಕಾರದಿಂದ ಅನುಮೋದಿತವಾದ ಬಡಾವಣೆಯಲ್ಲಿ 65.3 x 31.3 ಚದರ ಅಡಿ ಅಳತೆಯ ನಾಗರೀಕ ಸೌಲಭ್ಯದ ನಿವೇಶನ ಮತ್ತು ಕಾಲುದಾರಿ ಜಾಗದಲ್ಲಿ ಶ್ರೀ ವಿಜಯ ಕೆ ಹೆಗ್ಡೆ ಎಂಬುವರು ವಸತಿ ಕಟ್ಟಡವನ್ನು ಕಟ್ಟಿರುತ್ತಾರೆ. ಸದರೀ ಕಟ್ಟಡವನ್ನು ತಮ್ಮ ಹೆಸರಿನಲ್ಲಿ ಖರೀದಿ ಮಾಡಿರುವ ನಿವೇಶನ ಸಂಖ್ಯೆ. 16 / P ಎಂದು ತಪ್ಪಾಗಿ ಗುರುತು ಮಾಡಿರುವುದರಿಂದ ಕಟ್ಟಡ ಕಟ್ಟಲಾಗಿದೆ. ಪ್ರಾಧಿಕಾರದ ನಿವೇಶನ ಎಂದು ಗೊತ್ತಿಲ್ಲದೆ ಬಡಾವಣೆ ಮಾಲೀಕರ ತಪ್ಪು ಮಾಹಿತಿಯಿಂದ ಈ ಪ್ರಕರಣ ಸಂಭವಿಸಿರುತ್ತದೆ. ಲಕ್ಷಾಂತರ ರೂಪಾಯಿಗಳನ್ನು ಸಾಲಮಾಡಿ ವೆಚ್ಚಮಾಡಿ ದೊಡ್ಡ ವಸತಿ ಕಟ್ಟಡ ನಿರ್ಮಾಣ ಮಾಡಿದ್ದು, ಮಾಹಿತಿಯ ಕೊರತೆಯಿಂದಾಗಿ, ಸದರೀ ನಿವೇಶನವನ್ನು ಪ್ರಸ್ತುತ ಮಾರುಕಟ್ಟೆಬೆಲೆಯಂತೆ ತಮಗೆ ಹಂಚಲು ಹಾಗೂ ಆಗುವ ನಷ್ಟದಿಂದ ಪಾರುಮಾಡಲು ಪ್ರಸ್ತುತ ಕಟ್ಟಡ ಕಟ್ಟಿರುವ ಮಾಲೀಕರಾದ ಶ್ರೀ ವಿಜಯ ಕೆ. ಹೆಗ್ಡೆ ರವರು ಮನವಿ ಮಾಡಿರುತ್ತಾರೆ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಮತ್ತು ನಿರ್ಣಯವನ್ನು ಸರ್ಕಾರದ ಅನುಮತಿ ಬಂದ ನಂತರ ಪರಿಗಣಿಸಬಹುದಾಗಿರುತ್ತದೆ.

**ತೀರ್ಮಾನ:**

ಸದರಿ ವಿಷಯವನ್ನು ದೀರ್ಘವಾಗಿ ಚರ್ಚಿಸಲಾಯಿತು. ನಾಗರೀಕ ಸೌಲಭ್ಯದ ನಿವೇಶನದಲ್ಲಿ, ನಿರ್ಮಾಣವಾಗಿರುವ ಅಕ್ರಮ ಕಟ್ಟಡವನ್ನು ನಿರ್ಮಾಣ ಮಾಡಿರುವವರಿಗೆ ಮಂಜೂರ್ಮಾಡಲು ಸಾಧ್ಯವಿಲ್ಲವೆಂಬುದಾಗಿ ಸಭೆಯು ತೀರ್ಮಾನಿಸಿತು. ಈ ಬಗ್ಗೆ ಅಗತ್ಯ ಕ್ರಮ ಕೈಗೊಂಡು ತೆರವುಗೊಳಿಸಲು ಸಹ ಸಭೆಯು ತೀರ್ಮಾನಿಸಿತು. ಈ ಬಡಾವಣೆ ಮಾಲೀಕರು ತನ್ನದಲ್ಲದ ಭೂಮಿ / ನಿವೇಶನವನ್ನು ಜಿಪಿಎ ಮೂಲಕ ಮಾರಾಟ ಮಾಡಿರುವುದನ್ನು ಪರಿಶೀಲಿಸಿ ಅದನ್ನು ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಜಿಲ್ಲಾಧಿಕಾರಿಗಳು ಸೂಚಿಸಿದಾಗ ಸಭೆಯು ಅದರಂತೆ ತೀರ್ಮಾನಕ್ಕೆ ಒಪ್ಪಿತು.

**ವಿಷಯ ನಂ 10.**

ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯ ವಿವಿಧ 4 ಕಾಮಗಾರಿ ಟೆಂಡರ್‌ಗಳಿಗೆ ಗುತ್ತಿಗೆದಾರರು ನಮೂದಿಸಿರುವ ದರವು ಎಸ್. ಆರ್. ದರಗಳಿಗಿಂತ ಶೇಕಡ 13.39 ರವರೆಗೆ ಅಧಿಕವಾಗಿರುವುದನ್ನು ಕಡಿಮೆ ಮಾಡಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯ ವಿವಿಧ 4 ಕಾಮಗಾರಿಗಳಿಗೆ ಈ ಕಛೇರಿಯಿಂದ ದಿನಾಂಕ: 18-06-2009 ರಂದು ರಾಜ್ಯ ಮಟ್ಟದ ಕನ್ನಡ ಮತ್ತು ಆಂಗ್ಲ ಭಾಷೆಯ ಒಂದೊಂದು ಪತ್ರಿಕೆಗಳಿಗೆ ಟೆಂಡರ್ ಪ್ರಕಟಣೆ ನೀಡಿದ್ದು, ಅದರಂತೆ ದಿನಾಂಕ: 23-06-2009 ರ ಉದಯವಾಣಿ ಹಾಗೂ ಹಿಂದೂ ದಿನಪತ್ರಿಕೆಯಲ್ಲಿ ಪ್ರಕಟಣೆ ಬಂದಿದ್ದು, ನಿಯಮಾನುಸಾರ ಪ್ಯಾಕೇಜ್ ಟೆಂಡರ್ ಕಾಮಗಾರಿಗಳಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ದಿನಾಂಕ: 11-08-2009 ಕಡೆ ದಿನವಾಗಿರುತ್ತದೆ. 4 ವಿವಿಧ ಕಾಮಗಾರಿಗಳಿಗೆ ತಲಾ ಎರಡರಂತೆ ಒಟ್ಟು 8 ಟೆಂಡರ್ ಅರ್ಜಿಗಳು ಸ್ವೀಕೃತವಾಗಿದ್ದು, ದಿನಾಂಕ: 17-08-2009 ರಂದು ಟೆಂಡರ್ ತೆರೆಯಲಾಗಿದ್ದು ಟೆಂಡರ್ ಕಾಮಗಾರಿಗಳಿಗೆ ಈ ಕೆಳಕಂಡಂತೆ ದರ ನಮೂದಿಸಿರುತ್ತಾರೆ.

ಕ್ರ.ಸಂ. 1 ನೇ ಚಪ್ಪಡಿ ಚರಂಡಿ ಕಾಮಗಾರಿಗೆ ಶ್ರೀ ಕೆ. ಎಸ್. ರಾಜು ರವರು ಶೇಕಡ 7.39 ರಷ್ಟು ಹೆಚ್ಚಿಗೆ,
ಕ್ರ.ಸಂ. 2 ನೇ ಸೈಜುಗಲ್ಲು ಬಾಕ್ಸ್ ಚರಂಡಿ ಕಾಮಗಾರಿಗೆ ಶ್ರೀ ಶ್ರೀಕಾಂತ ರವರು ಶೇಕಡ 10.57 ರಷ್ಟು ಹೆಚ್ಚಿಗೆ,
ಕ್ರ.ಸಂ. 3 ನೇ ಆರ್.ಸಿ.ಸಿ. ಡೆಕ್ ಸ್ಲ್ಯಾಬ್ ಮತ್ತು ಆರ್.ಸಿ.ಸಿ. ಹ್ಯೂಂ ಪೈಪ್ ಕಲ್ವರ್ಟ್ ಕಾಮಗಾರಿಗೆ
ಶ್ರೀ ಕೆ. ಎಸ್. ರಾಜು ರವರು ಶೇಕಡ 6.34 ರಷ್ಟು ಹೆಚ್ಚಿಗೆ,
ಕ್ರ.ಸಂ. 4 ನೇ ರಸ್ತೆ ಕಾಮಗಾರಿಗೆ ಶ್ರೀ ಬಿ. ಎನ್. ಮಲ್ಲೇಶ್ ರವರು ಶೇಕಡ 8.90 ರಷ್ಟು ಹೆಚ್ಚಿಗೆ
ದರ ನಮೂದಿಸಿರುತ್ತಾರೆ.

ಸದರೀ ನಾಲ್ಕು ಕಾಮಗಾರಿಗಳನ್ನು ಎಸ್. ಆರ್. ದರದಲ್ಲಿ ನಿರ್ವಹಿಸುವಂತೆ ನೆಗೋಶಿಯೇಶನ್ ಮೂಲಕ ಗುತ್ತಿಗೆದಾರರ ಒಪ್ಪಿಗೆ ಪಡೆದು ನಿಯಮಾನುಸಾರ ಕಾರ್ಯದೇಶ ನೀಡಲು ವಿಷಯವನ್ನು ಸಭೆ ಮುಂದೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ದಿನಾಂಕ: 02-09-2009 ರಂದು ನೆಗೋಸಿಯೇಷನ್ ಮಾಡಲಾಗಿದ್ದು, ಎಸ್. ಆರ್. ದರಕ್ಕಿಂತ ಕನಿಷ್ಠ ಶೇಕಡ 5 ರಷ್ಟು ಹೆಚ್ಚಿನ ದರದಲ್ಲಿ ಕಾರ್ಯದೇಶ ನೀಡಲು ಗುತ್ತಿಗೆದಾರರು ಕೋರಿರುತ್ತಾರೆಂದು ಆಯುಕ್ತರು ಸಭೆಗೆ ತಿಳಿಸಿದರು. ಆದರೆ, ಸಭೆಯು ಎಸ್. ಆರ್. ದರಕ್ಕೆ ನಿಗದಿ ಪಡಿಸಿ ಕಾರ್ಯದೇಶ ನೀಡಲು ಸಮ್ಮತಿ ನೀಡಿತು. ಈ ಬಡಾವಣೆಗೆ ಸಂಬಂಧಪಟ್ಟಂತೆ ಒಟ್ಟು ನಾಲ್ಕು ಜನ ಭೂಮಾಲೀಕರು ನ್ಯಾಯಾಲಯದ ಮೊರೆ ಹೋಗಿದ್ದು, ಯಥಾ ಸ್ಥಿತಿ ಕಾಪಾಡುವಂತೆ ನ್ಯಾಯಾಲಯದ ಆದೇಶವಿರುತ್ತದೆ. ಎಂದು ಆಯುಕ್ತರು ಸಭೆಗೆ ವಿವರಿಸಿದರು. ಇದನ್ನು ತುರ್ತಾಗಿ ತೆರವುಗೊಳಿಸಿ ನಿಯಾಮಾನುಸಾರ ಕಾರ್ಯದೇಶ ನೀಡಲು ಸಭೆಯು ಒಪ್ಪಿಗೆ ಸೂಚಿಸಿತು.

**ವಿಷಯ ನಂ 11.**

ಶ್ರೀ ಆರ್. ಗುಣಶೇಖರ್ ಬಿನ್ ಸಿ. ರಾಜು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 134 / 3 ರಲ್ಲಿನ 00 ಎ–34 ಗುಂಟೆ ಜಮೀನಿನಲ್ಲಿ ವಸತಿಗೆ ರೂಪ ರೇಖಾ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಆರ್. ಗುಣಶೇಖರ್ ಬಿನ್ ಸಿ. ರಾಜು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 134 / 3 ರಲ್ಲಿನ 00 ಎ–34 ಗುಂಟೆ ಜಮೀನಿನಲ್ಲಿ ವಸತಿ ವಿನ್ಯಾಸ ಅನುಮೋದನೆ ಕೋರಿರುತ್ತಾರೆ, ಸದರಿ ಪ್ರದೇಶವು ಚಿಕ್ಕಮಗಳೂರು ಪಟ್ಟಣದ ಹಾಲಿ ವ್ಯಾಪಕಾಭಿವೃದ್ಧಿ ಯೋಜನೆ ನಕ್ಷೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಈಗಾಗಲೇ ತಯಾರಿಸಿರುವ ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನಾ ಪರಿಷ್ಕೃತ– 1 (ತಾತ್ಕಾಲಿಕ) ಯೋಜನಾ ನಕ್ಷೆಯು ಸರ್ಕಾರದಿಂದ ಅನುಮೋದನೆಯಾಗಿದ್ದು ಈ ನಕ್ಷೆಯಲ್ಲಿ ಸದರಿ ಜಾಗವನ್ನು ಉದ್ಯಾನವನ ಉಪಯೋಗಕ್ಕಾಗಿ (ಕಾರ್ಟ್ರಾಗ್ರಫಿಕ್ ಎರರ್‌ನಿಂದ ಹಸಿರು ಬಣ್ಣ ಬಂದಿರುತ್ತದೆ) ಕಾಯ್ದಿರಿಸಿದೆ, ಸದರಿ ಭೂ ಉಪಯೋಗವನ್ನು ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿರುವಂತೆ ವಸತಿಗಾಗಿ ಕಾಯ್ದಿರಿಸಿರುವಂತೆ ಸದರಿ ಪ್ರದೇಶಕ್ಕೆ ಜಿಲ್ಲಾಧಿಕಾರಿಗಳವರಿಂದ ಭೂ ಅನ್ಯಕ್ರಾಂತ ಆದೇಶವಾಗಿರುತ್ತದೆ, ಅದರಂತೆ ಸದರಿ ಪ್ರದೇಶದಲ್ಲಿ ವಸತಿ ವಿನ್ಯಾಸ ಅನುಮೋದಿಸುವ ಸಂಬಂದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಆರ್. ಗುಣಶೇಖರ್ ಬಿನ್ ಸಿ. ರಾಜು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 134 / 3 ರಲ್ಲಿನ 00 ಎ–34 ಗುಂಟೆ ಜಮೀನಿನಲ್ಲಿ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಜಮೀನು ಈ ಹಿಂದೆ ಚಿಕ್ಕಮಗಳೂರು ಪಟ್ಟಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ದಿ ಯೋಜನಾ ನಕ್ಷೆಯಲ್ಲಿ ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿದೆ, ಇತ್ತೀಚಿಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ (ತಾತ್ಕಾಲಿಕ) ನಕ್ಷೆಯಲ್ಲಿ ಸದರಿ ಜಮೀನಿನಲ್ಲಿ ಹಸಿರು ಬಣ್ಣವನ್ನು ಕಾರ್ಟ್ರಗ್ರಫಿಕ್ ಎರರ್‌ನಿಂದ ತೋರಿಸಲಾಗಿದ್ದು, ಈ ವಿಷಯವನ್ನು ಹಿಂದಿನ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ವಸತಿಗಾಗಿ ಭೂ ಪರಿವರ್ತನೆಗೆ ಅಭಿಪ್ರಾಯ ನೀಡಬಹುದೆಂದು ತೀರ್ಮಾನಿಸಲಾಗಿರುತ್ತದೆ, ಅದರಂತೆ ಪ್ರಾಧಿಕಾರದಿಂದ ಅಭಿಪ್ರಾಯ ನೀಡಲಾಗಿದೆ, ನಂತರ ಸದರಿ ಜಾಗಕ್ಕೆ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆದೇಶವಾಗಿರುತ್ತದೆ, ಆದುದರಿಂದ ಸದರಿ ಜಾಗಕ್ಕೆ ಈಗಾಗಲೇ ಅಭಿಪ್ರಾಯ ನೀಡಿ ವಸತಿಗಾಗಿ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆಗಿರುವುದರಿಂದ ವಿನ್ಯಾಸ ನಕ್ಷೆ ಅನುಮೋದನೆಗಾಗಿ ಪರಿಗಣಿಸಬಹುದಾಗಿದೆ, ಪ್ರಾಧಿಕಾರದ ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ತಾಂತ್ರಿಕ ಅಭಿಪ್ರಾಯವನ್ನು ಒಪ್ಪಲಾಗಿದ್ದು ಅದರಂತೆ ಅನುಮೋದನೆ ನೀಡಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ ನಂ 12.**

ಶ್ರೀಮತಿ ಮಂಜುಳ ಕೊಂ ರಾಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 145 / 2B ರಲ್ಲಿನ 00 ಎ–20 ಗುಂಟೆ ಜಮೀನಿನಲ್ಲಿ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀಮತಿ ಮಂಜುಳ ಕೊಂ ರಾಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 145 / 2B ರಲ್ಲಿನ 00 ಎ–20 ಗುಂಟೆ ಜಮೀನು ವಸತಿಗೆ ಭೂ ಪರಿವರ್ತನೆಯಾಗಿರುತ್ತದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ಮಂಜುಳ ಕೊಂ ರಾಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 145 / 2B ರಲ್ಲಿನ 00 ಎ–20 ಗುಂಟೆ ಜಮೀನಿನಲ್ಲಿ ವಸತಿಗೆ ರೂಪ ರೇಖಾ ಅನುಮೋದನೆ ಕೋರಿರುವ ಜಮೀನು ಮಾನ್ಯ ಜಿಲ್ಲಾಧಿಕಾರಿಗಳವರಿಂದ ವಸತಿಗೆ ಭೂ ಪರಿವರ್ತನೆಯಾಗಿರುತ್ತದೆ, ಸದರಿ ಪ್ರಸ್ತಾವನೆಯನ್ನು ಹಾಗೂ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ, ವಿನ್ಯಾಸ ನಕ್ಷೆಯನ್ನು ನಿಯಮಾನುಸಾರ ಮಹಾಯೋಜನೆಯಂತೆ ಪರಿಶೀಲಿಸಿ ಅನುಮೋದಿಸಬಹುದಾಗಿದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ತಾಂತ್ರಿಕ ಅಭಿಪ್ರಾಯವನ್ನು ಒಪ್ಪಲಾಗಿದ್ದು ಅದರಂತೆ ಅನುಮೋದನೆ ನೀಡಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ ನಂ 13.**

ಶ್ರೀಮತಿ ಅಂಜುಮ್ ಅರಾ ಕೊಂ ಫಾರೂಕ್ ಪಾಷಾ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 110 ಮತ್ತು 108 / 1 ರಲ್ಲಿನ 9.14 x 15.24 ಮೀಟರ್ ಪ್ರದೇಶದಲ್ಲಿ ವಸತಿಗೆ ಬಿಡಿ ನಿವೇಶನ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀಮತಿ ಅಂಜುಮ್ ಅರಾ ಕೊಂ ಫಾರೂಕ್ ಪಾಷಾ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 110 ಮತ್ತು 108 / 1 ರಲ್ಲಿನ 9.14 x 15.24 ಮೀಟರ್ ಪ್ರದೇಶದಲ್ಲಿ ವಸತಿಗೆ ಬಿಡಿ ನಿವೇಶನ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಚಿಕ್ಕಮಗಳೂರು ಪಟ್ಟಣದ ಸಿ.ಡಿ.ಪಿ. ನಕ್ಷೆಯಲ್ಲಿ ವಸತಿ ವಲಯದಲ್ಲಿದ್ದು, ಈಗ ಪರಿಷ್ಕೃತ ಮಹಾಯೋಜನೆ ಪರಿಷ್ಕೃತ – 1 ರಲ್ಲಿ ಉದ್ಯಾನವನಕ್ಕಾಗಿ ಮೀಸಲಿಡಲಾಗಿದೆ (ಕಾರ್ಟೋಗ್ರಾಫಿಕ್ ಎರರ್) ಈಗಾಗಲೇ ಸಿ.ಡಿ.ಪಿ. ನಕ್ಷೆಯಲ್ಲಿ ವಸತಿ ವಲಯದಲ್ಲಿರುವುದರಿಂದ ಮಹಾಯೋಜನಾ ನಕ್ಷೆ (ಅಂತಿಮ) ಸಮಯದಲ್ಲಿ ಸದರಿ ಪ್ರಕರಣವನ್ನು ಪರಿಶೀಲಿಸಬಹುದಾಗಿರುತ್ತದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ವಹಿಸಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ಅಂಜುಮ್ ಅರಾ ಕೊಂ ಫಾರೂಕ್ ಪಾಷಾ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 110 ಮತ್ತು 108 / 1 ರಲ್ಲಿನ 9.14 x 15.24 ಮೀಟರ್ ಪ್ರದೇಶದಲ್ಲಿ ವಸತಿಗೆ ರೂಪ ರೇಖಾ ಅನುಮೋದನೆ ಕೋರಿರುವ ಜಮೀನು ಈ ಹಿಂದೆ ಚಿಕ್ಕಮಗಳೂರು ಪಟ್ಟಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ದಿ ಯೋಜನಾ ನಕ್ಷೆಯಲ್ಲಿ ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿದೆ, ಇತ್ತೀಚಿಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ (ತಾತ್ಕಾಲಿಕ) ನಕ್ಷೆಯಲ್ಲಿ ಸದರಿ ಜಮೀನಿನಲ್ಲಿ ಉದ್ಯಾನವನಕ್ಕಾಗಿ ಮೀಸಲಿಡಲಾಗಿದೆ, ಸದರಿ ಸರ್ವೆ ನಂಬರುಗಳ ಜಾಗಗಳು ಈಗಾಗಲೇ ಭೂ ಪರಿವರ್ತನೆ ಆಗಿರುತ್ತದೆ, ಕಾರಣ ಮಹಾಯೋಜನೆ ಅಂತಿಮದಲ್ಲಿ ಸದರಿ ಜಾಗವನ್ನು ವಸತಿಗಾಗಿ ಕಾಯ್ದಿರಿಸಬಹುದಾಗಿದೆ, ಆದುದರಿಂದ ಬಿಡಿ ನಿವೇಶನಕ್ಕೆ ಅನುಮೋದನೆ ನೀಡುವ ಸಂಬಂದ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಈಗಾಗಲೆ ವಿಷಯ ಸಂಖ್ಯೆ (1) ರಲ್ಲಿ ತೀರ್ಮಾನಿಸಿದಂತೆ (ಸದರೀ ಪ್ರದೇಶದಲ್ಲಿನ ಅಧಿಕೃತ ರಸ್ತೆ ಮತ್ತು ಇತರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಸರ್ಕಾರದ ನಿಯಮಾವಳಿಗಳ ಕಟುನಿಟ್ಟಿನ ಅನುಷ್ಠಾನ ಆದರಿಸಿ) ಅಗತ್ಯ ಕ್ರಮ ಕೈಗೊಳ್ಳಲು ಸಭೆಯು ತೀರ್ಮಾನಿಸಿತು.

**ವಿಷಯ ನಂ 14.**

ಶ್ರೀ ಎಸ್. ಆರ್. ಸುಬ್ರಹ್ಮಣ್ಯ ಬಿನ್ ರಾಜಣ್ಣ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ರಾಮನಹಳ್ಳಿ ಗ್ರಾಮದ ಸರ್ವೆ ನಂ. 38 / 1 ರಲ್ಲಿನ 28 x 54 ಅಡಿ ಪ್ರದೇಶಕ್ಕೆ ವಸತಿಗಾಗಿ ಭೂ ಪರಿವರ್ತನೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಎಸ್. ಆರ್. ಸುಬ್ರಹ್ಮಣ್ಯ ಬಿನ್ ರಾಜಣ್ಣ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ರಾಮನಹಳ್ಳಿ ಗ್ರಾಮದ ಸರ್ವೆ ನಂ. 38 / 1 ರಲ್ಲಿನ 28 x 54 ಅಡಿ ಪ್ರದೇಶಕ್ಕೆ ವಸತಿಗಾಗಿ ಭೂ ಪರಿವರ್ತನೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ, ಸದರಿ ಜಾಗವು ಚಿಕ್ಕಮಗಳೂರು ಪಟ್ಟಣದ ಸಿ.ಡಿ.ಪಿ. ನಕ್ಷೆಯಲ್ಲಿ ವಸತಿ ವಲಯದಲ್ಲಿದ್ದು, ಈಗ ಪರಿಷ್ಕೃತ ಮಹಾಯೋಜನೆ ಪರಿಷ್ಕೃತ – 1 ರಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ, ಕೆ. ಟಿ. ಸಿ. ಪಿ. ಕಾಯ್ದೆ ಅನ್ವಯ ಕೈಗಾರಿಕೆಯಿಂದ ವಸತಿ ಉಪಯೋಗಕ್ಕೆ ಅಭಿಪ್ರಾಯ ನೀಡಲು (ಸಂಬಂದಪಟ್ಟ ಭೂ ಪರಿವರ್ತನಾ ಶುಲ್ಕ ಪಾವತಿಸಿಕೊಂಡು) ಅವಕಾಶವಿರುತ್ತದೆ, ಆದುದರಿಂದ ವಸತಿಗಾಗಿ ಭೂ ಪರಿವರ್ತನೆಗೆ ಅರ್ಜಿದಾರರಿಂದ ಅಗತ್ಯ ದಾಖಲಾತಿಗಳನ್ನು ಪಡೆದು ಪರಿಶೀಲಿಸಿದ ನಂತರ ಅಭಿಪ್ರಾಯ ನೀಡಬಹುದಾಗಿದೆ, ಪ್ರಾಧಿಕಾರದ ಸಭೆಯ ತೀರ್ಮಾನಕ್ಕೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಎಸ್. ಆರ್. ಸುಬ್ರಹ್ಮಣ್ಯ ಬಿನ್ ರಾಜಣ್ಣ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ರಾಮನಹಳ್ಳಿ ಗ್ರಾಮದ ಸರ್ವೆ ನಂ. 38 / 1 ರಲ್ಲಿನ 28 x 54 ಅಡಿ ಪ್ರದೇಶಕ್ಕೆ ವಸತಿಗಾಗಿ ಭೂ ಪರಿವರ್ತನೆ ಕೋರಿರುವ ಜಮೀನು ಈ ಹಿಂದೆ ಚಿಕ್ಕಮಗಳೂರು ಪಟ್ಟಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ದಿ ಯೋಜನಾ ನಕ್ಷೆಯಲ್ಲಿ ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿದೆ. ಇತ್ತೀಚಿಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ (ತಾತ್ಕಾಲಿಕ) ನಕ್ಷೆಯಲ್ಲಿ ಸದರಿ ಜಮೀನಿನಲ್ಲಿ ಕೈಗಾರಿಕೆ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ, ಕೆ. ಟಿ. ಸಿ. ಪಿ. ಕಾಯ್ದೆಯಲ್ಲಿ ಕೈಗಾರಿಕಾ ವಲಯದಲ್ಲಿ ವಸತಿಗಾಗಿ ಉಪಯೋಗಿಸಲು ಅವಕಾಶ ಇರುತ್ತದೆ, ಆದ್ದರಿಂದ ಕೆ. ಟಿ. ಸಿ. ಪಿ. ಕಾಯ್ದೆಯಂತೆ ಭೂ ಪರಿವರ್ತನಾ ಶುಲ್ಕ ಪಾವತಿಸಿಕೊಂಡು ವಸತಿಗಾಗಿ ಭೂ ಪರಿವರ್ತಿಸಲು ಅಭಿಪ್ರಾಯ ನೀಡಬಹುದಾಗಿದೆ, ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಈಗಾಗಲೆ ವಿಷಯ ಸಂಖ್ಯೆ (1) ರಲ್ಲಿ ತೀರ್ಮಾನಿಸಿದಂತೆ ಸದರೀ ಪ್ರದೇಶದಲ್ಲಿನ ಅಧಿಕೃತ ರಸ್ತೆ ಮತ್ತು ಇತರ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಸರ್ಕಾರದ ನಿಯಮಾವಳಿಗಳ ಕಟ್ಟುನಿಟ್ಟಿನ ಅನುಷ್ಠಾನಕ್ಕೆ ಸೂಚಿಸಿ ಅದರಂತೆ ಕ್ರಮವಹಿಸಲು ತೀರ್ಮಾನಿಸಲಾಯಿತು.

**ವಿಷಯ ನಂ 15.**

ಚಿಕ್ಕಮಗಳೂರು ನಗರದಿಂದ ಹಿರೇಕೊಳಲೆ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಸುಮಾರು 200 ಎಕರೆ ಜಮೀನಿನಲ್ಲಿ ಹೊಸದಾಗಿ ಬಡಾವಣೆ ನಿರ್ಮಾಣ ಮಾಡುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರದಿಂದ ಹಿರೇಕೊಳಲೆ ಗ್ರಾಮಕ್ಕೆ ಹೋಗುವ ದಾರಿಯಲ್ಲಿ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಸರ್ವೆ ನಂ. 19, 20, 21 ಮತ್ತು ಇಂದಾವರ ಗ್ರಾಮದ ಸರ್ವೆ ನಂ. 34, 41, 42, 43, 44, 45, 46, 47, 48, 49, 50, 51, 52, 56, 57, 58, 59, 60, 61, 62, 63, 65, 581 ಹಾಗೂ 582 ರಲ್ಲಿ ಒಟ್ಟು 200 ಎಕರೆ ಭೂಮಿ (ಖರಾಬು ಕಳೆದು 181-10 ಎಕರೆ) ಯಲ್ಲಿ ಪ್ರಾಧಿಕಾರದ ವತಿಯಿಂದ ಒಂದು ಬೃಹತ್ ಬಡಾವಣೆ ನಿರ್ಮಾಣ ಮಾಡಲು ಪ್ರಾಧಿಕಾರದ ಅಧ್ಯಕ್ಷರು, ಸೂಚಿಸಿರುತ್ತಾರೆ. ನಗರ ಯೋಜನಾ ಸದಸ್ಯರು ಸ್ಥಳ ಪರಿಶೀಲಿಸಿ ನಿಯಮಾನುಸಾರ ಬಡಾವಣೆ ನಿರ್ಮಾಣ ಮಾಡಲು ಅಭಿಪ್ರಾಯ ಪಟ್ಟಿರುತ್ತಾರೆ. ಮೇಲ್ಕಂಡ ಸರ್ವೆ ನಂಬರುಗಳಿಗೆ ಸಂಬಂಧಿಸಿದ ಸರ್ವೆ ನಕ್ಷೆಯನ್ನು ಪಡೆಯಲಾಗಿದೆ, ಸದರಿ ಪ್ರದೇಶವು ಚಿಕ್ಕಮಗಳೂರು ನಗರದಿಂದ ಸುಮಾರು 4 ಕಿ. ಮೀ ದೂರದಲ್ಲಿರುತ್ತದೆ, ಚಿಕ್ಕಮಗಳೂರು ನಗರವು ಸುಂದರವಾಗಿ ಬೆಳೆಯಲು ಮತ್ತು ಅಭಿವೃದ್ದಿಯಾಗಿರುವ ಬಡಾವಣೆ ನಿರ್ಮಾಣದಿಂದ ನಗರದ ಸೌಂದರೀಕರಣ ಹೆಚ್ಚಾಗಿವುದಲ್ಲದೆ ವ್ಯವಸ್ಥಿತ ಬೆಳವಣಿಗೆಗೆ ಪೂರಕವಾಗಿರುತ್ತದೆ. ವ್ಯವಸ್ಥಿತವಾದ ಬಡಾವಣೆಯನ್ನು ರಚಿಸಲು ಮತ್ತು ಮುಂದಿನ ಅಭಿವೃದ್ದಿ ಕಾರ್ಯಗಳ ರೂಪ ರೇಷೆಯನ್ನು ಸಿದ್ದಪಡಿಸುವ ಸಲುವಾಗಿ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 19 ರಲ್ಲಿ ಮಹಾ ಯೋಜನೆ ಪರಿಷ್ಕೃತ – 1 (ತಾತ್ಕಾಲಿಕ) ರನ್ವಯ ಭಾಗಶಃ ಟ್ರಾನ್ಸ್‌ಪೋರ್ಟೇಶನ್ ಅಂಡ್ ಕಮ್ಯೂನಿಕೇಶನ್ ಉದ್ದೇಶಕ್ಕಿದ್ದು ಉಳಿದ ಜಾಗವು ವಸತಿಗಾಗಿ ಕಾಯ್ದಿರಿಸಲಾಗಿದೆ, ಉಳಿದಂತೆ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 20, 21 ರ ಜಾಗವನ್ನು ವಸತಿಗಾಗಿ ಕಾಯ್ದಿರಿಸಲಾಗಿದೆ, ಹಾಗೂ ಇಂದಾವರ ಗ್ರಾಮದ ಎಲ್ಲಾ ಸರ್ವೆ ನಂಬರುಗಳನ್ನು ಕೃಷಿ ವಲಯದಲ್ಲಿ ಇಡಲಾಗಿದೆ, ಈ ಎಲ್ಲಾ ಸರ್ವೆ ನಂಬರುಗಳ ಜಾಗಗಳನ್ನು ನಿಯಮಾನುಸಾರ ಸರ್ಕಾರದಿಂದ ಅನುಮೋದನೆ ಪಡೆದು ಪ್ರಾಧಿಕಾರದಿಂದ ಬಡಾವಣೆ ನಿರ್ಮಿಸಬಹುದಾಗಿದೆ, ಸದರಿ ಸರ್ವೆ ನಂಬರುಗಳ ಜಮೀನುಗಳು ಹಿರೇಕೊಳಲೆ ಗ್ರಾಮಕ್ಕೆ ಹೋಗುವ ಜಿಲ್ಲಾ ಮುಖ್ಯ ರಸ್ತೆಯ ಸಂಪರ್ಕ ಹೊಂದಿರುತ್ತದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಸರ್ಕಾರದ ಇತ್ತೀಚಿನ ನೀತಿಯಂತೆ ಈ ಕೆಳಕಂಡ ಮೂರು ಪರ್ಯಾಯ ಮಾರ್ಗಗಳ ಮೂಲಕ ಭೂಮಿಯನ್ನು ವಶಕ್ಕೆ ಪಡೆಯಲು ತೀರ್ಮಾನಿಸಲಾಯಿತು.

1. ಶೇಕಡ 40 : 60 ರ ಪಾಲುಗಾರಿಕೆ,
2. ಪರಸ್ಪರ ಮಾತುಕತೆ ಮೂಲಕ ಭೂಮಿ ಖರೀದಿ,
3. ಸರ್ಕಾರದಿಂದ ಭೂಸ್ವಾಧೀನ.

ಸದರಿ ಭಾಗದಲ್ಲಿ ಶೇಕಡ 50 ರಷ್ಟು ದೊಡ್ಡ ನಿವೇಶನಗಳನ್ನು ರಚಿಸಲು (Posh Layout) ಉಳಿದ ಶೇಕಡ 50 ಭಾಗವನ್ನು ಸಾಮಾನ್ಯ ಬಡಾವಣೆಯನ್ನಾಗಿ ಅಭಿವೃದ್ಧಿ ಪಡಿಸಲು ಆದ್ಯತೆ ನೀಡಲು ಸಭೆಯು ನಿರ್ಧರಿಸಿತು. ಈ ಬಗ್ಗೆ ಪ್ರಾಥಮಿಕ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ಥಾವನೆ ಸಲ್ಲಿಸಲು ಸಭೆಯು ತೀರ್ಮಾನಿಸಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು :

**ವಿಷಯ ನಂ. 1 :**

ಶ್ರೀ ಜಿತೇಂದ್ರ ಮತ್ತು ಶ್ರೀ ಲಕ್ಷ್ಮೀಶ ಇವರು ಮೂಲೆ ನಿವೇಶನ ಹರಾಜಿನ ಬಾಬ್ತು ಬಡ್ಡಿ ಮನ್ನ ಮಾಡಲು ಕೋರಿರುವ ಬಗ್ಗೆ.

**ಟಿಪ್ಪಣಿ:**

ಶ್ರೀ ಜಿತೇಂದ್ರ ಮತ್ತು ಶ್ರೀ ಲಕ್ಷ್ಮೀಶ ಇವರು ದಿನಾಂಕ: 07-10-2008 ರಂದು ನಡೆದ ಬಹಿರಂಗ ಹರಾಜಿನಲ್ಲಿ ಡಿ– 292, ಡಿ– 285 ಮತ್ತು ಡಿ– 144 ರ ನಿವೇಶನಗಳನ್ನು ಚದರ ಅಡಿ ಒಂದಕ್ಕೆ ಕ್ರಮವಾಗಿ 280.00, 295.00 ಮತ್ತು 340.00 ಗಳಿಗೆ ಬಿಡ್ ಕೂಗಿದ್ದು, ಅದರಂತೆ ಒಟ್ಟು ನಿವೇಶನದ ಬೆಲೆಯಲ್ಲಿ ಹರಾಜಿನ ದಿನ ಶೇಕಡ 25 ರಷ್ಟು ಹಣ ರೂ. 78400.00, 82600.00 ಮತ್ತು 136000.00 ಗಳನ್ನು ಪಾವತಿಸಿರುತ್ತಾರೆ. ನಂತರ

ಬಡ್ಡಿರಹಿತವಾಗಿ ಬಾಕಿ ಹಣ ಪಾವತಿಸಲು ಕೊನೆಯ ದಿನಾಂಕ: 09-12-2008.
ಶೇಕಡ 18 ರ ಬಡ್ಡಿಯೊಂದಿಗೆ ಪಾವತಿಸಬೇಕಾದ ಕೊನೆಯ ದಿನಾಂಕ: 09-03-2009.
ಶೇಕಡ 21 ರ ಬಡ್ಡಿಯೊಂದಿಗೆ ಪಾವತಿಸಬೇಕಾದ ಕೊನೆಯ ದಿನಾಂಕ: 09-04-2009.

ಅರ್ಜಿದಾರರು ನಿಗದಿತ ಅವಧಿಯಲ್ಲಿ ಹನ ಪಾವತಿಸದೇ ಅವಧಿ ಮುಗಿದ ನಂತರ ದಿನಾಂಕ: 21-08-2009 ರಂದು ಅಸಲು ಮೊತ್ತ ರೂ. 235200.00, 247800.00, 48000.00 ಗಳನ್ನು ಮಾತ್ರ ಪಾವತಿಸಿ, ಮೂರು ನಿವೇಶನಗಳ ಒಟ್ಟು ಬಡ್ಡಿ ರೂ. 98437.00 ಗಳನ್ನು ಪಾವತಿಸಿರುವುದಿಲ್ಲ. ದಿನಾಂಕ: 24-08-2009 ರಂದು ಅರ್ಜಿ ಸಲ್ಲಿಸಿ ಅದರಲ್ಲಿ ಅವರ ಆರ್ಥಿಕ ಪರಿಸ್ತಿತಿ ಸದೃಡವಾಗಿಲ್ಲದೇ ಇರುವುದರಿಂದ ಅಲ್ಲದೇ ಹರಾಜಿನ ಸಮಯದಲ್ಲಿ ಅತೀ ಹೆಚ್ಚಿನ ಬಿಡ್ ದರಕ್ಕೆ ಕೂಗಿದ್ದು. ಈಗ ಬಡ್ಡಿ ಪಾವತಿಸಲು ಕಷ್ಟವಾಗಿದೆ ಬಡ್ಡಿಯನ್ನು ಮನ್ನ ಮಾಡಿ ನಿವೇಶನ ನೋಂದಣಿ ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ವಾಣಿಜ್ಯ ಮತ್ತು ಮೂಲೆ ನಿವೇಶನಗಳ ವಿಲೇವಾರಿ) ನಿಯಮಗಳು 1991 ರ ಪ್ರಕರಣ 6 ರ ಉಪಪ್ರಕರಣ 3(ಡಿ) ರ ಅನ್ವಯ ನಿವೇಶನ ಬೆಲೆಯ ಶೇಕಡ 25 ರಷ್ಟು ಹಣವನ್ನು ಮುಟ್ಟುಗೋಲುಹಾಕಿಕೊಂಡು ಮರು ಹರಾಜು ಮಾಡಬೇಕಾಗಿರುತ್ತದೆ. ಅರ್ಜಿದಾರರ ಕೋರಿಕೆಯಂತೆ ಬಡ್ಡಿ ಮನ್ನ ಮಾಡಿ ನಿವೇಶನ ನೋಂದಣಿ ಮಾಡಿಸಿ ಕೊಡುವ ಬಗ್ಗೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ ಮಾನ್ಯ ಜಿಲ್ಲಾಧಿಕಾರಿಗಳು ಇದು ಹರಾಜಿನಲ್ಲಿ ಖರೀದಿಸಿದ ನಿವೇಶನಗಳಾಗಿದ್ದು, ಸಂಬಂಧಪಟ್ಟ ಬಡ್ಡಿಯನ್ನು ಮನ್ನಾ ಮಾಡುವುದು ಸಮಂಜಸವಲ್ಲವೆಂದು ತಿಳಿಸಿದರು. ಆಯುಕ್ತರು ಮಾತನಾಡಿ ಸದರಿ ನಿವೇಶನಗಳು ಅತಿ ಹೆಚ್ಚಿನ ಬಿಡ್‌ಗೆ ಹರಾಜಾಗಿದ್ದು, (ಪ್ರತಿ ಚದರ ಅಡಿಗೆ 280.00, 295.00, 340.00 ರೂಪಾಯಿ) ಈ ಅಂಶವನ್ನು ಪರಿಗಣಿಸಿ ಸ್ವಲ್ಪ ಬಡ್ಡಿ ಕಡಿಮೆ ಮಾಡಬಹುದೆಂದು ತಿಳಿಸಿದರು. ಶೇಕಡ 21 ರ ಬಡ್ಡಿಯಲ್ಲಿ ಶೇಕಡ 3 ರಷ್ಟು ಕಡಿಮೆ ಮಾಡಿ ಪಾವತಿಸಿಕೊಳ್ಳಲು ಸಭೆಯು ತೀರ್ಮಾನಿಸಿತು.

**ವಿಷಯ ನಂ. 2 :**

ಶ್ರೀ ಮೊಹಮ್ಮದ್ ದಾವುದ್ ಮತ್ತು ಶ್ರೀ ಸಿ. ಎಲ್. ಸತೀಶ್ ಇವರುಗಳು ಮೂಲೆ ನಿವೇಶನದ ಸಂಖ್ಯೆ. ಇ– 78 ಮತ್ತು ಇ– 138 ರ ಬಾಬ್ತು ಹಣ ಪಾವತಿಸದೇ ಇರುವುದರಿಂದ ನಿವೇಶನವನ್ನು ಮುಟ್ಟುಗೋಲು ಹಾಕಿಕೊಂಡು ಮರು ಹರಾಜು ಮಾಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ಮೊಹಮ್ಮದ್ ದಾವುದ್ ಮತ್ತು ಶ್ರೀ ಸಿ. ಎಲ್. ಸತೀಶ್ ಇವರುಗಳು ದಿನಾಂಕ: 05-09-2008 ರಂದು ನಡೆದ ಮೂಲೆ ನಿವೇಶನ ಬಹಿರಂಗ ಹರಜಿನಲ್ಲಿ ಕ್ರಮವಾಗಿ ಇ– 138 ಕ್ಕೆ ಚದರ ಅಡಿ ಒಂದಕ್ಕೆ ರೂ. 133.00 ರಂತೆ ಒಟ್ಟು ರೂ. 79800.00 ಹರಾಜಿನ ದಿನವೇ ಶೇಕಡ 25 ರಷ್ಟು 19950.00 ಗಳನ್ನು ಮತ್ತು ಇ–78 ನಿವೇಶನಕ್ಕೆ ಚದರ ಅಡಿ ಒಂದಕ್ಕೆ ರೂ. 122.00 ರಂತೆ ಒಟ್ಟು ರೂ. 57120.00 ಗಳಾಗಿದ್ದು, ಹರಾಜಿನ ದಿನವೇ ಶೇಕಡ 25 ರಷ್ಟು 14300.00 ಗಳನ್ನು ಪಾವತಿಸಿದ್ದು, ಉಳಿದ ಮೊತ್ತವನ್ನು ಅನೇಕ ತಿಳುವಳಿಕೆ ಪತ್ರ ನೀಡಿದರು ಸಹ ಪಾವತಿಸಿರುವುದಿಲ್ಲ. ಈಗಾಗಲೇ ನಿಗದಿತ ಅವಧಿ ಮುಗಿದಿರುವುದರಿಂದ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ವಾಣಿಜ್ಯ ಮತ್ತು ಮೂಲೆ ನಿವೇಶನಗಳ ವಿಲೇವಾರಿ) ನಿಯಮಗಳು 1991 ರ ಪ್ರಕರಣ 6 ರ ಉಪಪ್ರಕರಣ 3(ಡಿ) ರ ಅನ್ವಯ ನಿವೇಶನ ಬೆಲೆಯ ಶೇಕಡ 25 ರಷ್ಟು ಹಣವನ್ನು ಮುಟ್ಟುಗೋಲುಹಾಕಿಕೊಂಡು ಮರು ಹರಾಜು ಮಾಡಬೇಕಾಗಿರುತ್ತದೆ. ಅದರಂತೆ ನಿವೇಶನಕ್ಕೆ ಪಾವತಿಸಿದ ಶೇಕಡ 25 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಂಡು ನಿವೇಶನವನ್ನು ಮರು ಹರಾಜು ಮಾಡುವ ಬಗ್ಗೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಸದರೀ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಮರು ಹರಾಜು ಮಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ನಂ. 3 :**

ಮಾಜಿ ಸೈನಿಕರ ಕಛೇರಿ ಸ್ಥಾಪಿಸಲು ಉಚಿತವಾಗಿ ಒಂದು ನಾಗರೀಕ ಸೌಲಭ್ಯದ ನಿವೇಶನವನ್ನು ಹಂಚಿಕೆ ಮಾಡಲು ಕೋರಿರುವ ಬಗ್ಗೆ.

**ಟಿಪ್ಪಣಿ:**

ಅಧ್ಯಕ್ಷರು ಜಿಲ್ಲಾ ಮಾಜಿ ಸೈನಿಕರ ಸಂಘ (ರಿ) ಚಿಕ್ಕಮಗಳೂರು ರವರು ದಿನಾಂಕ: 31-08-2009 ರಂದು ಮಾಜಿ ಸೈನಿಕರ ಕಛೇರಿ ಸ್ಥಾಪಿಸಲು ಒಂದು ನಾಗರೀಕ ಸೌಲಭ್ಯದ ನಿವೇಶವನ್ನು ಉಚಿತವಾಗಿ ಹಂಚಿಕೆ ಮಾಡಿಕೊಡುವಂತೆ ಮನವಿ ಸಲ್ಲಿಸಿರುತ್ತಾರೆ, ಆದರೆ ನಿಯಮಾನುಸಾರ ನಾಗರೀಕ ಸೌಲಭ್ಯದ ನಿವೇಶನವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮ 1991 ರ ಅನ್ವಯ ಉಚಿತವಾಗಿ ಹಂಚಿಕೆ ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ, ನಾಗರೀಕ ಸೌಲಭ್ಯದ ನಿವೇಶನವನ್ನು ಹಂಚಿಕೆ ಮಾಡುವ ಸಲುವಾಗಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಈ ಬಗ್ಗೆ ಉಚಿತವಾಗಿ ನಿವೇಶನ ಹಂಚಿಕೆ ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲವೆಂದು ಆಯುಕ್ತರು ತಿಳಿಸಿದರು ಆದರೆ ಮಾನ್ಯ ಜಿಲ್ಲಾಧಿಕಾರಿಗಳು ಸದರೀ ಸಂಘವು ಸರ್ಕಾರದ ಅನುದಾನದಿಂದ ನಡೆಯುತ್ತಿರುವ ಸಂಘವಾಗಿರುವುದರಿಂದ ಶೇಕಡ 50 ರ ದರದಲ್ಲಿ ವಿತರಿಸಲು ವಿವರಗಳನ್ನು ಪರಿಶೀಲಿಸಿ ಪರಿಗಣಿಸಬೇಕೆಂದು ಸೂಚಿಸಿದರು. ಅದರಂತೆ, ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ. 4 :**

ಶ್ರೀ ರಂಗಾರಾಂ ವಿದ್ಯಾ ಸಂಸ್ಥೆ ಬಿಳೇಕಲ್ಲು ರವರ ಶಾಲಾ ನಿವೇಶನಕ್ಕೆ ರಸ್ತೆಯನ್ನು ಮಾಡಿಕೊಡುವ ಬಗ್ಗೆ ಕೋರಿರುವ ಕುರಿತು.

**ಟಿಪ್ಪಣಿ :**

ಕಾರ್ಯದರ್ಶಿ ಶ್ರೀ ರಂಗಾರಾಂ ವಿದ್ಯಾ ಸಂಸ್ಥೆ ಬಿಳೇಕಲ್ಲು ರವರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಪ್ರಾಧಿಕಾರದ ವಸತಿ ಬಡಾವಣೆಯ 4 ನೇ ಹಂತದಲ್ಲಿ ಒಂದು ನಾಗರೀಕ ಸೌಲಭ್ಯದ ನಿವೇಶನವನ್ನು ಈಗಾಗಲೇ ಹಂಚಿಕೆ ಮಾಡಲಾಗಿದ್ದು ಸದರೀ ನಿವೇಶನ ಉತ್ತರ ಭಾಗದಲ್ಲಿ ನೀರಾವರಿ ಚಾನಲ್ ಹಾಗೂ ಮಣ್ಣಿನ ಗುಡ್ಡ ಇರುವುದರಿಂದ ನಿವೇಶನಕ್ಕೆ ಹೋಗಿ ಬರಲು ದಾರಿ ಇರುವುದಿಲ್ಲವೆಂದು ತಿಳಿಸಿ ನಿವೇಶನದ ಪಕ್ಕದಲ್ಲಿನ ಉದ್ಯಾನವನದ ಬದಿಯಲ್ಲಿ ರಸ್ತೆ ಮಾಡಿಸಿಕೊಡುವಂತೆ ಕೋರಿ ದಿನಾಂಕ: 28-08-2009 ರಲ್ಲಿ ಮನವಿ ನೀಡಿರುತ್ತಾರೆ, ಸದರಿ ಜಾಗಕ್ಕೆ ಸರಿಯಾದ ರಸ್ತೆ ಸಂಪರ್ಕ ಇಲ್ಲದಿರುವುದರಿಂದ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಪ್ರಾಧಿಕಾರದ ಉದ್ಯಾನವನ ಜಾಗದ ಬದಿಯಲ್ಲಿ ನಾಗರೀಕ ಸೌಲಭ್ಯದ ನಿವೇಶನಕ್ಕೆ ರಸ್ತೆ ಬಿಟ್ಟುಕೊಡಲು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ:**

ಮೇಲಿನ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಕಾರ್ಯದರ್ಶಿ ಶ್ರೀ ರಂಗರಾಂ ವಿದ್ಯಾಸಂಸ್ಥೆ ಬಿಳಿಕಲ್ಲು ಇವರಿಗೆ ಈ ಹಿಂದೆಯೇ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡದ ಆಡಳಿತ ಸಂಸ್ಥೆ ಮಾಡಿದ್ದು, ಇವರು ಶಾಲಾ ಕಟ್ಟಡ ನಿರ್ಮಿಸಲು ನಿವೇಶನ ಹಂಚಿಕೆ ಮಾಡಲಾಗಿದ್ದು, ಸದರೀ ಸಂಸ್ಥೆಯವರು ಕೇಳಿರುವಂತೆ ಪಾರ್ಕ್‌ನಲ್ಲಿ ದಾರಿ ಬಿಟ್ಟು ಕೊಡದೆ ಸದರಿ ನಿವೇಶನವನ್ನು ಪಾರ್ಕ್‌ನೊಂದಿಗೆ ವಿಲೀನ ಮಾಡಿಕೊಳ್ಳುವಂತೆ ಹಾಗೂ ಅವರಿಗೆ ಬೇರೆ ನಿವೇಶನ ಹಂಚಿಕೆ ಮಾಡಲು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು, ಅದರಂತೆ ಕ್ರಮ ವಹಿಸಲು ತಪ್ಪಿದಲ್ಲಿ ಸದರೀ ವಿದ್ಯಾಸಂಸ್ಥೆಯವರೇ ನಿವೇಶನಕ್ಕೆ ಹೋಗಲು ದಾರಿ ಮಾಡಿಕೊಂಡಲ್ಲಿ ಯಾವುದೇ ಅಭ್ಯಂತರವಿರುವುದಿಲ್ಲವೆಂದು ಸಭೆಯು ತೀರ್ಮಾನಿಸಿತು.

**ವಿಷಯ ನಂ 5.**

ಶ್ರೀಮತಿ ಜಯಶ್ರೀ ಕೊಂ ನಂಜರಾಜ್, ಬೆಲ್ಟ್ ರಸ್ತೆ, ಚಿಕ್ಕಮಗಳೂರು. ಮತ್ತು ಶ್ರೀ ಕೆ. ಎಸ್. ಗುರುಶಾಂತಪ್ಪ, ಹಿಂದೂಸ್ಥಾನ್ ಲಾಡ್ಜ್ ಬಾರ್‌ಲೈನ್ ರಸ್ತೆ, ಚಿಕ್ಕಮಗಳೂರು. ರವರು ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ 40 x 60 ಅಳತೆಯ ನಿವೇಶನ ಕೋರಿ ಅರ್ಜಿ ಸಲ್ಲಿಸಿರುವ ಕುರಿತು.

**ಟಿಪ್ಪಣಿ :**

ಶ್ರೀಮತಿ ಜಯಶ್ರೀ ಕೊಂ ನಂಜರಾಜ್, ಬೆಲ್ಟ್ ರಸ್ತೆ ಚಿಕ್ಕಮಗಳೂರು. ಮತ್ತು ಶ್ರೀ ಕೆ. ಎಸ್. ಗುರುಶಾಂತಪ್ಪ, ಹಿಂದೂಸ್ಥಾನ್ ಲಾಡ್ಜ್ ಬಾರ್‌ಲೈನ್ ರಸ್ತೆ, ಚಿಕ್ಕಮಗಳೂರು. ರವರು ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ 40 x 60 ಅಳತೆಯ ನಿವೇಶನ ಕೋರಿ ನಿಗದಿತ ಅವದಿಯೊಳಗೆ ನೊಂದಣಿ ಮಾಡಿಸಿ ನಿವೇಶನದ ಶೇಕಡ 10 ರಷ್ಟು ಹಣವನ್ನು ಪಾವತಿಸದೆ ತಡವಾಗಿ ಅಂದರೆ ದಿನಾಂಕ: 30-09-2006 ರೊಳಗೆ ಪಾವತಿಸುವ ಬದಲು ದಿನಾಂಕ: 13-02-2007 ರಲ್ಲಿ ಪಾವತಿಸಿರುತ್ತಾರೆ, ಆದುದರಿಂದ ಇವರಿಗೆ ನಿವೇಶನ ಕೋರಿ ಅರ್ಜಿ ಸಲ್ಲಿರುವ ಅರ್ಜಿದಾರರ ಪಟ್ಟಿಗೆ ಸೇರಿಸುವ ಬಗ್ಗೆ, ವಿಷಯವನ್ನು ಸಭೆಯ ಮುಂದೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ ಅರ್ಜಿದಾರರಾದ ಶ್ರೀ ಕೆ. ಎಸ್. ಗುರುಶಾಂತಪ್ಪ ಹಾಗೂ ಶ್ರೀಮತಿ ಜಯಶ್ರೀ ರವರು ನಿಗದಿಪಡಿಸಿದ ಅವಧಿಯೊಳಗೆ ನಿವೇಶನದ ಶೇಕಡ 10 ರಷ್ಟು ಮೊತ್ತವನ್ನು ಪಾವತಿಸದೆ ಇರುವುದರಿಂದ ಹಂಚಿಕೆ ಪಟ್ಟಿಯಲ್ಲಿನ ಸೀನಿಯಾರಿಟಿ ಲೀಸ್ಟ್‌ನಲ್ಲಿ ಸೇರಿಸಲು ಬರುದಿಲ್ಲವೆಂದು ಹಾಗೂ ಮುಂದೆ ನಿವೇಶನ ಹಂಚಿಕೆ ಮಾಡುವ ಲೇಔಟ್‌ಗಳಲ್ಲಿ ಇವರಿಗೆ ಆದ್ಯತೆ ನೀಡಬೇಕೆಂದು ಸಭೆಯು ತೀರ್ಮಾನ ನೀಡಿತು.

**ವಿಷಯ ನಂ 6.**

ಶ್ರೀ ವಿ. ಎಸ್. ಪರಮೇಶ್ ಬಿನ್ ಶಿವನಂಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 864 ರಲ್ಲಿನ 00 ಎಕರೆ 21 ಗುಂಟೆ ವಿಸ್ತೀರ್ಣಕ್ಕೆ ಕೈಗಾರಿಕೆ (ಬೆಲ್ಲಾ ತಯಾರಿಕಾ ಘಟಕ) ಉದ್ದೇಶಕ್ಕೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ವಿ. ಎಸ್. ಪರಮೇಶ್ ಬಿನ್ ಶಿವನಂಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 864 ರಲ್ಲಿನ 00 ಎಕರೆ 21 ಗುಂಟೆ ವಿಸ್ತೀರ್ಣಕ್ಕೆ ಕೈಗಾರಿಕೆ (ಬೆಲ್ಲಾ ತಯಾರಿಕಾ ಘಟಕ) ಉದ್ದೇಶಕ್ಕೆ ಭೂ ಪರಿವರ್ತಿಸಲು ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಗೆ ಅರ್ಜಿ ಸಲ್ಲಿಸಿ ತಾಂತ್ರಿಕ ಅಭಿಪ್ರಾಯ ಕೋರಿ ಈ ಕಛೇರಿಗೆ ಸಲ್ಲಿಸಿರುತ್ತಾರೆ, ಸದರಿ ಪ್ರದೇಶವು ಹಾಲಿ 24.00 ಮೀಟರ್ ಅಗಲದ ಬಿಳೀಕೆರೆ ತರೀಕೆರೆ ರಾಜ್ಯ ಹೆದ್ದಾರಿ ರಸ್ತೆಗೆ ಅಭಿಮುಖವಾಗಿರುತ್ತದೆ, ಮತ್ತು ಸದರಿ ಪ್ರದೇಶವು ಸಿ. ಡಿ. ಪಿ. ನಕ್ಷೆಯಲ್ಲಿ ಮತ್ತು ಮಹಾ ಯೋಜನೆ ಪರಿಷ್ಕೃತ– 1 ರಲ್ಲಿಯೂ ಸಹ ಕೃಷಿ ವಲಯದಲ್ಲಿರುತ್ತದೆ, ವಲಯ ನಿಯಮಾವಳಿ ಪುಟ ಸಂಖ್ಯೆ 65 (ಬಿ) ರ ಅನ್ವಯ ಕೃಷಿ ವಲಯದಲ್ಲಿ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ವಿ. ಎಸ್. ಪರಮೇಶ್ ಬಿನ್ ಶಿವನಂಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 864 ರಲ್ಲಿನ 00 ಎಕರೆ 21 ಗುಂಟೆ ವಿಸ್ತೀರ್ಣಕ್ಕೆ ಕೈಗಾರಿಕೆ (ಬೆಲ್ಲಾ ತಯಾರಿಕಾ ಘಟಕ) ಉದ್ದೇಶಕ್ಕೆ ಭೂ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯ ಕೋರಿದ್ದು ಸದರಿ ಪ್ರದೇಶವು ಹಾಲಿ 24.00 ಮೀಟರ್ ಅಗಲದ ರಾಜ್ಯ ಹೆದ್ದಾರಿ ರಸ್ತೆಗೆ ಅಭಿಮುಖವಾಗಿರುತ್ತದೆ, ಮತ್ತು ಸದರಿ ಪ್ರದೇಶವು ಸಿ. ಡಿ. ಪಿ. ನಕ್ಷೆಯಲ್ಲಿ ಮತ್ತು ಮಹಾ ಯೋಜನೆ ಪರಿಷ್ಕೃತ– 1 ರಲ್ಲಿಯೂ ಸಹ ಕೃಷಿ ವಲಯದಲ್ಲಿರುತ್ತದೆ, ವಲಯ ನಿಯಮಾವಳಿ ಪುಟ ಸಂಖ್ಯೆ 65 (ಬಿ) ರ ಅನ್ವಯ ಕೃಷಿ ವಲಯದಲ್ಲಿ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಶ್ರೀ ವಿ. ಎಸ್. ಪರಮೇಶ ಬಿನ್ ಶಿವನಂಜೇಗೌಡ ಇವರಿಗೆ ನಗರ ಯೋಜನಾ ಸದಸ್ಯರು ಟಿಪ್ಪಣಿಯಲ್ಲಿ ತಿಳಿಸಿರುವಂತೆ ಹಿರೇಮಗಳೂರು ಗ್ರಾಮದ ಸರ್ವೆ ನಂ. 864 ರಲ್ಲಿನ 00 ಎಕರೆ 21 ಗುಂಟೆ ವಿಸ್ತೀರ್ಣಕ್ಕೆ ಕೈಗಾರಿಕೆ (ಬೆಲ್ಲ ತಯಾರಿಕಾ ಘಟಕ) ಸ್ಥಾಪನೆಗೆ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 7.**

ಸನ್ಮಾನ್ಯ ಶಾಸಕರಾದ ಶ್ರೀ ಸಿ. ಟಿ. ರವಿರವರು ದಿನಾಂಕ: 02-09-2009 ರಂದು ಪ್ರಾಧಿಕಾರದ ವ್ಯಾಪ್ತಿಯಲ್ಲಿ ಅವರು ಚಿಕ್ಕಮಗಳೂರು ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ನಂತರ ಪ್ರಾಧಿಕಾರದ ವತಿಯಿಂದ ನಡೆದಿರುವ ಕೆಳಕಂಡ ಮಾಹಿತಿಗಳನ್ನು ಸಲ್ಲಿಸುವಂತೆ ಹಾಗೂ ವಿಷಯವನ್ನು ಸಭೆಯ ಮುಂದೆ ಮಂಡಿಸುವಂತೆ ಸೂಚನೆ ನೀಡಿರುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ 1991 - 92 ನೇ ಸಾಲಿನಲ್ಲಿ ಪ್ರಥಮವಾಗಿ 135 ಎಕರೆ ಜಮೀನಿನಲ್ಲಿ ವಿವಿಧ ಅಳತೆಯ ನಿವೇಶನಗಳನ್ನು ರಚಿಸಿ ನಿಯಮಾನುಸಾರ ಹಂಚಿಕೆ ಮಾಡುವಂತೆ ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಇದರಲ್ಲಿ 06 ಎಕರೆ 02 ಗುಂಟೆ (ಸರ್ವೆ ನಂ. 519) ಭೂಮಿಯ 4 (1) ಹಾಗೂ 6 (1) ನೋಟಿಫಿಕೇಷನ್‌ಅನ್ನು ಹೈಕೋರ್ಟ್ ರದ್ದುಪಡಿಸಿದ್ದರಿಂದ ಸದರಿ ಭೂಮಿಯನ್ನು ಯೋಜನೆಯಿಂದ ಕೈಬಿಡಲು ಪ್ರಾಧಿಕಾರವು ತೀರ್ಮಾನಿಸಿದಂತೆ ಕೈಬಿಡಲಾಗಿದೆ, ಉಳಿದಂತೆ 2004 ರ ಅವಧಿಯ ನಂತರ ಸರ್ಕಾರ ಅನುಮೋದನೆ ಮಾಡಿದ್ದ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಿ ಕಾಯ್ದಿರಿಸಿದ್ದ ಲ್ಯಾಂಡ್ ಬ್ಯಾಂಕ್, ನಾಗರೀಕ ಸೌಕರ್ಯದ ನಿವೇಶನದ ಕೆಲವು ಭಾಗಗಳು ಮತ್ತು ಒಂದು ಪಾರ್ಕಿನ ಕೆಲವು ಭಾಗಗಳನ್ನು ವಸತಿ ನಿವೇಶನಗಳನ್ನಾಗಿ ಬದಲಾಯಿಸಿ ವಿಂಗಡಿಸಲಾಗಿದೆ, ಮತ್ತು 47 ವಿವಿಧ ಅಳತೆಯ ನಿವೇಶನಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿವೇಶನ ಹಂಚಿಕೆ ನಿಯಮಗನ್ನು ಉಲ್ಲಂಘಿಸಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸದೇ ಅವೈಜ್ಞಾನಿಕವಾಗಿ ಪ್ರತಿ ಚದರ ಅಡಿಗೆ ರೂ. 20=00 ರ ದರದಲ್ಲಿ ನೇರವಾಗಿ ನಿವೇಶನಗಳ ಹಂಚಿಕೆಯನ್ನು ಮಾಡಿ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವನ್ನೂಂಟು ಮಾಡಲಾಗಿದೆ, ಈ ಬಗ್ಗೆ ವಿಷಯವನ್ನು ಚರ್ಚೆಗೆ ಮಂಡಿಸಲಾಗಿದ್ದು ಅಗತ್ಯ ಕ್ರಮವಹಿಸಲು ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಈ ಕೆಳಕಂಡಂತೆ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ಚರ್ಚಿಸಲಾಯಿತು.

ಅ) ದಿನಾಂಕ: 28-02-2004 ರ ಪ್ರಾಧಿಕಾರ ಸಭೆಯು ಕೈಗೊಂಡಿರುವ ವಿಷಯ ನಂ. 8 ರ ನಿರ್ಣಯದಂತೆ ನಿವೇಶನಗಳಿಗೆ ಬೇಡಿಕೆ ಇಲ್ಲ ಆದರೆ ಬೇಡಿಕೆ ಇಲ್ಲದಾಗ ಮೀಸಲಿಟ್ಟಿದ್ದ ಲ್ಯಾಂಡ್ ಬ್ಯಾಂಕ್ ಭೂಮಿಯನ್ನು ಮಾರ್ಪಾಡಿಸಿ ನಿವೇಶನಗಳಾಗಿ ವಿಂಗಡಿಸಿರುವುದು ಏಕೆ ಎಂಬ ಬಗ್ಗೆ ಚರ್ಚೆಯಾಯಿತು. ಇದು ಅಕ್ರಮ ಮಾಡುವ ಉದ್ದೇಶದಿಂದ ಆಗಿರುವ ನಿರ್ಣಯವೆಂದು ತೀರ್ಮಾನಿಸಲಾಯಿತು.

ಆ) ನಾಗರೀಕ ಸೌಲಭ್ಯದ ನಿವೇಶನ ಹಾಗೂ ಪಾರ್ಕ್‌ನ್ನು ಮಾರ್ಪಾಡಿಸಿ ನಿವೇಶನಗಳನ್ನಾಗಿ ವಿಂಗಡಿಸಿರುವುದು ಅಕ್ರಮ ಎಂದು ತೀರ್ಮಾನಿಸಿತು.

ಇ) ಮೇಲ್ಕಂಡಂತೆ ವಿಂಗಡಿಸಿರುವ ನಿವೇಶನಗಳನ್ನು ಹಂಚಿಕೆ ಮಾಡುವಾಗ ನಿವೇಶನಗಳನ್ನು ಗುರುತು ಮಾಡಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಾರ್ವಜನಿಕ ಪ್ರಕಟಣೆ ನೀಡಿ ನಿಯಮಾವಳಿಗಳಂತೆ ಆಯ್ಕೆ ಮಾಡಿ ಹಂಚಿಕೆ ಮಾಡಿರುವುದಿಲ್ಲ ಇದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನಗಳ ಹಂಚಿಕೆ ನಿಯಮ 1991 ರ ಸ್ಪಷ್ಟ ಉಲ್ಲಂಘನೆ ಆಗಿರುತ್ತದೆ.

ಈ) 2005 ನೇ ಸಾಲಿನಲ್ಲಿ ಹಂಚಿಕೆ ಮಡುವಾಗ 1991 ರಲ್ಲಿ ನಿಗದಿ ಪಡಿಸಿದ್ದ ಪ್ರತಿ ಚದರ ಅಡಿಗೆ 20.00 ರೂಪಾಯಿಗಳನ್ನು ನಿಗದಿ ಮಾಡಿ ಪ್ರಾಧಿಕಾರದ ಲಾಭಕ್ಕೆ ನಷ್ಟ ಉಂಟು ಮಾಡಿರುವುದು ಅಕ್ರಮ ಎಂದು ತೀರ್ಮಾನಿಸಿತು. ಈ ಹಂಚಿಕೆಗೂ ಮುನ್ನ ದಿನಾಂಕ: 19-05-2004 ರ ಹರಾಜಿನಲ್ಲಿ ಇದೇ ಭಾಗದ ನಿವೇಶನಗಳು ರೂ.60.00 ಕಿಂತ ಹೆಚ್ಚಿನ ರೂಪಾಯಿಗಳಿಗೆ ಮಾರಾಟವಾಗಿರುವುದರಿಂದ ರೂ. 20.00 ಗಳಿಗೆ ಹಂಚಿಕೆ ಮಾಡಿರುವುದು ಅಕ್ರಮ ಎಂದು ತೀರ್ಮಾನಿಸಲಾಯಿತು.

ಉ) 2005-06 ನೇ ಸಾಲಿನಲ್ಲಿ 2 ಮೂಲೆ ನಿವೇಶನಗಳನ್ನು ಸಹ ಇದೇ ಬೆಲೆಗೆ (ಪ್ರತಿ ಚದರ ಅಡಿಗೆ ರೂ. 20.00) ಹರಾಜು ಮಾಡದೇ ನೇರವಾಗಿ ಹಂಚಿಕೆ ಮಾಡಿರುವುದನ್ನು ಅಕ್ರಮವೆಂದು ತೀರ್ಮಾನಿಸಿತು. ಇದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ನಿವೇಶನಗಳ ಹಂಚಿಕೆ) ನಿಯಮಗಳ ಸ್ಪಷ್ಠ ಉಲ್ಲಂಘನೆ ಆಗಿರುತ್ತದೆ ಎಂದು ತೀರ್ಮಾನಿಸಲಾಯಿತು.

ಊ) ಮೇಲ್ಕಂಡ ನಿವೇಶನಗಳನ್ನು ಹಂಚಿಕೆ ಮಾಡಿದ ನಂತರ ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 12 : ಬೆಂರೂಪ್ರಾ : 2005 ದಿನಾಂಕ: 14-06-2005 ರ ಆದೇಶದಂತೆ 10 ವರ್ಷಗಳಿಗೆ ಗುತ್ತಿಗೆ ಮತ್ತು ಕ್ರಯ ಪತ್ರವನ್ನು ಮಡಿಕೊಡಬೇಕಿತ್ತು. ಆದರೆ ಈ ಮೇಲ್ಕಂಡ ಪ್ರಕರಣಗಳಿಗೆ ಮಾತ್ರ ನೇರ ಕ್ರಯ ಪತ್ರಗಳನ್ನು ಮಾಡಿಕೊಡಲಾಗಿದೆ. ಇದು ದಿನಾಂಕ: 14-06-2005 ರ ಸುತ್ತೋಲೆಯ ಹಾಗೂ ಮೂಲೆ ನಿವೇಶನ ನಿಯಮಗಳ ಸ್ಪಷ್ಠ ಉಲ್ಲಂಘನೆ ಆಗಿರುತ್ತದೆ ಎಂದು ತೀರ್ಮಾನಿಸಲಾಯಿತು. ಸದರಿ ಅಕ್ರಮ ಹಂಚಿಕೆಗೆ ಕಾರಣ ಕರ್ತರಾಗಿರುವವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ವರದಿ ಮಾಡಲು ಸಭೆ ತೀರ್ಮಾನಿಸಿತು.

**ವಿಷಯ ನಂ 8.**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಛೇರಿಯಲ್ಲಿ ಕಮಾಂಡರ್ ಸೆಕ್ಯೂರಿಟಿ ಸರ್ವಿಸಸ್ ಚಿಕ್ಕಮಗಳೂರು ಇವರ ಸಂಸ್ಥೆಯಿಂದ ಕೆಲಸ ನಿರ್ವಹಿಸುತ್ತಿರುವವರಿಗೆ ಸಂಬಳ ಹೆಚ್ಚಿಸಿಕೊಡುವ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಛೇರಿಯಲ್ಲಿ ವಿವಿದ ಕೆಲಸಗಳಿಗೆ ಕಮಾಂಡರ್ ಸೆಕ್ಯೂರಿಟಿ ಸರ್ವಿಸಸ್ ಚಿಕ್ಕಮಗಳೂರು ಇವರ ಸಂಸ್ಥೆಯಿಂದ ವಿವಿದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುತ್ತಾರೆ, ಅವರಲ್ಲಿ ಕಂಪ್ಯೂಟರ್ ಆಪರೇಟರ್ ಮತ್ತು ಟೆಕ್ನಿಕಲ್ ಅಸಿಸ್ಟೆಂಟ್ ಆಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ಕುಮಾರ ನಾಯ್ಕ ರವರು ಡಿಪ್ಲಮೋ ಸಿವಿಲ್ ಇಂಜಿನಿಯರ್ ಪದವಿ ಪಡೆದಿರುತ್ತಾರೆ ಸದರಿಯವರು 2005 ರಿಂದ ಹೊರ ಗುತ್ತಿಗೆ ಆದಾರದ ಮೇಲೆ ಕೆಲಸ ನಿರ್ವಹಿಸುತ್ತಿರುತ್ತಾರೆ, ಹಾಗೂ ಪ್ರಾಧಿಕಾರದ ಕಛೇರಿಯಲ್ಲಿ ಸುಮಾರು 2 ವರ್ಷಗಳಿಂದ ಈ ಕಛೇರಿಯಲ್ಲಿ ಸಹಾಯಕ ಇಂಜಿನಿಯರ್ ರವರು ಅನಾರೋಗ್ಯದಿಂದ ಇದ್ದ ಸಂದರ್ಭದಲ್ಲಿ ಮತ್ತು ಅವರು ಮರಣ ಹೊಂದಿದ ನಂತರ ನಗರ ಯೋಜನಾ ಇಲಾಖೆಯ ಅಭಿಯಂತರರಿಂದ ಸೇವೆ ಪಡೆಯಲಾಗುತ್ತಿದ್ದು, ಸದರಿ ಅವಧಿಯಲ್ಲಿ ತಾಂತ್ರಿಕ ಶಾಖೆಗೆ ಸಂಬಂದಿಸಿದ ಅಂದಾಜು ಪಟ್ಟಿ ತಯಾರಿಸುವುದು ಟೆಂಡರ್ ಕಾಮಗಾರಿ ಹಾಗೂ ಇನ್ನಿತರೆ ಸಿವಿಲ್ ಕಾಮಗಾರಿಗಳಿಗೆ ಸಂಬಂದಿಸಿದ ಕೆಲಸಗಳನ್ನು ಸದರಿಯವರಿಂದಲೇ ಪಡೆಯಲಾಗುತ್ತಿದೆ.

ಆದುದರಿಂದ ಸದರಿಯವರು ಈಗ ನೀಡುತ್ತಿರುವ ಸಂಬಳ ಜೀವನೋಪಾಯಕ್ಕಾಗಿ ಸಾಕಾಗುತ್ತಿಲ್ಲವೆಂದು ತಿಳಿಸಿರುತ್ತಾರೆ, ಮತ್ತು ಎಲ್ಲಾ ಸಿಬ್ಬಂದಿಗಳು ಸಂಬಳ ಹೆಚ್ಚು ಮಾಡಿಕೊಡಲು ಕೋರಿರುತ್ತಾರೆ ಎಂದು ಕಮಾಂಡರ್ ಸೆಕ್ಯೂರಿಟಿ ಸರ್ವಿಸಸ್ ಚಿಕ್ಕಮಗಳೂರು ರವರು ಮನವಿ ಸಲ್ಲಿಸಿರುತ್ತಾರೆ, ಆದರಂತೆ ಎಲ್ಲಾ ಸಿಬ್ಬಂದಿಗಳಿಗೂ ಹಾಗೂ ಶ್ರೀ ಕುಮಾರ ನಾಯ್ಕ ಇವರು ಕಂಪ್ಯೂಟರ್ ಆಪರೇಟರ್ ಮತ್ತು ತಾಂತ್ರಿಕ ಸಾಖೆಗೆ ಸಂಬಂಧಿಸಿದ ಕೆಲಸಗಳನ್ನು ಸಹ ನಿರ್ವಹಿಸುತ್ತಿರುವುದರಿಂದ ಹಾಗೂ ಸದರಿಯವರ ಸೇವೆಯು ಅವಶ್ಯವಿರುವುದರಿಂದ ಸದರಿಯವರಿಗೆ ಸಂಬಳ ಹೆಚ್ಚಿಸಿಕೊಡುವ ಬಗ್ಗೆ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ:**

ಮೇಲ್ಕಂಡ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಹೊರಗುತ್ತಿಗೆ ಆದಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ತಾಂತ್ರಿಕ ಸಿಬ್ಬಂದಿಯು ತಾಂತ್ರಿಕ ಮತ್ತು ಕಂಪ್ಯೂಟರ್ ವಿಭಾಗ ಎರಡರಲ್ಲೂ ಕಾರ್ಯ ನಿರ್ವಹಿಸುತ್ತಿರುವುದರಿಂದ ಸದರೀ ಕಾರ್ಯಗಳಿಗೆ ನಿಗದಿಪಡಿಸಿರುವ ಕನಿಷ್ಠ ವೇತನ ದರಗಳನ್ನು ಲೋಕೋಪಯೋಗಿ ದರಸೂಚಿ ಪಟ್ಟಿಯಂತೆ ಪರಿಶೀಲಿಸಿ ಅದರಂತೆ ಇರುವ ಗರಿಷ್ಠ ವೇತನವನ್ನು ನಿಗದಿಪಡಿಸಿ ನೀಡಬಹುದಾಗಿದೆ. ಮತ್ತು ಅದೇ ರೀತಿ ಇತರೆ ಸಿಬ್ಬಂದಿಗಳಿಗೆ ಸಹ ಪ್ರಸಕ್ತದರಗಳು ಅನ್ವಯಿಸುತ್ತದೆ ಎಂದು ಸಭೆಯು ತೀರ್ಮಾನಿಸಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 30-10-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಮಾಸಿಕ ಸಭೆಯ ತೀರ್ಮಾನಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 4 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 8 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 9 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 10 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ನಗರ ಯೋಜನಾ ಸದಸ್ಯರು) | ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. | ಸದಸ್ಯರು |
| 12 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 13 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಚಿಕ್ಕಮಗಳೂರು | ಸದಸ್ಯರು |
| 14 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 3 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 4 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. | ಸದಸ್ಯರು |
| 5 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ವಿಷಯ ನಂ 1.**

ದಿನಾಂಕ: 05-09-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 05-09-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ:**

ದಿನಾಂಕ: 05-09-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ತೀರ್ಮಾನಗಳನ್ನು ಸ್ಥಿರೀಕರಣಕ್ಕೆ ಮಂಡಿಸಲಾಯಿತು. ಸದರಿ ಸಭೆಯ ತೀರ್ಮಾನಗಳನ್ನು ಪುನಃ ಚರ್ಚಿಸಿ, ವಿಷಯ ಸಂಖ್ಯೆ. 10 ಮತ್ತು ಇತರೆ ವಿಷಯ ಸಂಖ್ಯೆ. 01 ರ ಬಗ್ಗೆ ಮತ್ತೊಮ್ಮೆ ಚರ್ಚಿಸಲು ಮಾನ್ಯ ಸದಸ್ಯರುಗಳು ಕೋರಿದ್ದು ಅವುಗಳನ್ನು ಹೊರತುಪಡಿಸಿ ಉಳಿದ ವಿಷಯಗಳ ತೀರ್ಮಾನಗಳನ್ನು ಸಭೆಯಲ್ಲಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

**ವಿಷಯ ನಂ 2.**

2009 ನೇ ಸಾಲಿನ ಆಗಸ್ಟ್ ಮತ್ತು ಸೆಪ್ಟಂಬರ್ ಮಾಹೆಗಳ ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

2009 ನೇ ಸಾಲಿನ ಆಗಸ್ಟ್ ಮತ್ತು ಸೆಪ್ಟಂಬರ್ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ:**

2009 ನೇ ಆಗಸ್ಟ್ ಮತ್ತು ಸೆಪ್ಟಂಬರ್ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ– 1 ಮತ್ತು ಅನುಬಂಧ– 2 ರಲ್ಲಿನ ಆದಾಯ ಮತ್ತು ವೆಚ್ಚಗಳ ವಿವರಗಳನ್ನು ಪರಿಶೀಲಿಸಿ ಲೆಕ್ಕಪರಿಶೋದನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆಯ, ಅಂತಿಮಗೊಳಿಸವ ಸಂಬಂದ ಸಾರ್ವಜನಿಕರು ಸಲ್ಲಿಸಿರುವ ತಕರಾರು ಅರ್ಜಿಗಳನ್ನು ಪರಿಶೀಲಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ಪಟ್ಟಣದ ಮಹಾಯೊಜನೆಯನ್ನು ತಯಾರಿಸಲಾಗಿದ್ದು, ಸದರಿ ಮಹಾಯೋಜನೆ ಪರಿಷ್ಕೃತ –I (ತಾತ್ಕಾಲಿಕ) ಕ್ಕೆ ಸರ್ಕಾರದ ಆದೇಶ ಸಂಖ್ಯೆ. ನಅಇ : 773 : ಮೈಅಪ್ರಾ : 2008 ದಿನಾಂಕ: 31-12-2008 ರಲ್ಲಿ ತಾತ್ಕಾಲಿಕ ಅನುಮೋದನೆಯಾಗಿರುತ್ತದೆ. ಈ ಮಹಾಯೋಜನೆಯನ್ನು ಅಂತಿಮಗೊಳಿಸುವ ಸಂಬಂದ ಕ್ರಮ ಸಂಖ್ಯೆ. ನಅಪ್ರಾಚಿ : ನಯೋಪ : 05 : 2008-09 ದಿನಾಂಕ: 12-03-2009 ರಂದು ಸಾರ್ವಜನಿಕರಿಂದ ಆಕ್ಷೇಪಣೆ / ಸಲಹೆ ನೀಡಲು ಪತ್ರಿಕೆ ಪ್ರಕಟಣೆ ನೀಡಲಾಗಿರುತ್ತದೆ. ಸದರಿ ಪ್ರಕಟಣೆಯು ಕರ್ನಾಟಕ ರಾಜ್ಯ ಪತ್ರ ಗುರುವಾರ ಮಾರ್ಚ್ 26-2009 ಭಾಗ 6 ಎ ರಲ್ಲಿ ಪ್ರಕಟವಾಗಿರುತ್ತದೆ. ಅದರಂತೆ, ಸಾರ್ವಜನಿಕರು ಹಲವು ಆಕ್ಷೇಪಣೆ / ಸಲಹೆಗಳನ್ನು ಸಲ್ಲಿಸಿರುತ್ತಾರೆ. ಸಲ್ಲಿಸಿರುವ ಆಕ್ಷೇಪಣೆಗಳನ್ನು ಪರಿಗಣಿಸುವ ಸಂಬಂಧ ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ತೀರ್ಮಾನದಂತೆ ಕ್ರಮವಹಿಸಬಹುದಾಗಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:**

ಈ ಸಂಬಂಧ ಸಲ್ಲಿಸಿರುವ ಆಕ್ಷೇಪಣೆಗಳನ್ನು ಯೋಜನಾ ಅನುಸಾರ ಪರಿಶೀಲಿಸಲಾಗುತ್ತಿದ್ದು ಎಲ್ಲಾ ಪ್ರಕರಣಗಳನ್ನು ಸಭೆಗೆ ಮಂಡಿಸಿ ಸಭೆಯ ತೀರ್ಮಾನದಂತೆ ಮುಂದಿನ ಕ್ರಮ ವಹಿಸಬಹುದಾಗಿದೆ. ಸಂಬಂದಿಸಿದ ಎಲ್ಲಾ ಮಾಹಿತಿ / ವಿವರಗಳನ್ನು ಸಭೆಯಲ್ಲಿ ಒದಗಿಸಲಾಗುವುದು.

ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ಪರಿಷ್ಕೃತ–I (ಅಂತಿಮ) ಅನುಮೋದನೆಗಾಗಿ ಸಾರ್ವಜನಿಕರಿಂದ ಒಟ್ಟು 337 ಆಕ್ಷೇಪಣೆಗಳು ಬಂದಿರುತ್ತವೆ. ಬಂದಿರುವ ಬಹುತೇಕ ಆಕ್ಷೇಪಣೆಗಳಲ್ಲಿ ಕೃಷಿ ವಲಯದಿಂದ ವಸತಿ ವಲಯಕ್ಕೆ ಬದಲಾವಣೆಗಾಗಿ ಕೋರಲಾಗಿದೆ. ಆದರೆ ಅನುಮೋದಿಸಿ ಮಹಾಯೋಜನೆ– R1 (ತಾತ್ಕಾಲಿಕ) ರಲ್ಲಿ ಪ್ರಸ್ತಾವಿತ ಜನಸಂಖ್ಯೆ ಆಧಾರದ ಮೇಲೆ 2021 ನೇ ಇಸವಿಗೆ ನಗರೀಕರಣಕ್ಕೆ ಅವಶ್ಯವಿರುವ ವಿಸ್ತೀರ್ಣವನ್ನು ನಿಗದಿಪಡಿಸಲಾಗಿದೆ. ಆಕ್ಷೇಪಣೆಗಳಲ್ಲಿ ಹೊಸದಾಗಿ ಕೃಷಿ ವಲಯದಿಂದ ವಸತಿಗಾಗಿ ಕೋರಿರುವ ವಿಸ್ತೀರ್ಣವು ಸುಮಾರು 600 ಎಕರೆ ವಿಸ್ತೀರ್ಣವಾಗಿರುತ್ತದೆ. ಈ ರೀತಿಯ ಹೆಚ್ಚುವರಿ ವಿಸ್ತೀರ್ಣವನ್ನು ನಗರೀಕರಣ ಎಲ್ಲೆಗೆ ಸೇರಿಸಿಕೊಳ್ಳುವುದು ಯೋಜನಾ ದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ ಹಾಗೂ ಪ್ರಸ್ತಾವಿತ ನಗರೀಕರಣದ ಗಡಿಯು ಪಕ್ಕದಲ್ಲಿ ಕೆಲವು ಕಡಿಮೆ ವಿಸ್ತೀರ್ಣದ ಆಕ್ಷೇಪಣೆಗಳು ಬಂದಿರುತ್ತವೆ. ಅವುಗಳನ್ನು ಪರಿಗಣಿಸಬಹುದಾಗಿದೆ. ಬದಲಾವಣೆಗೆ ಕೆಲವು ಆಕ್ಷೇಪಣೆಗಳು ಉದ್ಯಾವನವ / ಸಾರ್ವಜನಿಕ ಉದ್ದೇಶದಿಂದ ವಸತಿಗಾಗಿ ಕೋರಲಾಗಿದೆ. ಇಂತಹ ಪ್ರಕರಣಗಳಿಗೆ ಹಿಂದಿನ ಸಿ.ಡಿ.ಪಿ. ಯಲ್ಲಿ ಕೈಗಾರಿಕೆಗೆ / ವಸತಿಗಾಗಿ ಮೀಸಲಿಟ್ಟಿದ್ದಲ್ಲಿ ಅದರಂತೆ ವಸತಿಗಾಗಿ ಪರಿಗಣಿಸಬಹುದಾಗಿದೆ, ಉಳಿದಂತೆ ಎಲ್ಲಾ ಆಕ್ಷೇಪಣೆಗಳನ್ನು ಪಟ್ಟಿ ಮಾಡಿ ಪ್ರತಿ ಆಕ್ಷೇಪಣೆಗಳಿಗೂ ತಾಂತ್ರಿಕ ಅಭಿಪ್ರಾಯ ನೀಡಲಾಗಿದೆ. ಅದರಂತೆ ಕ್ರಮ ವಹಿಸಬಹುದಾಗಿದೆ. ಈ ಸಂಬಂದ ಪ್ರಾಧಿಕಾರದ ಸಭೆಯ ತೀರ್ಮಾನಕ್ಕೆ ಮಂಡಿಸಿದೆ.

**ತೀರ್ಮಾನ:**

ಈ ವಿಷಯ ಸಂಬಂಧ ಮೇಲಿನ ಅಭಿಪ್ರಾಯದಂತೆ ಸಭೆಯು ಸುದೀರ್ಘವಾಗಿ ಚರ್ಚಿಸಲಾಯಿತು ನಂತರ ಮೇಲಿನ ಅಭಿಪ್ರಾಯದಂತೆ ಸಭೆಯು ಒಪ್ಪಿಗೆ ನೀಡಿತು ಹಾಗೂ ಇದರೊಂದಿಗೆ ಈ ಕೆಳಕಂಡಂತೆ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ತೀರ್ಮಾನಿಸಲಾಯಿತು.

1. ಈ ಹಿಂದಿನ ಸಿಡಿಪಿಯಲ್ಲಿ ವಸತಿಗಾಗಿ ಮೀಸಲಿಟ್ಟಿರುವ ಪ್ರದೇಶಗಳನ್ನು ವಸತಿಗಾಗಿಯೇ ಮೀಸಲಿಡಲು ಸಭೆ ತೀರ್ಮಾನಿಸಿತು.
2. ರೈಲ್ವೆ ಕೆಳಭಾಗದ ಪ್ರದೇಶಗಳಿಗೆ ರೈಲ್ವೆ ಪ್ರಾಪರ್ಟಿಯಿಂದ 400 ಮೀಟರ್‌ಗಳ ಅಗಲಕ್ಕೆ (ಚಿಕ್ಕಮಗಳೂರು ಗ್ರಾಮದ ಪಶ್ಚಿಮ ಗಡಿಯಿಂದ ಗೌಡನಹಳ್ಳಿ ರಸ್ತೆಯವರೆಗೆ) ಕೃಷಿಯಿಂದ ವಸತಿಗಾಗಿ ಕಾಯ್ದಿರಿಸಲು ತೀರ್ಮಾನಿಸಿತು.

3. ದೀಪಾ ನರ್ಸಿಂಗ್ ಹೋಂ ರಸ್ತೆಗಾಗಿ ಭೂ ಮಾಲೀಕರು ಪುಕ್ಕಟೆಯಾಗಿ ಜಾಗ ಬಿಟ್ಟುಕೊಟ್ಟಿರುವುದರಿಂದ ಈ ರಸ್ತೆಯ ಎರಡೂ ಬದಿಯಲ್ಲಿ ಈಗ ಹಾಲಿ ವಸತಿಗೆ ನೀಡಿರುವ ಅಗಲಕ್ಕಿಂತ ಹೆಚ್ಚುವರಿಯಾಗಿ 200 ಮೀಟರ್‌ಗಳ ವರೆಗೆ ಕೃಷಿಯಿಂದ ವಸತಿ ಉಪಯೋಗಕ್ಕಾಗಿ ಮೀಸಲಿಡಲು ಸಭೆ ತೀರ್ಮಾನಿಸಿತು.

4. ಕರ್ನಾಟಕ ರಸ್ತೆ ಸಾರಿಗೆ ನಿಗಮ ಬಸ್ ನಿಲ್ದಾಣಕ್ಕಾಗಿ ಕಾಯ್ದಿರಿಸಿರುವ ಜಾಗವನ್ನು ಯಥಾ ಸ್ಥಿತಿ ಉಳಿಸಿಕೊಂಡು ಇದಕ್ಕೆ ಲಗತ್ತಾಗಿರುವ ಪ್ರಸ್ತಾವಿತ ರಸ್ತೆಗಳನ್ನು 18.00 ಮೀಟರ್ ಅಗಲದಿಂದ 24.00 ಮೀಟರ್ ಅಗಲಕ್ಕೆ ನಿಗದಿ ಪಡಿಸಲು ಸಭೆ ತೀರ್ಮಾನಿಸಿತು.

5. ಬೇಲೂರು ರಸ್ತೆಯಲ್ಲಿರುವ ಶನೇಶ್ವರ ದೇವಸ್ಥಾನದ ಹಿಂಭಾಗದ ಜಾಗವನ್ನು ಮಹಾಯೋಜನೆ ಪರಿಷ್ಕೃತ –I (ತಾತ್ಕಾಲಿಕ) ರಂತೆ ಯಥಾಸ್ಥಿತಿ ಕಾಯ್ದಿರಿಸಿಕೊಳ್ಳಲು ಸಭೆ ತೀರ್ಮಾನಿಸಿತು.

6. ರಾಜ್ಯ ಹೆದ್ದಾರಿಗಳು, ಜಿಲ್ಲಾ ಮುಖ್ಯ ರಸ್ತೆಗಳು ಹಾಗೂ ಬೈಪಾಸ್ ರಸ್ತೆಗಳ ಮುಂಭಾಗದಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಕಾಯ್ದಿರಿಸಲು ಸಭೆ ತೀರ್ಮಾನಿಸಿತು.

7. ಉಪ್ಪಳ್ಳಿ ಗ್ರಾಮ ಹಾಗೂ ಇಂದಾವರ ಗ್ರಾಮಗಳಲ್ಲಿ ಪ್ರಸ್ತಾಪಿಸಿರುವ ನಗರೀಕರಣ ಎಲ್ಲೆಗಳ ನಡುವೆ ಕಡಿಮೆ ಅಂತರವಿದ್ದು, ಈ ಗ್ರಾಮಗಳ ನಡುವೆ ಹಾದು ಹೋಗುವ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ಆದ್ದದರಿಂದ ಪ್ರಸ್ತಾವಿತ ನಗರೀಕರಣದ ಹಂತದಲ್ಲಿ ಈ ರಸ್ತೆಯ ಎರಡು ಬದಿಯಲ್ಲಿ 70.00 ಮೀಟರ್ ಅಗಲದ ಉದ್ದಕ್ಕೂ ವಸತಿ ಬೆಳವಣಿಗೆಗೆ ಮೀಸಲಿಡಲು ಸಭೆ ತೀರ್ಮಾನಿಸಿತು

8. ಯೋಜನಾ ಪ್ರಾಧಿಕಾರ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಅನುಮೋದಿಸಿರುವ ಅಗತ್ಯ ದಾಖಲೆಗಳೊಂದಿಗೆ ಲಭ್ಯವಿರುವ ವಿನ್ಯಾಸ ನಕ್ಷೆಯಲ್ಲಿ ಗುರುತಿಸಿರುವ ಉದ್ಯಾನವನ ಭಾಗಗಳನ್ನು ಮಾಸ್ಟರ್ ಪ್ಲಾನ್‌ನಲ್ಲಿ ಅಳವಡಿಸಲು ಸಭೆ ತೀರ್ಮಾನಿಸಿತು.

9. ಹಿರೇಮಗಳೂರು ಗ್ರಾಮದ ಸರ್ವೆ ನಂ. 327, 326, 256, 255, 56, 55, 157 ಮತ್ತು 163 (ಆಕ್ಷೇಪಣ ಪಟ್ಟಿಯಲ್ಲಿನ ಕ್ರಮ ಸಂಖ್ಯೆ. 1, 20, 22, 41) ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 162, 163, 396 (ಆಕ್ಷೇಪಣ ಪಟ್ಟಿಯಲ್ಲಿ ಕ್ರಮ ಸಂಖ್ಯೆ. 113, 127) ಉಪ್ಪಳ್ಳಿ ಗ್ರಾಮದ ಸರ್ವೆ ನಂ. 71, 72, 277, 104 (ಆಕ್ಷೇಪಣ ಪಟ್ಟಿಯಲ್ಲಿ ಕ್ರಮ ಸಂಖ್ಯೆ. 7, 8, 12, 15) ನಲ್ಲೂರು ಗ್ರಾಮದ ಸರ್ವೆ ನಂ. 79 (ಆಕ್ಷೇಪಣ ಪಟ್ಟಿಯಲ್ಲಿ ಕ್ರಮ ಸಂಖ್ಯೆ. 6) ರಲ್ಲಿನ ಭೂಮಿಗಳನ್ನು ಅತಿ ಸಣ್ಣ ಭಾಗಗಳಾಗಿದ್ದು ಬೆಳವಣಿಗೆಗಳು ಬಂದಿರುವುದನ್ನು ಪರಿಗಣಿಸಿ ವಸತಿ ಉದ್ದೇಶಕ್ಕೆ ಬದಲಾವಣೆ ಮಾಡಲು ಸಭೆ ತೀರ್ಮಾನಿಸಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು :

**ವಿಷಯ ನಂ 1.**

ಕರ್ನಾಟಕ ಪ್ರಕೃತಿ ವಿಕೋಪ ನಿಧಿಗೆ ಪ್ರಾಧಿಕಾರದಿಂದ ರೂ. 25000=00 ದೇಣಿಗೆ ನೀಡಿರುವುದರ ಬಗ್ಗೆ ಸಭೆಯ ಅನುಮೋದನೆ ಕೋರಿವ ಬಗ್ಗೆ.

**ಟಿಪ್ಪಣಿ:**

ಅಕ್ಟೋಬರ್ 2009 ನೇ ಮಾಹೆಯಲ್ಲಿನ ಮೊದಲನೇ ವಾರದಲ್ಲಿ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಬಿದ್ದ ಬಾರಿ ಮಳೆಯಿಂದ ಹಾಗೂ ಬಂದ ನೆರೆಹಾವಳಿಯಿಂದ ಪ್ರಕೃತಿ ವಿಕೋಪ ಉಂಟಾಗಿ ಆ ಜಿಲ್ಲೆಗಳಲ್ಲಿ ಉದ್ಭವಿಸಿದ ಸಾವು ನೋವು ಕಷ್ಟಗಳ ನೆರವಿಗಾಗಿ ಪ್ರಾಧಿಕಾರದಿಂದ ಪ್ರಕೃತಿ ವಿಕೋಪ ನಿಧಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಮಾನ್ಯ ಅಧ್ಯಕ್ಷರು ನೀಡಿದ ಸೂಚನೆ ಮೇರೆಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ದಿನಾಂಕ: 07-10-2009 ರಂದು ರೂ. 25,000=00 ದೇಣಿಗೆ ನೀಡಿರುವುದನ್ನು ಸಭೆಯಲ್ಲಿ ಅನುಮೋದನೆ ಪಡೆಯುವ ಬಗ್ಗೆ ಮಂಡಿಸಲಾಗಿದೆ.

**ತೀರ್ಮಾನ:**

ಕರ್ನಾಟಕ ಪ್ರಕೃತಿ ವಿಕೋಪದ ನಿಧಿಗೆ ಪ್ರಾಧಿಕಾರದಿಂದ ರೂ. 25000=00 ದೇಣಿಗೆ ನೀಡುವುದರ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ನಂತರ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಈಗಾಗಲೇ ದಿನಾಂಕ: 07-10-2009 ರಲ್ಲಿ ಮಾನ್ಯ ಜಿಲ್ಲಾಧಿಕಾರಿಗಳವರ ಪ್ರಕೃತಿ ವಿಕೋಪ ನಿಧಿಗೆ ದೇಣಿಗೆ ನೀಡುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆಗೆ ತೀರ್ಮಾನಿಸಿತು.

**ವಿಷಯ ನಂ. 2 :**

ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 92 / 1 ರಲ್ಲಿ ಶ್ರೀ ಬಿ. ವಿಜಯ ಕೆ. ಹೆಗ್ಡೆ ಬಿನ್ ಮುತ್ತಯ್ಯಶೆಟ್ಟಿ, ಅಜ್ಜಿ ಹೋಟಲ್ ಹಿಂಭಾಗ, ಚಿಕ್ಕಮಗಳೂರು ಇವರು ಅನಧಿಕೃತವಾಗಿ ನಾಗರೀಕ ಸೌಲಭ್ಯ ನಿವೇಶನದಲ್ಲಿ ಎರಡು ಹಂತಸ್ಥಿನ 65.3 x 31.3 ಚದರ ಅಡಿ ಮನೆ ನಿರ್ಮಾಣ ಮಾಡಿರುವ ಕುರಿತು.

**ಟಿಪ್ಪಣಿ :**

ರಾಮೇಶ್ವರ ನಗರದ ಪ್ರಾಧಿಕಾರದಿಂದ ಅನುಮೋದಿತವಾದ ಬಡಾವಣೆಯಲ್ಲಿ 65.3 x 31.3 ಚದಾರ ಅಡಿ ಅಳತೆಯ ನಾಗರೀಕ ಸೌಲಭ್ಯದ ನಿವೇಶನ ಮತ್ತು ಕಾಲುದಾರಿ ಜಾಗದಲ್ಲಿ, ಶ್ರೀ ವಿಜಯ ಕೆ. ಹೆಗ್ಡೆ ಎಂಬುವವರು ವಸತಿ ಕಟ್ಟಡವನ್ನು ಕಟ್ಟಿರುತ್ತಾರೆ. ಸದರೀ ಕಟ್ಟಡವನ್ನು ತಮ್ಮ ಹೆಸರಿನಲ್ಲಿ ಖರೀದಿ ಮಾಡಿರುವ ನಿವೇಶನ ಸಂಖ್ಯೆ. 16 / P ಎಂದು ತಪ್ಪಾಗಿ ಗುರುತು ಮಾಡಿರುವುದರಿಂದ ಕಟ್ಟಡ ಕಟ್ಟಲಾಗಿದೆ. ಪ್ರಾಧಿಕಾರದ ನಿವೇಶನ ಎಂದು ಗೊತ್ತಿಲ್ಲದೆ ಬಡಾವಣೆ ಮಾಲೀಕರ ಮಾಹಿತಿಯಿಂದ ಈ ಪ್ರಕರಣ ಸಂಭವಿಸಿರುತ್ತದೆ. ಲಕ್ಷಾಂತರ ರೂ. ಖರ್ಚು ಭರಿಸಿ ನಿರ್ಮಿಸಿರುವ ಕಟ್ಟಡದ ನಿವೇಶನವನ್ನು ಪ್ರಸಕ್ತ ಮಾರುಕಟ್ಟೆ ಬೆಲೆಯಂತೆ ಹಂಚುವ ಬಗ್ಗೆ. ದಿನಾಂಕ: 05-09-2009 ರ ಸಭೆಯಲ್ಲಿ ಮಂಡಿಸಲಾಗಿದ್ದು, ಸಭೆಯಲ್ಲಿ ಚರ್ಚಿಸಿ ಅಕ್ರಮ ಕಟ್ಟಡ ನಿರ್ಮಾಣ ಮಾಡಿರುವ ಮಾಲೀಕರಿಗೆ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಮಾಡಬಾರದೆಂದು ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಇದನ್ನು ಪುನರ್ ಪರಿಶೀಲಿಸುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಮತ್ತು ಪ್ರಾಧಿಕಾರದ ನಾಮನಿರ್ದೇಶನದ ಸದಸ್ಯರು ಸಭೆಗೆ ಮಂಡಿಸಲು ಕೋರಿರುತ್ತಾರೆ. ಆದ್ದರಿಂದ ಸದರಿ ವಿಷಯವನ್ನು ಪುನಃ ಸಭೆಗೆ ಮಂಡಿಸಲಾಗಿದೆ.

**ತೀರ್ಮಾನ:**

ಈ ಬಗ್ಗೆ ಆಯುಕ್ತರು ಸಭೆಗೆ ವಿವರಗಳನ್ನು ತಿಳಿಸಿದರು. ಸದರಿ ಬಿ. ವಿಜಯ ಹೆಗ್ಡೆ ಒಟ್ಟು 30 x 65 ಅಡಿಗಳಿಗೆ ನಗರಸಭೆಯ ಖಾತೆ, ನಗರಾಭಿವೃದ್ಧಿ ಪ್ರಾಧಿಕಾರದ ಕಟ್ಟಡ ನಕ್ಷೆ ಅನುಮೋದನೆ, ನಗರಸಭೆಯ ಕಟ್ಟಡ ನಿರ್ಮಾಣ ಪರವಾನಗಿ ಹೊಂದಿರುತ್ತಾರೆ. ಮನೆ ಕಟ್ಟಲು ಕೆನರಾ ಬ್ಯಾಂಕ್, ಚಿಕ್ಕಮಗಳೂರು ಇವರಿಂದ ಸಾಲ ಮಂಜೂರಾತಿ ಸಹ ಆಗಿ ಕಟ್ಟಡ / ಮನೆ ನಿರ್ಮಾಣ ಆಗಿರುತ್ತದೆ. ಆದರೆ ಸದರಿ ವ್ಯಕ್ತಿಯ ಹೆಸರಿನಲ್ಲಿ ಕೇವಲ 10 x 65 ಅಡಿಗೆ ಕ್ರಯಪತ್ರ ಇರುತ್ತದೆ. ಇನ್ನು 15 x 65 ಅಡಿಗೆ ಕ್ರಯದ ಕರಾರು ಮಾತ್ರ ಇರುತ್ತದೆ. ಮೂಲ ಮಾಲೀಕರು ಒಟ್ಟು 30 x 65 ರ ಭಾಗವನ್ನು ಬಡಾವಣೆಯ ನಾಗರೀಕ ಸೌಕರ್ಯದ ನಿವೇಶನವನ್ನು ಇವರಿಗೆ ಗುರುತಿಸಿಕೊಟ್ಟಿರುವುದರಿಂದ ಅದೇ ತಮ್ಮ ನಿವೇಶನ ಎಂದು ಮನೆ ಕಟ್ಟಿರುವುದಾಗಿ ಇವರು ಹೇಳುತ್ತಾರೆ. ಆದರೆ, ನಗರಾಭಿವೃದ್ಧಿ ಪ್ರಾಧಿಕಾರ, ನಗರಸಭೆ ಅಧಿಕಾರಿಗಳು ನಕ್ಷೆ ಅನುಮೋದನೆ, ಕಟ್ಟಡ ಪರವಾನಗಿ ನೀಡುವಾಗ ಲೋಪ ಮಾಡಿದ್ದಾರೆ. ಈ ಬಗ್ಗೆ ವಿಜಯ ಹೆಗ್ಡೆ ರವರು ತಿಳಿಯದೆ ಪ್ರಾಧಿಕಾರದ ನಾಗರೀಕ ಸೌಕರ್ಯ ನಿವೇಶನದಲ್ಲಿ ಕಟ್ಟಡ ಕಟ್ಟಿದ್ದೇನೆ, ಬ್ಯಾಂಕ್ ಸಾಲ ಸಹ ಪಡೆಯಲಾಗಿದೆ. ಆದ್ದರಿಂದ ಭೂಮಿ ಬೆಲೆಯನ್ನು ನಿಗದಿಪಡಿಸಿ ತಮಗೆ ಮಂಜೂರು ಮಾಡಲು ಕೋರಿರುತ್ತಾರೆ. ಮಾಹಿತಿಯ ಕೊರತೆಯಿಂದ ತಪ್ಪಾಗಿರುವುದರಿಂದ ವಿಷಯವನ್ನು ಪರಿಗಣಿಸಬಹುದು ಎಂದು ತಿಳಿಸಿದರು.

ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ಇದು ಕಳೆದ ನಾಲ್ಕು ವರ್ಷಗಳಿಂದ ನ್ಯಾಯಾಲಯದಲ್ಲಿ ಇರುವ ವಿಷಯ ಆಗಿದ್ದು ಪ್ರಾಧಿಕಾರದ ತೀರ್ಮಾನವನ್ನು ಅನುಸರಿಸಿ ಕ್ರಮಕ್ಕೆ ಸಲಹೆ ನೀಡಲಾಗಿತ್ತು. ಸದರಿ ವಿಷಯದಲ್ಲಿ ಬಡಾವಣೆಯ ಮೂಲ ಮಾಲೀಕರ ತಪ್ಪು ಮಾಹಿತಿ ಅಧಿಕಾರಿಗಳಿಂದ ಅನುಮೋದನೆಯಂತಹ ತಪ್ಪುಗಳಿಂದ ಬಡಾವಣೆಯಲ್ಲಿ ಮೀಸಲಿಟ್ಟಿದ್ದ, ನಾಗರೀಕ ಸೌಕರ್ಯ ನಿವೇಶನದಲ್ಲಿ ತನ್ನದೇ ನಿವೇಶನ ಎಂದು ತಪ್ಪಾಗಿ ಗುರುತಿಸಿ ಮನೆ ನಿರ್ಮಾಣ ಮಾಡಿರುವುದು ಕಂಡು ಬರುತ್ತಿದೆ ಎಂದು ಅಭಿಪ್ರಾಯ ಪಡಲಾಯಿತು.

ಈ ಬಗ್ಗೆ, ಭೂಮಿಯ ಬೆಲೆಯನ್ನು ಪಾವತಿಸಿಕೊಳ್ಳಲು ಹಾಗೂ ಕ್ರಯಪತ್ರ ಮಾಡಿಕೊಡಲು ಅನುಮತಿಗಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು. ಮಾರಾಟದ ಹಣವನ್ನು ಬೇರೆ ನಾಗರೀಕ ಸೌಕರ್ಯ ನಿವೇಶನದ ಖರೀದಿ ಅಥವಾ ಉದ್ಯಾನವನದ ಅಭಿವೃದ್ಧಿಗೆ ಬಳಸಿಕೊಳ್ಳಲು ತೀರ್ಮಾನಿಸಲಾಯಿತು. ಉಪನೋಂದಣಾಧಿಕಾರಿಗಳ ಮಾರ್ಗದರ್ಶಿ ಬೆಲೆಯು ಪ್ರತಿ ಚದರ ಅಡಿಗೆ ರೂ. 120.00 ಇದ್ದು ಇದರ ಎರಡರಷ್ಟು ಅಂದರೆ ಪ್ರತಿ ಚದರ ಅಡಿಗೆ ರೂ. 240.00 ರಂತೆ ಪಾವತಿಸಿಕೊಳ್ಳಬಹುದು ಎಂದು ಆಯುಕ್ತರು ಅಭಿಪ್ರಾಯ ವ್ಯಕ್ತಪಡಿಸಿದರು. ಸಭೆಯು ಈ ಬಗ್ಗೆ ವಿವರವಾಗಿ ಚರ್ಚಿಸಿ ಪ್ರತಿ ಚದರ ಅಡಿಗೆ ರೂ. 300 ರಂತೆ ಪಾವತಿಸಿಕೊಳ್ಳಲು ಮತ್ತು ಸರ್ಕಾರದಿಂದ ಒಪ್ಪಿಗೆ ದೊರೆತನಂತರ ದಂಡ ವಿಧಿಸಿ 30 x 65 ಅಡಿ ಭೂಮಿಯನ್ನು ಕ್ರಯ ಮಾಡಿಕೊಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 3 :**

ನೌಕರರ ಕಾರ್ಮಿಕ ಕಲ್ಯಾಣ ನಿಧಿ ಪ್ರಾದೇಶಿಕ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಆಯುಕ್ತರು ನೌಕರರ ಕಲ್ಯಾಣ ನಿಧಿ ಪ್ರಾದೇಶಿಕ ಅಧಿಕಾರಿಗಳು ಚಿಕ್ಕಮಗಳೂರು ರವರು ಬಸವನಹಳ್ಳಿ ಸರ್ವೆ ನಂ. 108, 109, 110, 111 ಮತ್ತು 112 ರಲ್ಲಿನ ಎರಡು ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡಿಕೊಡುವಂತೆ ಮನವಿ ಸಲ್ಲಿಸಿರುವ ಬಗ್ಗೆ. ಕುರಿತು.

**ಟಿಪ್ಪಣಿ:**

ನೌಕರರ ಕಾರ್ಮಿಕ ಕಲ್ಯಾಣ ನಿಧಿ ಪ್ರಾದೇಶಿಕ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಆಯುಕ್ತರು ನೌಕರರ ಕಾರ್ಮಿಕ ಕಲ್ಯಾಣ ನಿಧಿ ಪ್ರಾದೇಶಿಕ ಅಧಿಕಾರಿಗಳವರು ಚಿಕ್ಕಮಗಳೂರು ರವರು ದಿನಾಂಕ: 14-10-2009 ರಂದು ಮಾನ್ಯ ಜಿಲ್ಲಾಧಿಕಾರಿಗಳವರಿಗೆ ಪತ್ರ ಬರೆದು ಬಸವನಹಳ್ಳಿ ಸರ್ವೆ ನಂ. 108, 109, 110, 111 ಮತ್ತು 112 ರಲ್ಲಿನ 100 x 35.90 ಮೀಟರ್ ಅಳತೆಯ ಎರಡು ನಾಗರಿಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡಿಸುವಂತೆ ಕೋರಿರುತ್ತಾರೆ. ಸದರಿ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ ಮಾಡುವ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ:**

ಆಯುಕ್ತರು ನೌಕರರ ಕಲ್ಯಾಣ ನಿಧಿ ಪ್ರಾದೇಶಿಕ ಅಧಿಕಾರಿಗಳು ಚಿಕ್ಕಮಗಳುರು ರವರು ನೌಕರರ ಕಾರ್ಮಿಕ ಕಲ್ಯಾಣ ನಿಧಿ ಪ್ರಾದೇಶಿಕ ಕಛೇರಿ ಕಟ್ಟಡ ನಿರ್ಮಾಣ ಮಾಡಲು ಬಸವನಹಳ್ಳಿ ಗ್ರಾಮದ ಸರ್ವೆ ನಂ. 108, 109, 110, 111 ಮತ್ತು 112 ರಲ್ಲಿನ 100 x 35.90 ಮೀಟರ್ ಅಳತೆಯ ಎರಡು ನಾಗರೀಕ ಸೌಲಭ್ಯಗಳನ್ನು ಹಂಚಿಕೆ ಮಾಡುವಂತೆ ಕೋರಿರುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಹಾಗೆಯೇ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ ಸದ್ಯದಲ್ಲಿ ನೀಡಲಿರುವ ಪತ್ರಿಕಾ ಪ್ರಕರಣಗಳಲ್ಲಿನ ವಿವರಗಳಿಗೆ ತಕ್ಕಂತೆ ಸರ್ಕಾರಿ ಹಾಗೂ ಅರೆಸರ್ಕಾರಿ ಹಾಗೂ ಸಂಘ ಸಂಸ್ಥೆಗಳಿಂದ ನಿಯಮಾನುಸಾರ ಅರ್ಜಿ ಸ್ವೀಕರಿಸಿ ನಾಗರೀಕ ಸೌಲಭ್ಯ ಹಂಚಿಕೆ ನಿಯಮಗಳ ಅನ್ವಯ ಎಲ್ಲಾ ಷರತ್ತಿಗೊಳಪಟ್ಟು ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ಅರ್ಹತೆ ಇರುವ ಕಛೇರಿಗಳು ಹಾಗೂ ಸಂಘ ಸಂಸ್ಥೆಗಳಿಗೆ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಮಾಡಲು ಕ್ರಮವಹಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಯಿತು.

**ವಿಷಯ ನಂ. 4 :**

ಶ್ರೀ ಬಿ. ಹೆಚ್. ಗಂಗಾಧರ್ ಬಿನ್ ಬಿ. ಹೆಚ್. ಹೊನ್ನಪ್ಪಗೌಡ ನಿವೃತ್ತ ಮಿಲಿಟರಿ ಸೇನಾಧಿಕಾರಿಗಳು ಪ್ರಾಧಿಕಾರದ ಹಂಚಿಕೆ ಮಾಡಿಸಿಕೊಂಡಿರುವ ಸಿ– 50 ರ ಅಂದರೆ 30 x 50 ಅಳತೆಯ ನಿವೇಶನಕ್ಕೆ ಮನೆ ಕಟ್ಟದೆ ಇರುವ ಕಾರಣಕ್ಕೆ ವಿಧಿಸಿರುವ ದಂಡ ಶುಲ್ಕವನ್ನು ಮಾಫಿ ಮಾಡುವ ಬಗ್ಗೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಬಿ. ಹೆಚ್. ಗಂಗಾಧರ್ ಬಿನ್ ಬಿ. ಹೆಚ್. ಹೊನ್ನಪ್ಪಗೌಡ ಇವರಿಗೆ ಈ ಹಿಂದೆ ಎಕ್ಸ್ ಮಿಲಿಟರಿ ಕೋಟಾ ಅಡಿಯಲ್ಲಿ 30 x 50 ಅಡಿ ಅಳತೆಯ ನಿವೇಶನವನ್ನು 1993 ರಲ್ಲಿಯೇ ಹಂಚಿಕೆ ಮಾಡಲಾಗಿದ್ದು ಇವರು ಪ್ರಾಧಿಕಾರದ ನಿಯಮಗಳ ಅನ್ವಯ ಹಂಚಿಕೆಯಾದ ಐದು ವರ್ಷಗಳ ಅವಧಿಯಲ್ಲಿ ಮನೆ ಕಟ್ಟದೆ ಇರುವ ಕಾರಣ 2006 ರಿಂದ ಇಲ್ಲಿಯವರೆಗೆ ವಿಧಿಸಿರುವ ಒಟ್ಟು 4 ವರ್ಷಗಳ ದಂಡ ಶುಲ್ಕ ರೂ. 9,767=00 ರೂಪಾಯಿಗಳನ್ನು ರಾಷ್ಟ್ರ ಸೇವೆಗಾಗಿ ಮಿಲಿಟರಿ ಸೇನೆಯಲ್ಲಿ ಸೇವೆ ಸಲ್ಲಿಸಿರುವ ಕಾರಣ ಮನ್ನಾ ಮಾಡಬೇಕೆಂದು ಕೋರಿ ದಿನಾಂಕ: 19-10-2009 ರಂದು ಮನವಿ ಸಲ್ಲಿಸಿರುತ್ತಾರೆ. ಶ್ರೀ ಬಿ. ಹೆಚ್. ಗಂಗಾಧರ್ ರವರು ಈಗಿನ ಚಾಲ್ತಿ ವರ್ಷದಲ್ಲಿಯೇ ವಸತಿ ಕಟ್ಟಡ ನಿರ್ಮಾಣ ಮಾಡಿದರೆ ಅವರ ದೇಶ ಸೇವಾ ಕಾರ್ಯವನ್ನು ಪರಿಗಣಿಸಿ ದಂಡ ಶುಲ್ಕ ಪಾವತಿ ಮನ್ನಾ ಮಾಡಬಹುದಾಗಿರುತ್ತೆ. ಆದರೆ ಸದರಿ ನಿವೇಶನ ಮಾರಾಟ ಮಾಡಿದರೆ ದಂಡ ಶುಲ್ಕ ಮನ್ನಾ ಮಾಡಲು ಬರುವುದಿಲ್ಲ ಎಂಬ ಷರತ್ತಿನ ಮೇರೆಗೆ ದಂಡ ಶುಲ್ಕ ಮನ್ನಾ ಮಾಡಬಹುದಾಗಿರುತ್ತೆ. ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಶ್ರೀ ಬಿ. ಹೆಚ್. ಗಂಗಾಧರ್ ಬಿನ್ ಬಿ. ಹೆಚ್. ಹೊನ್ನಪ್ಪಗೌಡ ಇವರಿಗೆ ಪ್ರಾಧಿಕಾರದಿಂದ ಎಕ್ಸ್ ಮಿಲಿಟರಿ ಕೋಟಾ ಅಡಿಯಲ್ಲಿ ಹಂಚಲಾಗಿರುವ 30 x 50 ಅಳತೆಯ ನಿವೇಶನ ಸಂಖ್ಯೆ. ಸಿ– 50 ನ್ನು ಹಂಚಿಕೆ ಮಾಡಲಾಗಿದ್ದು ಆವರು ನಿಯಮಾನುಸಾರ ಹಂಚಿಕೆಯಾದ 5 ವರ್ಷಗಳಲ್ಲಿ ಮನೆ ನಿರ್ಮಾಣ ಮಾಡದೆ ಇರುವುದರಿಂದ ಅವರಿಗೆ 2006 ರಿಂದ ಈವರೆವಿಗೂ ವಿಧಿಸಿರುವ 4 ವರ್ಷಗಳ ದಂಡ ಶುಲ್ಕ ರೂ. 9,767=00 ಮನ್ನಾ ಮಾಡುವಂತೆ ಕೋರಿರುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ನಂತರ ಶ್ರೀ ಬಿ. ಹೆಚ್. ಗಂಗಾಧರ್ ರವರು ದೇಶ ಸೇವೆಗಾಗಿ ಸೇನೆಯಲ್ಲಿ ಸಲ್ಲಿಸಿರುವ ಸೇವೆಯನ್ನು ಗಮನದಲ್ಲಿಟ್ಟುಕೊಂಡು, ಶ್ರೀ ಬಿ. ಹೆಚ್. ಗಂಗಾಧರ್ ರವರು ಈಗಿನ ಚಾಲ್ತಿ ವರ್ಷದಲ್ಲಿಯೇ ವಸತಿ ಕಟ್ಟಡ ನಿರ್ಮಾಣ ಮಾಡಿದರೆ ದಂಡ ಶುಲ್ಕವನ್ನು ಮನ್ನಾ ಮಾಡಬಹುದಾಗಿರುತ್ತದೆ ಆದರೆ ಸದರಿ ನಿವೇಶನ ಮಾರಾಟ ಮಾಡಿದರೆ ದಂಡ ಶುಲ್ಕ ಮನ್ನಾ ಮಾಡಬಾರದಾಗಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ. 5 :**

ಶ್ರೀ ಜಿತೇಂದ್ರ ಮತ್ತು ಶ್ರೀ ಹೆಚ್. ಪಿ. ಲಕ್ಷ್ಮೀಶ ಇವರುಗಳು ಪ್ರಾಧಿಕಾರದ ಮೂಲೆ ನಿವೇಶನಗಳ ಹರಾಜಿನ ಬಾಬ್ತು ತಡವಾಗಿ ಬಿಡ್ ಮೊತ್ತ ಪಾವತಿಸಿದ್ದಕ್ಕೆ ವಿಧಿಸಿರುವ ಶೇಕಡ 21 ರ ಬಡ್ಡಿ ಮನ್ನಾ ಮಾಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ಜಿತೇಂದ್ರ ಮತ್ತು ಶ್ರೀ ಹೆಚ್. ಪಿ. ಲಕ್ಷ್ಮೀಶ ಇವರುಗಳು ದಿನಾಂಕ: 07-10-2008 ರಂದು ನಡೆದ ಬಹಿರಂಗ ಹರಾಜಿನಲ್ಲಿ ಡಿ– 292, ಡಿ– 285 ಮತ್ತು ಡಿ– 144 ರ ನಿವೇಶನಗಳನ್ನು ಚದರ ಅಡಿಗೆ ಕ್ರಮವಾಗಿ 280=00, 295=00, ಮತ್ತು 340=00 ರೂಪಾಯಿಗಳ ಹೆಚ್ಚಿನ ಮೊತ್ತಕ್ಕೆ ಬಿಡ್ ಕೂಗಿದ್ದು ಸದರೀ ಬಿಡ್ ಮೊತ್ತವನ್ನು ಪ್ರಾಧಿಕಾರದ ಮೂಲೆ ನಿವೇಶನ ಹಂಚಿಕೆ ನಿಯಮಗಳ ಪ್ರಕಾರ ನಿಗದಿತ ಅವಧಿಯಲ್ಲಿ ಪೂರ್ಣವಾಗಿ ಪಾವತಿಸದ ಕಾರಣ ಶೇಕಡ 21 ರಷ್ಟು ಬಡ್ಡಿ ವಿಧಿಸಿ ಒಟ್ಟು ಬಡ್ಡಿ ಮೊತ್ತ ರೂ. 98,437=00 ಗಳನ್ನು ಪಾವತಿಸಬೇಕಾಗಿದ್ದು,

ಸದರೀ ಬಡ್ಡಿಯನ್ನು ಪೂರ್ಣವಾಗಿ ಬಡ್ಡಿಮನ್ನಾ ಮಾಡುವ ಬಗ್ಗೆ ಅರ್ಜಿದಾರರು ಹಿಂದಿನ ಸಭೆಯಲ್ಲಿ ಮನವಿ ಸಲ್ಲಿಸಿದ್ದು, ನಂತರ ಪ್ರಾಧಿಕಾರದ ಸಭೆಯಲ್ಲಿ ಶೇಕಡ 21 ರಿಂದ ಶೇಕಡ 18 ಕ್ಕೆ ಬಡ್ಡಿ ಇಳಿಸಿ ಪಾವತಿಸಿಕೊಳ್ಳುವಂತೆ ನಿರ್ಣಯ ಕೈಗೊಳ್ಳಲಾಗಿತ್ತು. ಆದರೂ ಸಹ ಪ್ರಾಧಿಕಾರಕ್ಕೆ ಸರ್ಕಾರದಿಂದ ನಾಮ ನಿರ್ದೇಶನಗೊಂಡಿರುವ ಶ್ರೀ ರಾಜು ಮತ್ತು ಶ್ರೀ ಲೋಕೇಶ್ ರವರು ಅರ್ಜಿದಾರರು ಹೆಚ್ಚಿನ ಬಿಡ್ ಕೂಗಿರುವುದರಿಂದ ಹಾಗೂ ಪ್ರಸಕ್ತ ಮಾರುಕಟ್ಟೆಯಲ್ಲಿ ನಿವೇಶನಗಳ ಬೆಲೆ ಕಡಿಮೆಯಾಗಿರುವುದರಿಂದ ವಿಧಿಸಿರುವ ಒಟ್ಟು ಬಡ್ಡಿಯಲ್ಲಿ ಶೇಕಡ 50 ರಷ್ಟು ಕಡಿಮೆ ಮಾಡುವಂತೆ ವಿಷಯವನ್ನು ಪುನಃ ಸಭೆಗೆ ತರುವಂತೆ ಕೋರಿದ್ದರ ಮೇರೆಗೆ ಪುನಃ ಸಭೆಯ ಮುಂದೆ ಬಡ್ಡಿ ಮನ್ನಾ ಮಾಡುವ ಬಗ್ಗೆ ವಿಷಯವನ್ನು ಮಂಡಿಸಿದೆ.

**ತೀರ್ಮಾನ:**

ಶ್ರೀ ಜಿತೇಂದ್ರ ಮತ್ತು ಶ್ರೀ ಹೆಚ್. ಪಿ. ಲಕ್ಷ್ಮೀಶ ಇವರುಗಳಿಗೆ ಪ್ರಾಧಿಕಾರದಿಂದ ಮೂಲೆ ನಿವೇಶನಗಳ ಹರಾಜು ಬಿಡ್ ಮೊತ್ತವನ್ನು ನಿಯಮಾನುಸಾರ ನಿಗದಿತ ಅವಧಿಯಲ್ಲಿ ಪಾವತಿಸದೆ ಇರದ ಕಾರಣ ಶೇಕಡ 21 ರಷ್ಟು ಬಡ್ಡಿ ವಿಧಿಸಿ ಅವರಿಂದ ಪಾವರ್ತಿಸಲು ಕಛೇರಿಯಿಂದ ರೂ. 98,437=00 ರೂಪಾಯಿಗಳನ್ನು ತಿಳುವಳಿಕೆ ಪತ್ರ ನೀಡಲಾಗಿದ್ದು ನಂತರ ಈ ಬಗ್ಗೆ ಅವರು ಬಡ್ಡಿ ಮನ್ನಾ ಮಾಡುವಂತೆ ಸಲ್ಲಿಸಿದ ಮನವಿ ಮೇರೆಗೆ ದಿನಾಂಕ: 05-09-2009 ರ ಸಭೆಗೆ ಮಂಡಿಸಲಾಗಿ ಸಭೆಯಲ್ಲಿ ಶೇಕಡ 21 ಕ್ಕೆ ಬದಲಾಗಿ ಶೇಕಡ 18 ಕ್ಕೆ ಇಳಿಸಿ ಆ ದರದಲ್ಲಿ ಬಡ್ಡಿ ವಿಧಿಸುವಂತೆ ಸಭೆಯಲ್ಲಿ ನಿರ್ಣಯವಾಗಿತ್ತು. ಆ ನಂತರ ಪುನಃ ವಿಧಿಸಿರುವ ಬಡ್ಡಿಯನ್ನು ಪೂರಾ ಮನ್ನಾ ಮಾಡುವಂತೆ ಅಥವಾ ಶೇಕಡ 50 ರಷ್ಟು ಬಡ್ಡಿ ಮನ್ನಾ ಮಾಡುವಂತೆ ಪುನಃ ಮನವಿ ಸಲ್ಲಿಸಿದ್ದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಸದರಿ ಬಿಡ್‌ದಾರರು ಆರ್ಥಿಕವಾಗಿ ತುಂಬ ಸಂಕಷ್ಟದಲ್ಲಿರುವುದಾಗಿ ಮಾಡಿರುವ ಮನವಿಯನ್ನು ಪರಿಶೀಲಿಸಿ ಚರ್ಚಿಸಲಾಯಿತು. ಈ ಬಗ್ಗೆ ಸದಸ್ಯರು ಆರ್ಥಿಕ ಸಂಕಷ್ಟದಲ್ಲಿರುವುದನ್ನು ದೃಡೀಕರಿಸಿದರು. ನಂತರ ಬಿಡ್‌ದಾರರಿಗೆ ವಿಧಿಸಿರುವ ಹೆಚ್ಚಿನ ಬಡ್ಡಿಯನ್ನು ಕಟ್ಟಲು ಅಶಕ್ತರಾಗಿರುವುದನ್ನು ಪರಿಗಣನೆಗೆ ತೆಗೆದುಕೊಂಡು ಶೇಕಡ 12 ರಷ್ಟು ಬಡ್ಡಿಯನ್ನು ಮಾತ್ರ ಬಿಡ್‌ದಾರದಿಂದ ಪಾವತಿಸಿಕೊಂಡು ಕ್ರಯಪತ್ರ ಮಾಡಿಕೊಡಲು ಸರ್ವಾನುಮತದಿಂದ ತೀರ್ಮಾನ ಕೈಗೊಳ್ಳಲಾಯಿತು.

**ವಿಷಯ ನಂ. 6 :**

ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಲ್ಯಾಂಡ್ ಬ್ಯಾಂಕ್ ಮತ್ತು ಉಳಿಕೆ ನಿವೇಶನಳನ್ನು ಅಭಿವೃದ್ಧಿ ಪಡಿಸಿ ಗುರುತುಮಾಡಿ ಪ್ರಾಧಿಕಾರದ ನಿವೇಶನ ಹಂಚಿಕೆ ನಿಯಮಗಳ ಅನುಸಾರ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದ ವಸತಿ ಬಡವಣೆಯಲ್ಲಿ ಲಭ್ಯವಿರುವ 0.39 ಗುಂಟೆ ಲ್ಯಾಂಡ್‌ಬ್ಯಾಂಕ್ ಪ್ರದೇಶ ಸುಮಾರು 10000 ಚದರ ಅಡಿಗಳಷ್ಟು ಖಾಲಿ ಜಾಗ ಹಾಗೆಯೇ ಹಂಚಿಕೆಯಾಗದೆ ಉಳಿದಿರುವ ನಿವೇಶನಗಳು ಇದ್ದು ಅವುಗಳನ್ನು ಅಭಿವೃದ್ಧಿ ಪಡಿಸಿ ಗುರುತು ಮಾಡಿ ಪ್ರಾಧಿಕಾರದ ನಿವೇಶನ ಹಂಚಿಕೆ ನಿಯಮಗಳಂತೆ ಸಾರ್ವಜನಿಕ ಪ್ರಕಟಣೆ ನೀಡಿ ಪ್ರಾಧಿಕಾರ ಸಭೆಯಲ್ಲಿ ಅವುಗಳ ದರ ನಿಗದಿ ಪಡಿಸಿಕೊಂಡು ನಿವೇಶನಗಳನ್ನು ಹಂಚಿಕೆ ಮಾಡಬಹುದಾಗಿರುತ್ತೆ ಮತ್ತು ಸದರಿ ಭಾಗದಲ್ಲಿ ಭೂ ಅಭಿವೃದ್ಧಿ ಮತ್ತು ನಿವೇಶನಗಳ ರಚನೆಗೆ ತಗಲುವ ವೆಚ್ಚವನ್ನು ನಿಯಮಾನುಸಾರ ಅಂದಾಜು ದರಗಳಂತೆ ವೆಚ್ಚ ಮಾಡಲು ಅನುಮೋದನೆಗೆ ನೀಡಬಹುದಾಗಿರುತ್ತದೆ. ಈ ವಿಷಯವನ್ನು ಸಭೆಯ ಮುಂದೆ ಮಂಡಿಸಲಾಗಿದೆ.

**ತೀರ್ಮಾನ:**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಲ್ಯಾಂಡ್‌ಬ್ಯಾಂಕ್ ಮತ್ತು ಉಳಿಕೆ ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಗುರುತು ಮಾಡಿ ಪ್ರಾಧಿಕಾರದ ನಿವೇಶನ ಹಂಚಿಕೆ ನಿಯಮಗಳ ಅನುಸಾರ ಹಂಚಿಕೆ ಮಾಡುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ ಲಭ್ಯವಿರುವ 0.39 ಗುಂಟೆ ಲ್ಯಾಂಡ್‌ಬ್ಯಾಂಕ್ ಪ್ರದೇಶ ಹಾಗೂ ಹಂಚಿಕೆಯಾಗದೆ. ಉಳಿದಿರುವ ಸುಮಾರು 10000 ಚದರ ಅಡಿಗಳಷ್ಟು ಖಾಲಿಜಾಗ ಹಾಗೂ ನಿವೇಶನಗಳನ್ನು ನಿಯಮಾನುಸಾರ ಭೂ ಅಭಿವೃದ್ಧಿಪಡಿಸಿ ನಿವೇಶನಗಳನ್ನು ರಚನೆ ಮಾಡಿ ಪ್ರಾಧಿಕಾರದ ನಿವೇಶನಗಳ ಹಂಚಿಕೆಗಳ ನಿಯಮಾನುಸಾರ ಹಂಚಿಕೆ ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇದಕ್ಕೆ ಆಗುವ ಅಂದಾಜು ಖರ್ಚು ವೆಚ್ಚಗಳನ್ನು ನಿಯಮಾನುಸಾರ ಮಾಡಲು ಒಪ್ಪಿಗೆ ನೀಡಲಾಯಿತು.

**ವಿಷಯ ನಂ. 7 :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ಹೊರಗುತ್ತಿಗೆ ಆದಾರದ ಮೇರೆಗೆ ಕಮಾಂಡರ್ ಸೆಕ್ಯುರಿಟಿ ಸಂಸ್ಥೆಯವರಿಂದ 2 ಜನ ಕೂಲಿಕಾರರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆ ಸ್ವಚ್ಛತಾ ಕಾರ್ಯಕ್ರಮಕ್ಕಾಗಿ 2008-09 ನೇ ಸಾಲಿನಲ್ಲಿ ಕೊಟೇಶನ್ ಕರೆದು ಮಾಹೆಯಾನ 10,000=00 ರೂಪಾಯಿಗಳಂತೆ ಸ್ವಚ್ಛತಾ ಕಾಮಗಾರಿ ನಿರ್ವಹಿಸಲು ಶ್ರೀ ಹುಸೇನ್ ರವರಿಗೆ ವಹಿಸಿಕೊಡಲಾಗಿತ್ತು. ನಂತರ ಅವರು ಟೆಂಡರ್ ಕರಾರಿನಂತೆ ಕೆಲಸ ನಿರ್ವಹಿಸದ ಕಾರಣ ಕಾಮಗಾರಿ ನಿರ್ವಹಿಸಿದ ಪರಿಮಾಣಕ್ಕೆ ತಕ್ಕಂತೆ ಭಾಗಶಃ ವೇತನ ಪಾವತಿಸಿ, ನಂತರ ಅಂತಿಮವಾಗಿ ಟೆಂಡರ್ ರದ್ದುಗೊಳಿಸಲಾಯಿತು. ವಸತಿ ಬಡಾವಣೆಯಲ್ಲಿನ ವಾಸವಿರುವ ನಾಗರೀಕರು ಸ್ವಚ್ಛತೆ ಬಗ್ಗೆ ಅನೇಕ ಸಾರಿ ದೂರು ನೀಡುತ್ತಿರುವುದರಿಂದ ಮಾನ್ಯ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ಹೊರಗುತ್ತಿಗೆ ಆದಾರದ ಮೇರೆಗೆ ಕಮಾಂಡರ್ ಸೆಕ್ಯುರಿಟಿ ಸರ್ವೀಸ್ ಮೂಲಕ 2 ಜನರನ್ನು ಲೋಕೋಪಯೋಗಿ ಇಲಾಖೆ ಹಾಸನ ವೃತ್ತದ ಎಸ್. ಆರ್. ವೇತನ ನೀಡಿ ಕೆಲಸ ನಿರ್ವಹಿಸುವಂತೆ ಮಾಸಿಕ ಸುಮಾರು ರೂ. 7,000=00 ವೆಚ್ಚವಾಗಲಿದ್ದು ಈಗಾಗಲೇ ದಿನಾಂಕ: 01-10-2009 ರಿಂದ 2 ಜನ ಕೂಲಿಕಾರರನ್ನು ತುರ್ತುನಿಮಿತ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳಲಾಗಿರುತ್ತದೆ. ಈ 2 ಜನ ಸ್ವಚ್ಛತಾ ಕೆಲಸ ನಿರ್ವಹಿಸಲು ನೇಮಕ ಮಾಡಿಕೊಂಡಿರುವುದಕ್ಕೆ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ ಸ್ವಚ್ಛತಾ ಕಾರ್ಯಕ್ಕಾಗಿ ಹೊರಗುತ್ತಿಗೆ ಆದಾರದ ಮೇರೆಗೆ ದಿನಾಂಕ: 01-10-2009 ರಿಂದ ಮಾನ್ಯ ಪ್ರಾಧಿಕಾರದ ಅಧ್ಯಕ್ಷರ ಸೂಚನೆಯಂತೆ 2 ಜನ ಕೂಲಿಗಾರರನ್ನು ನೇಮಕ ಮಾಡಿಕೊಂಡಿರುವುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ನಂ. 8 :**

ಶ್ರೀ ಸಿ. ಪಿ. ಸಿದ್ದೇಗೌಡ, ಬಿನ್ ಪರ್ವತಪ್ಪ ಚಿಕ್ಕಕುರುಬರಹಳ್ಳಿ ಇವರಿಂದ ಹಿರೇಮಗಳೂರು ಗ್ರಾಮದ ಸರ್ವೆ ನಂ. 456P ರಲ್ಲಿ 0.10 ಗುಂಟೆ ಜಮೀನನ್ನು ಪರಸ್ಪರ ಒಪ್ಪಂದದ ಮೇರೆಗೆ ಪ್ರಾಧಿಕಾರವು ಖರೀದಿಸಿದ್ದರಿಂದ್ದ ಅವರಿಗೆ ಮಾನವೀಯತೆ ದೃಷ್ಟಿಯಿಂದ ಹಾಲಿ ಪ್ರಾಧಿಕಾರ ಕಛೇರಿಯ ಹಿಂಭಾಗದಲ್ಲಿ ಅಭಿವೃದ್ಧಿಗೊಳಿಸುತ್ತಿರುವ 17 ಎಕರೆ 37½ ಗುಂಟೆ ಬಡಾವಣೆಯಲ್ಲಿ 30 x 40 ಅಳತೆ ನಿವೇಶನ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ಸಿ. ಪಿ. ಸಿದ್ದೇಗೌಡರವರಿಂದ ಹಿರೇಮಗಳೂರು ಗ್ರಾಮದ ಸರ್ವೆ ನಂ. 456 / 1P ರಲ್ಲಿ 0.10 ಗುಂಟೆ ಜಮೀನನ್ನು ಪರಸ್ಪರ ಒಪ್ಪಂದ್ದ ಮೇರೆಗೆ 2005 ನೇ ಸಾಲಿನಿಂದಲೂ ರೂ. 7500=00 ರೂಪಾಯಿಗಳಿಗೆ 1 ಗುಂಟೆಯಂತೆ ಬೆಲೆ ನಿರ್ಧರಣವಾಗಿ ಖರೀದಿಸಲು ಸರ್ಕಾರದ ಅನುಮತಿ ಪಡೆಯಲಾಗಿದ್ದರೂ ಸಹ ಸದರೀ ಬೆಲೆಗೆ ಮಾರಾಟ ಮಾಡಲು ಭೂ ಮಾಲೀಕರು ನಿರಾಕರಿಸಿ ಒಂದು ಉಚಿತ ನಿವೇಶನ ನೀಡುವಂತೆ ಒತ್ತಾಯಿಸುತ್ತಿದ್ದು ನಂತರ ಅವರ ಮನವೊಲಿಸಿ ಪ್ರಾಧಿಕಾರವು ಕಛೇರಿ ಹಿಂಭಾಗದಲ್ಲಿ ಅಭಿವೃದ್ಧಿ ಪಡಿಸುತ್ತಿರುವ ವಸತಿ ಬಡಾವಣೆಯಲ್ಲಿ ಹಂಚಿಕೆ ಮಾಡಲಿರುವ ದರದಲ್ಲಿ ಹಣ ಪಾವತಿಸಿಕೊಂಡು ಆದ್ಯತೆ ಮೇರೆಗೆ 30 x 40 ಅಳತೆ ನಿವೇಶನ ಹಂಚಿಕೆ ಮಾಡುವಂತೆ ಮನವಿ ಸಲ್ಲಿಸಿ ನಂತರ 0.10 ಗುಂಟೆ ಜಮೀನಿಗೆ 75000=00 ರೂಪಾಯಿ ಪಡೆದು ಮಾರಾಟ ಮಾಡಲು ಒಪ್ಪಿಗೆ ಸೂಚಿಸಿರುತ್ತಾರೆ. ಆದ್ದರಿಂದ ಮಾನವೀಯತೆ ದೃಷ್ಟಿಯಿಂದ 0.10 ಗುಂಟೆ ಭೂಮಿ ನೀಡಿರುವ ಶ್ರೀ ಸಿದ್ದೇಗೌಡ ರವರಿಗೆ ಆದ್ಯತೆ ಮೇರೆಗೆ ಇವರಿಗೆ ಹಂಚಿಕೆ ಮಾಡುವ ದರದಲ್ಲಿ ಹಣ ಪಾವತಿಸಿಕೊಂಡು ಒಂದು 30 x 40 ಅಳತೆ ನಿವೇಶನ ಹಂಚಿಕೆ ಮಾಡ ಬಹುದಾಗಿರುತ್ತೆ ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಶ್ರೀ ಸಿ. ಪಿ. ಸಿದ್ದೇಗೌಡ, ಬಿನ್ ಪಾರ್ವತಪ್ಪ ಚಿಕ್ಕಕುರುಬರಹಳ್ಳಿ ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 456 / P1 ರಲ್ಲಿ 00 ಎಕರೆ 10 ಗುಂಟೆ ಜಮೀನನ್ನು ರೂ. 7500=00 ಗುಂಟೆಯಂತೆ ಪ್ರಾಧಿಕಾರಕ್ಕೆ ಮಾರಾಟ ಮಾಡಿರುವುದರಿಂದ ಮಾನವೀಯತೆ ದೃಷ್ಟಿಯಿಂದ ಜಮೀನು ಕಳೆದುಕೊಂಡ ಶ್ರೀ ಸಿ. ಪಿ. ಸಿದ್ದೇಗೌಡ ರವರಿಗೆ ಪ್ರಾಧಿಕಾರ ಕಛೇರಿ ಹಿಂಭಾಗದಲ್ಲಿ ಅಭಿವೃದ್ಧಿಗೊಳಿಸುತ್ತಿರುವ ವಸತಿ ಬಡಾವಣೆ ಆದ್ಯತೆ ಮೇರೆಗೆ 30 x 40 ರ ಅಡಿ ಅಳತೆಯ ನಿವೇಶನವೊಂದನ್ನು ಪ್ರಾಧಿಕಾರ ನಿಗದಿಗೊಳಿಸಿದ ದರವನ್ನು ಪಾವತಿಸಿಕೊಂಡು ಹಂಚಿಕೆ ಮಾಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ. 9 :**

ದಿನಾಂಕ: 05-11-2009 ರಂದು ಚಿಕ್ಕಮಗಳೂರು ಜಿಲ್ಲೆ ಕೇಂದ್ರದಲ್ಲಿ ಭಕ್ತ ಶ್ರೇಷ್ಠ ಶ್ರೀ ಕನಕದಾಸ ಜಯಂತಿ ಆಚರಣೆಗೆ ರೂ. 10,000=00 ವಂತಿಕೆ ನೀಡುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 05-11-2009 ರಂದು ಚಿಕ್ಕಮಗಳೂರು ಜಿಲ್ಲೆ ಕೇಂದ್ರದಲ್ಲಿ ಭಕ್ತ ಶೇಷ್ಠ ಶ್ರೀ ಕನಕದಾಸ ಜಯಂತಿಯನ್ನು ಜಿಲ್ಲೆ ಕೇಂದ್ರದಲ್ಲಿ ಆಚರಿಸುವ ಸಲುವಾಗಿ ದಿನಾಂಕ: 24-10-2009 ರಂದು ಮಾನ್ಯ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ನಡೆಸಿದ ಪೂರ್ವ ಭಾವಿ ಸಭೆಯಲ್ಲಿ ಪ್ರಾಧಿಕಾರದಿಂದ ರೂ. 10,000=00 ವಂತಿಕೆ ನೀಡುವಂತೆ ತೀರ್ಮಾನಿಸಿ ಪ್ರತಿಯನ್ನು ಈ ಕಛೇರಿಗೆ ಕಳುಹಿಸಲಾಗಿದೆ.

ಆದರೆ, ಸರ್ಕಾರಿ ಪತ್ರದ ನಂ. ನಅಇ : 09 : ಮೈಅಪ್ರಾ : 2005 ದಿನಾಂಕ: 12-04-2005 ರಂತೆ ರಾಷ್ಟ್ರೀಯ ಹಬ್ಬಗಳಿಗೆ ಮತ್ತು ಕನ್ನಡ ರಾಜ್ಯೋತ್ಸವಗಳಿಗೆ ಮಾತ್ರ ಗರಿಷ್ಠ 5000=00 ರೂಪಾಯಿಗಳನ್ನು ಮಾತ್ರ ವಂತಿಕೆ ನೀಡುವಂತೆ ಆದೇಶವಿರುತ್ತದೆ. ಈ ಸರ್ಕಾರಿ ಆದೇಶದ ಅನ್ವಯ ಶ್ರೀ ಕನಕದಾಸ ಜಯಂತಿಗೆ ವಂತಿಕೆ ನೀಡಲು ಅವಕಾಶವಿರುವುದಿಲ್ಲ. ಆದ್ದರಿಂದ ವಂತಿಕೆ ನೀಡುವ ಬಗ್ಗೆ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ದಿನಾಂಕ: 05-11-2009 ರಂದು ಚಿಕ್ಕಮಗಳೂರು ಜಿಲ್ಲಾ ಕೇಂದ್ರದಲ್ಲಿ ನಡೆಸಲಾಗುವ ಭಕ್ತ ಶ್ರೇಷ್ಠ ಶ್ರೀ ಕನಕದಾಸ ಜಯಂತಿ ಆಚರಣೆಗಾಗಿ ದಿನಾಂಕ: 24-10-2009 ರಂದು ಮಾನ್ಯ ಜಿಲ್ಲಾಧಿಕಾರಿಗಳವರ ಅಧ್ಯಕ್ಷತೆಯಲ್ಲಿ ನಡೆಸಿದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರಾಧಿಕಾರದಿಂದ ರೂ. 10000=00 ವಂತಿಕೆ ನೀಡುವಂತೆ ನಿರ್ಣಯ ಮಾಡಿ ಕಳುಹಿಸಿದ ಪತ್ರದಂತೆ ಪ್ರಾಧಿಕಾರದಿಂದ ಸರ್ಕಾರಿ ಪತ್ರದ ನಂ. ನಅಇ : 09 : ಮೈಅಪ್ರಾ : 2005 ದಿನಾಂಕ: 12-04-2005 ರಂತೆ ರಾಷ್ಟೀಯ ಹಬ್ಬಗಳು ಮತ್ತು ಕನ್ನಡ ರಾಜ್ಯೋತ್ಸವಗಳಿಗೆ ಮಾತ್ರ ರೂ. 5000=00 ವಂತಿಕೆ ನೀಡಲು ಮಾತ್ರ ಅವಕಾಶವಿರುತ್ತದೆ ಎಂದು ಸಭೆಯಲ್ಲಿ ಆಯುಕ್ತರು ತಿಳಿಸಿದರು ಆದರೂ ಸಹ ಸಭೆಯು ಭಕ್ತ ಶ್ರೇಷ್ಠ ಶ್ರೀ ಕನಕದಾಸ ಜಯಂತಿ ಆಚರಣೆಗೆ ಇತ್ತೀಚೆಗೆ ಸರ್ಕಾರದ ಹಬ್ಬ ಎಂದು ಆದೇಶ ಆಗಿದೆ. ಜಿಲ್ಲಾಡಳಿತದ ಸಭೆಯ ನಿರ್ಣಯ ಹಾಗೂ ಕೋರಿಕೆಯಂತೆ ರೂ. 10000=00 ವಂತಿಕೆ ನೀಡಬಹುದೆಂದು, ನಂತರ ಸರ್ಕಾರದಿಂದ ಈ ಬಗ್ಗೆ ಘಟನೋತ್ತರ ಮಂಜೂರಾತಿ ಪಡೆಯಬಹುದೆಂದು ಸರ್ವಾನುಮತದಿಂದ ಸಭೆಯು ತೀರ್ಮಾನಿಸಿತು.

**ವಿಷಯ ನಂ. 10 :**

ಹಿರೇಮಗಳೂರು ಗ್ರಾಮದ ಸರ್ವೆ ನಂ. 321 / 7 ಮತ್ತು 321 / 8 ರಲ್ಲಿನ 00 ಎಕರೆ 17 ಗುಂಟೆಯ ಪ್ರಾಧಿಕಾರದ ಜಾಗದಲ್ಲಿ ಶ್ರೀ ಸಿ. ಎಂ. ಚಂದ್ರೇಗೌಡರು ಮತ್ತು ಅವರ ಸಹೋದರರು ನಿರ್ಮಿಸಿರುವ ಅಕ್ರಮ ಹಾಗೂ ಅನಧಿಕೃತ ಕಟ್ಟಡ ತೆರವುಗೊಳಿಸುವ ಬಗ್ಗೆ.

**ಟಿಪ್ಪಣಿ :**

ಹಿರೇಮಗಳೂರು ಗ್ರಾಮದ ಸರ್ವೆ ನಂ. 321 / 7 ಮತ್ತು 321 / 8 ರಲ್ಲಿನ 00 ಎಕರೆ 17 ಗುಂಟೆ ಪ್ರಾಧಿಕಾರದ ಜಾಗದಲ್ಲಿ ಶ್ರೀ ಸಿ. ಎಂ. ಚಂದ್ರೇಗೌಡ ಮತ್ತು ಶ್ರೀ ಸಿ. ಎಂ. ಹುಲಿಯಪ್ಪ ಇನ್ನಿತರರು ನಿರ್ಮಿಸಿರುವ ಅಕ್ರಮ ಮತ್ತು ಅನಧಿಕೃತ ಕಟ್ಟಡ ತೆರವುಗೊಳಿಸುವಂತೆ ಅವರುಗಳಿಗೆ ಈ ಕಛೇರಿಯಿಂದ ಅನೇಕ ಬಾರಿ ತಿಳುವಳಿಕೆಗಳನ್ನು ನೀಡಲಾಗಿದ್ದರೂ ಈ ವರೆವಿಗೂ ತೆರವುಗೊಳಿಸಿರುವುದಿಲ್ಲ ಹಾಗೆಯೇ, ಈ ಬಗ್ಗೆ ಶ್ರೀ ಸಿ. ಎಂ. ಚಂದ್ರೇಗೌಡ ರವರು ಘನ ಉಚ್ಛ ನ್ಯಾಯಾಲಯದಲ್ಲಿ ಈವರೆವಿಗೆ ಸಲ್ಲಿಸಲಾಗಿದ್ದ ಎಲ್ಲಾ ಮೇಲ್ಮನವಿಗಳು ವಜಾ ಆಗಿದ್ದು ಎಲ್ಲಾ ತೀರ್ಪುಗಳೂ ಪ್ರಾಧಿಕಾರದ ಪರವಾಗಿ ಬಂದಿರುತ್ತದೆ. ಅಂತಿಮವಾಗಿ, ಉಚ್ಛನ್ಯಾಯಾಲಯದಲ್ಲಿನ ರಿಟ್ ಪಿಟಿಷನ್ ನಂ. 7885 / 2007 (LA-RES) ದಿನಾಂಕ: 21-02-2009 ವಜಾ ಆಗಿ ತೀರ್ಪು ಪ್ರಾಧಿಕಾರದ ಪರವಾಗಿ ಬಂದಿದ್ದು ಅರ್ಜಿದಾರರಾದ ಶ್ರೀ ಸಿ. ಎಂ. ಚಂದ್ರೇಗೌಡರಿಗೆ ನ್ಯಾಯಾಲಯವು ರೂ. 5000=00 ದಂಡ ಸಹ ವಿಧಿಸಿರುತ್ತದೆ. ಹಾಗೆಯೇ ಹುಲಿಯಪ್ಪ ಸದಾಶಿವಪ್ಪ ಇತರರು ಸಲ್ಲಿಸಲಾಗಿದ್ದ ಮೇಲ್ಮವಿಗಳಿಗೆ ಘನ ಉಚ್ಛನ್ಯಾಯಾಲಯವು ಯಥಾ ಸ್ಥಿತಿ ಕಾಪಾಡುವಂತೆ ಆದೇಶನೀಡಲಾಗಿರುತ್ತದೆ. ಆದರಂತೆ, ಘನ ಉಚ್ಛನ್ಯಾಯಾಲಯದಿಂದ ಅಂತಿಮ ತೀರ್ಪು ಬಂದನಂತರ ನ್ಯಾಯಾಲಯದ ಆದೇಶದಂತೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಶ್ರೀ ಸಿ. ಎಂ. ಚಂದ್ರೇಗೌಡ ಬಿನ್ ಲೇಟ್ ಮಲ್ಲೇಗೌಡ ಹಾಗೂ ಅವರ ಸಹೋದರರು ಹಿರೇಮಗಳೂರು ಗ್ರಾಮದ ಸರ್ವೆ ನಂ. 321 / 7 ಮತ್ತು 321 / 8 ರಲ್ಲಿ 17 ಗುಂಟೆ ಪ್ರದೇಶದ ಪ್ರಾಧಿಕಾರ ಜಾಗದಲ್ಲಿ ಅನಧಿಕೃತವಾಗಿ ಮತ್ತು ಅಕ್ರಮವಾಗಿ ನಿರ್ಮಿಸಿರುವ ಕಟ್ಟಡ ತೆರವುಗೊಳಿಸುವ ಬಗ್ಗೆ ಶ್ರೀ ಸಿ. ಎಂ. ಚಂದ್ರೇಗೌಡರು ಸಲ್ಲಿಸಿದ್ದ ಮೇಲ್ಮನವಿಯು ವಜಾ ಆಗಿರುವುದರಿಂದ ನಗರಸಭೆಗೆ ಪತ್ರ ಬರೆದು ಅಕ್ರಮ ಖಾತೆ ರದ್ದುಪಡಿಸಲು ತೀರ್ಮಾನಿಸಿತ್ತು. ಹಾಗೂ ಅವರ ಸಹೋದರರು ಘನ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಗೆ ನ್ಯಾಯಾಲಯವು ಯತಾಸ್ಥಿತಿ ಕಾಪಾಡುವಂತೆ ಆದೇಶ ನೀಡಿರುವುದರಿಂದ, ಸದರಿ ಆದೇಶವನ್ನು ಕೂಡಲೇ ತೆರವುಗೊಳಿಸುವಂತೆ ಕ್ರಮಕೈಗೊಳ್ಳಲು ಹಾಗೂ ನಿಯಮಾನುಸಾರ ಕಾನೂನು ಕ್ರಮ ತೆಗೆದುಕೊಂಡು ಅನಧಿಕೃತ ಮತ್ತು ಅಕ್ರಮ ಕಟ್ಟಡ ತೆರವುಗೊಳಿಸಿ ಟೆಂಡರ್ ಕರಾರಿನಂತೆ ಕಾಮಗಾರಿ ನಿರ್ವಹಿಸಲು ಅನುವುಮಾಡಿಕೊಡುವಂತೆ ಹಾಗೂ ವಸತಿ ಬಡಾವಣೆ ನಿರ್ಮಾಣ ಮಾಡುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

## ವಿಷಯ ನಂ. 11 :

ಚಿಕ್ಕಮಗಳೂರು ತಾಲ್ಲೂಕು ರಾಮನಹಳ್ಳಿ ಗ್ರಾಮದ ಸರ್ವೆ ನಂ. 99 ರಲ್ಲಿ ಹೈಟೆಂಷನ್ ಲೈನ್‌ಕೆಳಗೆ ಮತ್ತು ಉದ್ಯಾನವನದಲ್ಲಿ ಹಾಗೂ ಸರ್ವೆ ನಂ. 61 ರಲ್ಲಿ ಉದ್ಯಾವನದ ಜಾಗದಲ್ಲಿ ನಿವೇಶನಗಳನ್ನಾಗಿ ಖಾತೆ ಮಾಡಿ ಸದರಿ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಿರುವುದನ್ನು ತೆರವುಗೊಳಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ರಾಮನಹಳ್ಳಿ ಗ್ರಾಮದ ಸರ್ವೆ ನಂ. 99 ರಲ್ಲಿ ಹೈಟೆಂಷನ್ ಲೈನ್‌ಕೆಳಗೆ ಮತ್ತು ಉದ್ಯಾನವನದಲ್ಲಿ ಹಾಗೂ ಸರ್ವೆ ನಂ. 61 ರಲ್ಲಿ ಉದ್ಯಾವನದ ಜಾಗದಲ್ಲಿ ನಿವೇಶನಗಳನ್ನಾಗಿ ಮಾಡಿ ಖಾತೆ ತೆರೆದು ಕಟ್ಟಡ ನಿರ್ಮಿಸಲಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರದ ಕಾಯ್ದೆಯ ಕಲಂ 39 ರನ್ವಯ ಯಾವುದೇ ಉದ್ಯಾನವನ ಹಾಗೂ ರಸ್ತೆ ಜಾಗದಲ್ಲಿ ನಿವೇಶನಗಳನ್ನು ರಚಿಸಲು ಅಥವಾ ಕಟ್ಟಡಗಳನ್ನು ನಿರ್ಮಿಸಲು ಕಾನೂನಿನ ಅಡಿಯಲ್ಲಿ ಅವಕಾಶವಿರುವುದಿಲ್ಲ. ಅವುಗಳು ಸಹ ಊರ್ಜಿತವಾಗುವುದಿಲ್ಲ ಹೀಗೆ ಅಕ್ರಮವಾಗಿ ನಿವೇಶನಗಳಿಗೆ ಖಾತೆ ಮಾಡಿದ್ದಲ್ಲಿ ಖಾತೆಗಳನ್ನು ರದ್ದು ಮಾಡಿ, ಕಟ್ಟಡಗಳನ್ನು ಕಟ್ಟಿದ್ದಲ್ಲಿ ಕಟ್ಟಡಗಳನ್ನು ತೆರವುಗೊಳಿಸಬಹುದಾಗಿರುತ್ತದೆ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ರಾಮನಹಳ್ಳಿ ಗ್ರಾಮದ ಸರ್ವೆ ನಂ. 99 ರಲ್ಲಿ ಹೈಟೆನ್ಷನ್ ಲೈನ್ ಕೆಳಗೆ ಮತ್ತು ಉದ್ಯಾನವನದಲ್ಲಿ ಹಾಗೂ ಸರ್ವೆ ನಂ. 61 ರಲ್ಲಿ ಉದ್ಯಾನವನದಲ್ಲಿನ ಜಾಗದಲ್ಲಿ ನಿವೇಶನಗಳನ್ನಾಗಿ ಖಾತೆ ಮಾಡಿಕೊಟ್ಟಿರುವುದು ಹಾಗೂ ಕಟ್ಟಡ ನಿರ್ಮಿಸಿರುವುದಕ್ಕೆ ಅನುಮತಿ ನೀಡಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ ಕಲಂ 39 ರನ್ವಯ ಈ ಭಾಗದಲ್ಲಿ ನಿವೇಶನ ಅನುಮೋದನೆ ಆಗಿದ್ದರೂ ಸಹ ಅನೂರ್ಜಿತಗೊಳ್ಳುತ್ತದೆ. ಆದ್ದರಿಂದ ಈ ನಿವೇಶನಗಳನ್ನು ರದ್ದುಗೊಳಿಸಲು ಸಭೆ ತೀರ್ಮಾನಿಸಿತು. ಪೌರಾಯುಕ್ತರ ಪರವಾಗಿ ಸಭೆಗೆ ಆಗಮಿಸಿದ್ದ ಪ್ರತಿನಿಧಿಗಳಿಗೆ ಕೂಡಲೇ ಸದರಿ ಖಾತೆಗಳನ್ನು ರದ್ದುಗೊಳಿಸುವಂತೆ ಮತ್ತು ಆ ಜಾಗದಲ್ಲಿ ನಿರ್ಮಿಸಿರುವ ಕಟ್ಟಡಗಳನ್ನು ಕೂಡಲೇ ತೆರವುಗೊಳಿಸುವಂತೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

## ವಿಷಯ ನಂ. 12 :

ಅಧ್ಯಕ್ಷರು, ಪ್ರಭೋದಿನಿ ಯೋಗ ಶಿಕ್ಷಣ ಟ್ರಸ್ಟ್, ಚಿಕ್ಕಮಗಳೂರು ರವರು ಯೋಗ ಶಿಕ್ಷಣ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಶ್ರೀ ಮದುವನ ಲೇಔಟ್ ನಲ್ಲಿರುವ 5 ಪಾರ್ಕ್‌ಗಳಲ್ಲಿ 3 ಅಥವಾ 4 ನೇ ಪಾರ್ಕ್‌ನಲ್ಲಿ '40 x 60' ಅಳತೆ ನಾಗರೀಕ ಸೌಲಭ್ಯ ಹಂಚಿಕೆ ಮಾಡಲು ಕೋರಿರುವ ಬಗ್ಗೆ.

**ಟಿಪ್ಪಣಿ :**

ಅಧ್ಯಕ್ಷರು, ಪ್ರಭೋದಿನಿ ಯೋಗ ಶಿಕ್ಷಣ ಟ್ರಸ್ಟ್, ಚಿಕ್ಕಮಗಳೂರು ರವರು ಯೋಗ ಶಿಕ್ಷಣ ಶಾಲೆ ಕಟ್ಟಡ ಕಟ್ಟಲು ಮದುವನ ವಸತಿ ಬಡಾವಣೆಯಲ್ಲಿ 3 ಅಥವಾ 4 ನೇ ನಂಬರಿನ ಪಾರ್ಕ್ ಜಾಗದಲ್ಲಿ '40 x 60' ಅಳತೆ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಮಾಡುವಂತೆ ಕೋರಿರುತ್ತಾರೆ. ಅವರ ಕೋರಿಕೆಯಂತೆ ಪಾರ್ಕ್ ಜಾಗದಲ್ಲಿ ನಿವೇಶನ ಹಂಚಿಕೆ ಮಾಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಮಾಡಬಹುದಾಗಿರುತ್ತೆ. ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಅಧ್ಯಕ್ಷರು ಪ್ರಬೋದಿನಿ ಯೋಗಶಿಕ್ಷಣ ಟ್ರಸ್ಟ್ ಚಿಕ್ಕಮಗಳೂರು ರವರು ಯೋಗ ಶಿಕ್ಷಣ ಶಾಲಾ ಕಟ್ಟಡ ನಿರ್ಮಾಣಕ್ಕಾಗಿ ಶ್ರೀ ಮದುವನ ಲೇಔಟ್‌ನಲ್ಲಿ ಕೇಳಿರುವ ಪಾರ್ಕ್‌ಜಾಗದಲ್ಲಿ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಮಾಡಲು ಪ್ರಾಧಿಕಾರದ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದರೆ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮಗಳ ಅನ್ವಯ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ಸಂದರ್ಭದಲ್ಲಿ ಸದರಿ ಸಂಘದಿಂದ ಅರ್ಜಿ ಸಲ್ಲಿಸಿದಲ್ಲಿ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮಗಳ ಅನ್ವಯ ಇರುವ ಷರತ್ತುಗಳನ್ನು ಪೂರೈಸಿದಲ್ಲಿ ನಿಯಮಾನುಸಾರ ನಿವೇಶನ ಹಂಚಿಕೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬಹುದೆಂದು ಸಭೆಯು ಸರ್ವಾನುಮತದಿಂದ ತಿರ್ಮಾನಿಸಲಾಯಿತು.

## ವಿಷಯ ನಂ. 13 :

ಚಿಕ್ಕಮಗಳೂರು ತಾಲ್ಲೂಕು ಉಪ್ಪಳ್ಳಿ, ಇಂದಾವರ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲು ಈ ಹಿಂದಿನ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದ್ದ 200 ಎಕರೆ ಜೊತೆಗೆ 04 ಎಕರೆ 02 ಗುಂಟೆ ಜಮೀನನ್ನು ಸೇರ್ಪಡೆ ಮಾಡುವ ಬಗ್ಗೆ.

ಚಿಕ್ಕಮಗಳೂರು ತಾಲ್ಲೂಕು ಉಪ್ಪಳ್ಳಿ, ಇಂದಾವರ ಗ್ರಾಮಗಳ ವಿವಿಧ ಸರ್ವೆ ನಂಬರ್‌ಗಳಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲು ಈ ಹಿಂದಿನ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದ್ದ 200 ಎಕರೆ ಜೊತೆಗೆ 04 ಎಕರೆ 02 ಗುಂಟೆ ಜಮೀನನ್ನು ಸೇರ್ಪಡೆ ಮಾಡುವ ಬಗ್ಗೆ. ಮಾನ್ಯ ಪ್ರಾಧಿಕಾರದ ಅಧ್ಯಕ್ಷರು ಇಂದಾವರ ಗ್ರಾಮದ ಸರ್ವೆ ನಂ. 67 ರ ಶ್ರೀ ಜಾನ್ ಕ್ಲಿರ್ಪಡ್ ಪರ್ನಾಂಡೀಸ್ ಮತ್ತು ಎಮಿಲಿಯಾನಾ ಫರ್ನಾಂಡೀಸ್ ರವರಿಗೆ ಸೇರಿದ 04 ಎಕರೆ 02 ಗುಂಟೆ ಜಮೀನನ್ನು ಹೆಚ್ಚುವರಿಯಾಗಿ ಭೂಸ್ವಾಧೀನತೆಗೆ ಸೇರಿಸುವಂತೆ, ಮಾನ್ಯ ಅಧ್ಯಕ್ಷರು ಸೂಚನೆ ನೀಡಿದ್ದು ಅದರಂತೆ ಮುಂದಿನ ಸಭೆಯ ಘಟನೋತ್ತರ ಅನುಮೋದನೆ ನಿರೀಕ್ಷಿಸಿ ಭೂಸ್ವಾಧೀನಕ್ಕೆ ಕ್ರಮಕೈಗೊಳ್ಳಲು ನಿರ್ಧರಿಸಲಾಗಿದೆ.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

**ದಿನಾಂಕ: 30-10-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಸಭೆಯ ತೀರ್ಮಾನದಲ್ಲಿ ಈ ಕೆಳಕಂಡ ತೀರ್ಮಾನಗಳು ಸೇರ್ಪಡೆ ಆಗಿರುವುದಿಲ್ಲ ಎಂದು ಅಧ್ಯಕ್ಷರ ಸೂಚನೆ ಮೇರೆಗೆ ಈ ಕೆಳಕಂಡ ತೀರ್ಮಾನಗಳನ್ನು ಅಳವಡಿಸಲು ತಿದ್ದುಪಡಿ ನಿರ್ಣಯ ಮಾಡಲಾಗಿದೆ.**

1. ಇಂದಾವರ ಗ್ರಾಮದ ಸರ್ವೆ ನಂ. 34, 41, 42, 43, 44, 45,46, 47, 48, 49, 50, 51,52, 56,57,58, 59, 60, 61, 62, 63, 65, 581 ಹಾಗೂ 582 ಮತ್ತು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 19 , 20 , 21 ರಲ್ಲಿನ ಸುಮಾರು 200 ಎಕರೆ 00 ಗುಂಟೆ ವಿಸ್ತೀರ್ಣ ಹಾಗೂ ತೇಗೂರು ಗ್ರಾಮದ ಸರ್ವೆ ನಂ. 108, 109, 110, 111, 112, 113, 114, 115, 117, 118, 132, 183, 184, 185, 186, 187, 188, 189, 242, 243 ಮತ್ತು ಇತರೆ ಸರ್ವೆ ನಂಬರುಗಳಲ್ಲಿ ಸುಮಾರು 110 ಎಕರೆ ಒಟ್ಟು 310 ಎಕರೆ ವಿಸ್ತೀರ್ಣದ ಜಾಗದಲ್ಲಿ ಪ್ರಾಧಿಕಾರದ ವತಿಯಿಂದ ವಸತಿ ಬಡಾವಣೆ ಯೋಜನೆ ಉದ್ದೇಶಿಸಿರುವುದರಿಂದ ಈ ಎಲ್ಲಾ ಸರ್ವೆ ನಂಬರುಗಳನ್ನು ಕೃಷಿಯಿಂದ ವಸತಿಗಾಗಿ ಬದಲಾವಣೆ ಮಾಡಲು ಹಾಗೂ ಈ ವಿಸ್ತೀರ್ಣಕ್ಕೆ ಅವಶ್ಯವಿರುವ ಶೇಕಡ 10 ರಷ್ಟು ಉದ್ಯಾನವನ ಶೇಕಡ 8 ರಷ್ಟು ನಾಗರೀಕ ಸೌಲಭ್ಯದ ಜಾಗವನ್ನು ಈ ಪ್ರದೇಶದ ಮಧ್ಯಭಾಗದಲ್ಲಿ ಮೀಸಲಿಡಲು ಸಭೆ ತೀರ್ಮಾನಿಸಿತು, ಉಳಿದಿರುವ ಉದ್ಯಾನವನ ಹಾಗೂ ನಾಗರೀಕ ಸೌಲಭ್ಯದ ಜಾಗವನ್ನು ವಿನ್ಯಾಸ ನಕ್ಷೆ ಅನುಮೋದನೆ ಸಮಯದಲ್ಲಿ ಅಳವಡಿಸಬಹುದಾಗಿದೆ.

2. ದೀಪಾ ನರ್ಸಿಂಗ್ ಹೋಂ ರಸ್ತೆಯ ಅಕ್ಕಪಕ್ಕದಲ್ಲಿ ರಸ್ತೆಗೆ ಹೊಂದಿಕೊಂಡಂತೆ ಹಾಲಿ ವಸತಿಗಾಗಿ ನೀಡಿರುವ ಅಗಲಕ್ಕಿಂತ ಹೆಚ್ಚುವರಿಯಾಗಿ 200 ಮೀಟರ್ ಅಗಲಕ್ಕೆ ವಸತಿಗಾಗಿ ಮೀಸಲಿಡಲು ತೀರ್ಮಾನಿಸಿದ್ದನ್ನು ರದ್ದುಪಡಿಸಲು ಸಭೆ ತೀರ್ಮಾನಿಸಲಾಯಿತು.

3. ರೈಲ್ವೆ ಕೆಳಭಾಗದ ಪ್ರದೇಶದಲ್ಲಿ (ದಕ್ಷಿಣ) ವಸತಿಗಾಗಿ ಮೀಸಲಿಡುವ ಪ್ರದೇಶಕ್ಕೆ ಅವಶ್ಯವಿರುವ ಶೇಕಡ 15 ರಷ್ಟು ಉದ್ಯಾನವನ ಹಾಗೂ ಶೇಕಡ 10 ರಷ್ಟು ನಾಗರೀಕ ಸೌಕರ್ಯದ ಜಾಗಗಳನ್ನು ಸರ್ವೆ ನಂ. 292 ಹಾಗೂ 303 ರಲ್ಲಿ ಅಳವಡಿಸಲು ತೀರ್ಮಾನಿಸಲಾಯಿತು.

4. ಬೀಕನಹಳ್ಳಿ ಕಾವಲು ಸರ್ವೆ ನಂ. 2, 3 ರ ಜಾಗಗಳನ್ನು ಹಾಗೂ ಮುರಾರ್ಜಿ ಶಾಲೆ ಇರುವ ಸರ್ವೆ ನಂಬರುಗಳಲ್ಲಿ ಉಳಿದಿರುವ ಪ್ರದೇಶಕ್ಕೆ ಕೃಷಿಯಿಂದ ವಸತಿಗಾಗಿ ಮೀಸಲಿಡಲು ಮಾನ್ಯ ಅಧ್ಯಕ್ಷರು ಒತ್ತಾಯಿಸಿದ್ದು ಅದರಂತೆ ತೀರ್ಮಾನಿಸಲಾಯಿತು.

ಮೇಲ್ಕಂಡ ಎಲ್ಲಾ ಬದಲಾವಣೆಗಳನ್ನು ಅಳವಡಿಸಿ ಮಹಾ ಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆ ತೀರ್ಮಾನಿಸಿತು.

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 02-01-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 3 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ನಗರ ಯೋಜನಾ ಸದಸ್ಯರು) | ಸದಸ್ಯರು |
| 7 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 8 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. | ಸದಸ್ಯರು |
| 9 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |
| 10 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 12 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಚಿಕ್ಕಮಗಳೂರು | ಸದಸ್ಯರು |
| 13 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |

**ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.**

| | | |
|---|---|---|
| 1 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 3 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 4 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 5 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. | ಸದಸ್ಯರು |

**ವಿಷಯ ನಂ 1.**

ದಿನಾಂಕ: 30-12-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 30-12-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗಳಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ:**

ದಿನಾಂಕ: 30-12-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸಭೆಯಲ್ಲಿ ಮತ್ತೊಮ್ಮೆ ಚರ್ಚಿಸಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

2009 ನೇ ಸಾಲಿನ ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳ ಆದಾಯ ಮತ್ತು ವೆಚ್ಛದ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

2009 ನೇ ಸಾಲಿನ ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ:**

2009 ನೇ ಸಾಲಿನ ಅಕ್ಟೋಬರ್ ಮತ್ತು ನವೆಂಬರ್ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಸಭೆಯಲ್ಲಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 3.**

ಚಿಕ್ಕಮಗಳೂರು ತಾಲ್ಲೂಕು ಹಿರೇಮಗಳೂರು ಕೆರೆಯ ಪ್ರದೇಶದಲ್ಲಿ ವಾಟರ್ ಪಾರ್ಕ್ ನಿರ್ಮಾಣ ಮಾಡಿ ಕೆರೆ ಅಭಿವೃದ್ದಿ ಪಡಿಸುವ ಬಗ್ಗೆ ಸರ್ಕಾರದಿಂದ ದಿನಾಂಕ: 07-12-2009 ರಂದು ಬಂದಿರುವ ಪತ್ರದ ಬಗ್ಗೆ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಹಿರೇಮಗಳೂರು ಕೆರೆಯ ಪ್ರದೇಶದಲ್ಲಿ ಸುಮಾರು ಎಂಟು ಎಕರೆ ಪ್ರದೇಶದಲ್ಲಿ ವಾಟರ್ ಪಾರ್ಕ್ ನಿರ್ಮಾಣ ಮಾಡಿ ಕೆರೆ ಅಭಿವೃದ್ಧಿ ಪಡಿಸುವ ಸಲುವಾಗಿ ದಿನಾಂಕ: 16-01-2009 ರ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನ ಕೈಗೊಂಡು ನಂತರ ದಿನಾಂಕ: 02-03-2009 ರಲ್ಲಿ ಈ ಬಗ್ಗೆ ಸರ್ಕಾರದ ಅನುಮೋದನೆ ಕೋರಿ ಪತ್ರ ಬರೆಯಲಾಗಿದ್ದು ನಂತರ ನೀರಾವರಿ ಇಲಾಖೆಯಿಂದ ದಿನಾಂಕ: 07-12-2009 ರಂದು ಬಂದಿರುವ ಪತ್ರದಲ್ಲಿ ಹಿರೇಮಗಳೂರು ಕೆರೆ ಪ್ರದೇಶದಲ್ಲಿ ವಾಟರ್ ಪಾರ್ಕ್ ಮಾಡಲು ಅವಕಾಶ ವಿರುವುದಿಲ್ಲವೆಂದು ತಿಳಿಸಲಾಗಿರುತ್ತದೆ. ಈ ವಿಚಾರವನ್ನು ಸಭೆಯ ಮುಂದೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಸದರಿ ಕೆರೆಯು ರೈತರ ಭೂಮಿಗೆ ನೀರು ನೀಡುವ ನೀರಾವರಿ ಕೆರೆಆಗಿರುವುದರಿಂದ ದಿನಾಂಕ: 07-12-2009 ರ ಸಣ್ಣ ನೀರಾವರಿ ಇಲಾಖೆಯ ಪತ್ರದ ಆದಾರದ ಮೇಲೆ ಈ ಯೋಜನೆ ಕೈಬಿಡಲು ಸೂಕ್ತವೆಂದು ಸಭೆ ಅಭಿಪ್ರಾಯ ಪಟ್ಟಿತು. ಮಾನ್ಯ ಅಧ್ಯಕ್ಷರು ಮಾತನಾಡಿ ಹಾಸನ ಮತ್ತು ಚನ್ನಪಟ್ಟಣದಲ್ಲಿ ಇದೇ ರೀತಿ ಯೋಜನೆಗಳು ಅನುಷ್ಠಾನಗೊಂಡಿದ್ದು ಅವುಗಳ ವಿವರಗಳನ್ನು ತರಿಸಿಕೊಂಡು ಪರಿಗಣಿಸಲು ಸಲಹೆ ಮಾಡಿದರು. ಅದರಂತೆ, ಸಭೆ ಒಪ್ಪಿ ಈಗ ಯೋಜನೆಯನ್ನು ಕೈಬಿಟ್ಟು ಬೇರೆ ಯೋಜನೆಗಳ ಅನುಷ್ಠಾನದ ವರದಿ ಆಧರಿಸಿ ಮುಂದಿನ ಸಭೆಯಲ್ಲಿ ಚರ್ಚಿಸಿ ಯಾವ ಕೆರೆಯಲ್ಲಿ ವಾಟರ್ ಪಾರ್ಕ್ ನಿರ್ಮಾಣಕ್ಕೆ ಸೂಕ್ತವಾಗಿದೆಯೋ ಅಲ್ಲಿ ಪರಿಗಣಿಸಬಹುದಾಗಿದೆ ಎಂದು ಸಭೆ ಅಭಿಪ್ರಾಯ ಪಟ್ಟಿತ್ತು. ಹಿರೇಮಗಳೂರು ಕೆರೆ ವ್ಯಾಪ್ತಿಯಲ್ಲಿ ವಾಟರ್ ಪಾರ್ಕ್ ನಿರ್ಮಾಣ ಯೋಜನೆ ಕೈಬಿಡಲು ಸಭೆ ತೀರ್ಮಾನಿಸಿತು.

**ವಿಷಯ ನಂ 4.**

ಶ್ರೀ ಮರಿಶೆಟ್ಟಿ ಬಿನ್ ನಾಗಪ್ಪ ಶೆಟ್ಟಿ, ಲಕ್ಷ್ಮೀಶನಗರ ಬಡಾವಣೆ, ಚಿಕ್ಕಮಗಳೂರು ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 2 ರಲ್ಲಿನ 00 ಎಕರೆ 09 ಗುಂಟೆ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಮರಿಶೆಟ್ಟಿ ಬಿನ್ ನಾಗಪ್ಪಶೆಟ್ಟಿ, ಲಕ್ಷ್ಮೀಶನಗರ ಬಡಾವಣೆ, ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 2 ರಲ್ಲಿನ 00 ಎಕರೆ 09 ಗುಂಟೆ ಜಾಗಕ್ಕೆ ಬೈ–ಪಾಸ್ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸರ್ಕಾರದಿಂದ ಅನುಮೋದನೆಯಾಗಿರುವ ಸಿಡಿಪಿ ನಕ್ಷೆಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಕಾಯ್ದಿರಿಸಿದೆ. ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ಪರಿಷ್ಕೃತ –I (ತಾತ್ಕಾಲಿಕ) ನಕ್ಷೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ. ವಾಣಿಜ್ಯದಲ್ಲಿ ವಸತಿಗೆ ಅವಕಾಶ ಇರುತ್ತದೆ. ಸಿ.ಡಿ.ಪಿ. ಯಲ್ಲಿ ಕೈಗಾರಿಕಾ ವಲಯದಲ್ಲಿರುವುದರಿಂದ ಇದನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ವಸತಿಗೆ ತಾಂತ್ರಿಕ ಅಭಿಪ್ರಾಯ ನೀಡಲು (ಭೂ ಪರಿವರ್ತನೆ ಸಂಬಂಧ) ಅವಕಾಶ ಇರುತ್ತದೆ, ಆದ್ದರಿಂದ ಪ್ರಾಧಿಕಾರದ ಘಟನೋತ್ತರ ಅನುಮೋದನೆಗೆ ವಿಷಯ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಮರಿಶೆಟ್ಟಿ ಬಿನ್ ನಾಗಪ್ಪಶೆಟ್ಟಿ, ಲಕ್ಷ್ಮೀಶನಗರ ಬಡಾವಣೆ, ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 2 ರಲ್ಲಿನ 00 ಎಕರೆ 09 ಗುಂಟೆ ಜಾಗದ ಜಂಟಿ ಸ್ಥಳ ಪರಿಶೀಲನೆ ಮಾಡಲಾಯಿತು. ಸದರಿ ಜಾಗಕ್ಕೆ ಬೈ–ಪಾಸ್ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸರ್ಕಾರದಿಂದ ಅನುಮೋದನೆಯಾಗಿರುವ ಸಿಡಿಪಿ ನಕ್ಷೆಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಕಾಯ್ದಿರಿಸಿದೆ. ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ಪರಿಷ್ಕೃತ –I (ತಾತ್ಕಾಲಿಕ) ನಕ್ಷೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ, ವಾಣಿಜ್ಯದಲ್ಲಿ ವಸತಿಗೆ ಅವಕಾಶ ಇರುತ್ತದೆ, ಸದರಿ ಅಭಿಪ್ರಾಯವನ್ನು ಅನುಮೋದಿಸಬಹುದು.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ನಗರ ಯೋಜನಾ ಸದಸ್ಯರ ತಾಂತ್ರಿಕ ಅಭಿಪ್ರಾಯ ಅನುಸರಿಸಿ ಸಭೆಯು ಘಟನೋತ್ತರ ಅನುಮೋದನೆ ಸಭೆ ಒಪ್ಪಿಗೆ ನೀಡಿತು.

**ವಿಷಯ ನಂ 5.**

ಡಾ|| ಎನ್. ರವಿಪ್ರಕಾಶ್, ಬಿನ್ ಶ್ರೀ ಎಂ. ನಾರಾಯಣ, ಹೊಸಮನೆ ಬಡಾವಣೆ, ಚಿಕ್ಕಮಗಳೂರು. ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 20 ಗುಂಟೆ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಕೋರಿರುವ ಬಗ್ಗೆ.

**ಟಿಪ್ಪಣಿ :**

ಡಾ|| ಎನ್. ರವಿಪ್ರಕಾಶ್ ಬಿನ್ ಶ್ರೀ ಎಂ. ನಾರಾಯಣ, ಹೊಸಮನೆ ಬಡಾವಣೆ, ಚಿಕ್ಕಮಗಳೂರು. ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 20 ಗುಂಟೆ ಜಮೀನಿಗೆ ಬೈ–ಪಾಸ್ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸರ್ಕಾರದಿಂದ ಅನುಮೋದನೆಯಾಗಿರುವ ಸಿ.ಡಿ.ಪಿ ನಕ್ಷೆಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಕಾಯ್ದಿರಿಸಿದೆ. ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ಪರಿಷ್ಕೃತ –I (ತಾತ್ಕಾಲಿಕ) ನಕ್ಷೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ. ವಾಣಿಜ್ಯದಲ್ಲಿ ವಸತಿಗೆ ಅವಕಾಶ ಇರುತ್ತದೆ. ಸಿ.ಡಿ.ಪಿ. ಯಲ್ಲಿ ಕೈಗಾರಿಕಾ ವಲಯದಲ್ಲಿರುವುದರಿಂದ ಇದನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ವಸತಿಗೆ ತಾಂತ್ರಿಕ ಅಭಿಪ್ರಾಯ ನೀಡಲು (ಭೂ ಪರಿವರ್ತನೆ ಸಂಬಂಧ) ಅವಕಾಶ ಇರುತ್ತದೆ, ಆದ್ದರಿಂದ ಪ್ರಾಧಿಕಾರದ ಘಟನೋತ್ತರ ಅನುಮೋದನೆಗೆ ವಿಷಯ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಡಾ|| ಎನ್. ರವಿಪ್ರಕಾಶ್, ಬಿನ್ ಶ್ರೀ ಎಂ. ನಾರಾಯಣ, ಹೊಸಮನೆ ಬಡಾವಣೆ, ಚಿಕ್ಕಮಗಳೂರು. ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 20 ಗುಂಟೆ ಜಮೀನು ನಿನ ಜಂಟಿ ಸ್ಥಳ ಪರಿಶೀಲನೆಯನ್ನು ಮಾಡಲಾಯಿತು. ಸದರಿ ಜಾಗಕ್ಕೆ ಬೈಪಾಸ್ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸರ್ಕಾರದಿಂದ ಅನುಮೋದನೆಯಾಗಿರುವ ಸಿಡಿಪಿ ನಕ್ಷೆಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಕಾಯ್ದಿರಿಸಿದೆ. ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ಪರಿಷ್ಕೃತ –I (ತಾತ್ಕಾಲಿಕ) ನಕ್ಷೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ, ವಾಣಿಜ್ಯದಲ್ಲಿ ವಸತಿಗೆ ಅವಕಾಶ ಇರುತ್ತದೆ, ಸದರಿ ಅಭಿಪ್ರಾಯವನ್ನು ಅನುಮೋದಿಸಬಹುದು.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ನಗರ ಯೋಜನಾ ಸದಸ್ಯರ ತಾಂತ್ರಿಕ ಅಭಿಪ್ರಾಯ ಅನುಸರಿಸಿ ಸಭೆಯು ಘಟನೋತ್ತರ ಅನುಮೋದನೆ ಸಭೆ ಒಪ್ಪಿಗೆ ನೀಡಿತು.

**ವಿಷಯ ನಂ 6.**

ಶ್ರೀ ಪಾಪಣ್ಣ ಮತ್ತು ವೆಂಕಟೇಶ್ ಬಿನ್ ಗುರುವಯ್ಯ, ಕೆಂಪನಹಳ್ಳಿ, ಚಿಕ್ಕಮಗಳೂರು. ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತಿಸಲು ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಪಾಪಣ್ಣ ಮತ್ತು ವೆಂಕಟೇಶ್ ಬಿನ್ ಗುರುವಯ್ಯ, ಕೆಂಪನಹಳ್ಳಿ, ಚಿಕ್ಕಮಗಳೂರು. ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ಜಾಗಕ್ಕೆ ಬೈ–ಪಾಸ್ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ, ಸರ್ಕಾರದಿಂದ ಅನುಮೋದನೆಯಾಗಿರುವ ಸಿ.ಡಿ.ಪಿ ನಕ್ಷೆಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಕಾಯ್ದಿರಿಸಿದೆ. ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ಪರಿಷ್ಕೃತ –I (ತಾತ್ಕಾಲಿಕ) ನಕ್ಷೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ. ವಾಣಿಜ್ಯದಲ್ಲಿ ವಸತಿಗೆ ಅವಕಾಶ ಇರುತ್ತದೆ. ಸಿ.ಡಿ.ಪಿ. ಯಲ್ಲಿ ಕೈಗಾರಿಕಾ ವಲಯದಲ್ಲಿರುವುದರಿಂದ ಇದನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ವಸತಿಗೆ ತಾಂತ್ರಿಕ ಅಭಿಪ್ರಾಯ ನೀಡಲು (ಭೂ ಪರಿವರ್ತನೆ ಸಂಬಂಧ) ಅವಕಾಶ ಇರುತ್ತದೆ, ಆದ್ದರಿಂದ ಪ್ರಾಧಿಕಾರದ ಘಟನೋತ್ತರ ಅನುಮೋದನೆಗೆ ವಿಷಯ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಪಾಪಣ್ಣ ಮತ್ತು ವೆಂಕಟೇಶ್ ಬಿನ್ ಗುರುವಯ್ಯ, ಕೆಂಪನಹಳ್ಳಿ, ಚಿಕ್ಕಮಗಳೂರು. ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 316 / 3 ರಲ್ಲಿನ 00 ಎಕರೆ 11 ಗುಂಟೆ ಜಾಗದ ಜಂಟಿ ಸ್ಥಳ ಪರಿಶೀಲನೆಯನ್ನು ಮಾಡಲಾಯಿತು, ಸದರಿ ಜಾಗಕ್ಕೆ ಬೈಪಾಸ್ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿರುತ್ತದೆ. ಸರ್ಕಾರದಿಂದ ಅನುಮೋದನೆಯಾಗಿರುವ ಸಿಡಿಪಿ ನಕ್ಷೆಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಕಾಯ್ದಿರಿಸಿದೆ. ಈಗ ಸರ್ಕಾರದಿಂದ ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ಪರಿಷ್ಕೃತ –I (ತಾತ್ಕಾಲಿಕ) ನಕ್ಷೆಯಲ್ಲಿ ವಾಣಿಜ್ಯ ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ, ವಾಣಿಜ್ಯದಲ್ಲಿ ವಸತಿಗೆ ಅವಕಾಶ ಇರುತ್ತದೆ, ಸದರಿ ಅಭಿಪ್ರಾಯವನ್ನು ಅನುಮೋದಿಸಬಹುದು.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ನಗರ ಯೋಜನಾ ಸದಸ್ಯರ ತಾಂತ್ರಿಕ ಅಭಿಪ್ರಾಯ ಅನುಸರಿಸಿ ಸಭೆಯು ಘಟನೋತ್ತರ ಅನುಮೋದನೆ ಸಭೆ ಒಪ್ಪಿಗೆ ನೀಡಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು.

**ವಿಷಯ ನಂ 1.**

ಹಿರೇಮಗಳೂರು ಗ್ರಾಮದ ಸರ್ವೆ ನಂ. 321, 322, 323, 325 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಸುಮಾರು 17 ಎಕರೆ 37½ ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಪರಿಷ್ಕೃತ ರೂಪ ರೇಖಾ ನಕ್ಷೆಯನ್ನು ತಯಾರಿಸಿ ಮಾರ್ಪಡಿಸಿ ಅನುಮೋದನೆ ಪಡೆಯುವ ಕುರಿತು.

**ಟಿಪ್ಪಣಿ:**

ಹಿರೇಮಗಳೂರು ಗ್ರಾಮದ ಸರ್ವೆ ನಂ. 321, 322, 323, 325 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಸುಮಾರು 17 ಎಕರೆ 37½ ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ನಿವೇಶನ ಯೋಜನೆಗೆ ದಿನಾಂಕ: 25-08-2007 ರ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಯೋಜನಾ ನಕ್ಷೆಯನ್ನು ಪರಿಷ್ಕರಿಸಿ ಸದರಿ ಯೋಜನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ದೊರಕಿಸಿಕೊಡುವಂತೆ ನಿರ್ದೇಶಕರು ನಗರ ಯೋಜನಾ ಇಲಾಖೆ ಬೆಂಗಳೂರು ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಅದರಂತೆ ದಿನಾಂಕ: 24-11-2007 ರಲ್ಲಿ ಅಧಿಕಾರಿಗಳು ಸಹಿ ಮಾಡಿರುವ ನೀಲಿ ನಕ್ಷೆಯಂತೆ ಅಂದಾಜು ಪಟ್ಟಿಗಳನ್ನು ತಯಾರಿಸಿ ಅನುಮೋದನೆಗೆ ಮರು ಸಲ್ಲಿಸಲಾಗಿತ್ತು. ಭೂ ಸ್ವಾದೀನ ಪ್ರಕ್ರಿಯೆಗೆ ವ್ಯತಿರಿಕ್ತವಾಗಿ ಭೂ ಮಾಲಿಕರಿಂದ ನ್ಯಾಯಾಲಯದ ತಡೆಯಾಜ್ಞೆಯನ್ನು ತಂದಿರುವುದರಿಂದ ಪರಿಷ್ಕರಿಸಿ ಸಲ್ಲಿಸಲಾಗಿದ್ದ ವಿನ್ಯಾಸ ನಕ್ಷೆಯನ್ನು ಭೂಮಿಯ ಮೇಲೆ ಅಳವಡಿಸುವಾಗ ಆಕೃತಿ ಅಳತೆ ಮತ್ತು ಪ್ರಮಾಣಗಳು ನಕ್ಷೆಯಲ್ಲಿರುವ ನ್ಯೂನ್ಯತೆಗಳಿಂದ ಹೊಂದಾಣಿಕೆಯಾಗುತ್ತಿಲ್ಲ. ಉದ್ದೇಶಿತ ಯೋಜನೆಗೆ ಭೂಸ್ವಾಧೀನ ಮಾಡಿಕೊಂಡಿರುವ ಆಕೃತಿಯು ಈ ಹಿಂದೆ ಮಾಡಲಾಗಿದ್ದ ಹಳೇಯ ಬಡಾವಣೆಯ ನಕ್ಷೆಯನ್ನು ಸದರಿ ನಕ್ಷೆಗೆ ಹೊಂದಾಣಿಕೆ ಮಾಡಲು ಹಳೇಯ ಬಡಾವಣೆ ನಕ್ಷೆಯಿಂದ ಹಂಚಿಕೆಯಾಗದೇ ಉಳಿದಿರುವ ಭಾಗವನ್ನು ಸಹ ಸೇರಿಸಿಕೊಳ್ಳಬೇಕಾಗಿರುತ್ತದೆ.

ಈ ಕಾರಣಗಳಿಂದಾಗಿ ರಸ್ತೆ, ನಿವೇಶನ, ಉದ್ಯಾನವನ, ಹಾಗೂ ನಾಗರೀಕ ಸೌಕರ್ಯದ ನಿವೇಶನಗಳಿಗೆ ಮೀಸಲಿಡಬೇಕಾದ ಶೇಕಡವಾರು ಪ್ರಮಾಣಗಳನ್ನು ಮರು ಹೊಂದಾಣಿಕೆ ಮಾಡಲು ಸದರಿ ಬಡಾವಣೆ ನಕ್ಷೆಯಲ್ಲಿ ಹಲವಾರು ಮಾರ್ಪಾಡುಗಳನ್ನು ಮಾಡಿಕೊಳ್ಳಬೇಕಾಗಿರುತ್ತದೆ, ಈ ಮಾರ್ಪಾಡುಗಳನ್ನು ನಗರ ಯೋಜನಾ ಸದಸ್ಯರ ಸಲಹೆಗಳನ್ನು ಪಡೆದು ಪರಿಷ್ಕೃತ ಬಡಾವಣೆ ನಕ್ಷೆಯನ್ನು ಮಾಡಿಕೊಂಡಲ್ಲಿ ಪ್ರಾಧಿಕಾರಕ್ಕೆ ಹೆಚ್ಚಿನ ವರಮಾನ ಹಾಗೂ ನಿವೇಶನ ಸಂಖ್ಯೆಯಲ್ಲಿ ಹೆಚ್ಚಳವಾಗುವ ಸಂಬವವಿರುತ್ತದೆ, ಆದ್ದರಿಂದ ಪರಿಷ್ಕೃತ ಬಡಾವಣೆ ನಕ್ಷೆಯನ್ನು ಮರುತಯಾರಿ ಮಾಡಿ ಅನುಮೋದನೆ ಪಡೆಯಲು ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ. ಈ ಬಗ್ಗೆ ನಗರ ಯೋಜನಾ ಸದಸ್ಯರ ಅಭಿಪ್ರಾಯ ಪಡೆದು, ಸಭೆಯಲ್ಲಿ ಅನುಮೋದನೆ ನೀಡಬೇಕಾಗಿರುತ್ತದೆ.

**ತೀರ್ಮಾನ :**

ವಿಷಯವನ್ನು ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ನಗರ ಯೋಜನಾ ಸದಸ್ಯರ ಅಭಿಪ್ರಾಯದಂತೆ ಮಾರ್ಪಾಡು ರೂಪರೇಖಾ ನಕ್ಷೆ ತಯಾರಿಸಿ ಅದರ ಆಧಾರದಲ್ಲಿ ಬಡಾವಣೆ ನಿರ್ಮಾಣ ಮಾಡಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ನಿಡಿತು.

**ವಿಷಯ ನಂ 2.**

ಮಹಾಯೋಜನೆ 2021 ರ ಕರಡು ಸರ್ಕಾರದಿಂದ ಅನುಮೋದನೆಯಾಗಿದ್ದು ಆದರೆ ಆಧಾರದಲ್ಲಿ ಯೋಜನೆಗಳ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ:**

2008-09 ನೇ ಸಾಲಿನಲ್ಲಿ ಸರ್ಕಾರದಿಂದ ಮಹಾಯೋಜನೆ ಪರಿಷ್ಕೃತ–1ಕ್ಕೆ ಕರಡು ಪ್ರತಿ ಅನುಮೋದನೆಯಾಗಿದಲ್ಲಿ ಒಂದು ವರ್ಷದಿಂದ ಯಾವುದೇ ಭೂ ಪರಿವರ್ತನೆ ನೀಡದೇ ಇರುವುದರಿಂದ ಭೂ ಅಭಿವೃದ್ಧಿ ಕಾರ್ಯಗಳು ಕುಂಟುತವಾಗಿರುತ್ತದೆ. ಆದ್ದರಿಂದ ಸರ್ಕಾರದಿಂದಲೇ ಅನುಮೋದನೆ ಆಗಿರುವ ಮಹಾಯೋಜನೆಯ ಕರಡು ಪ್ರತಿ ಆದಾರದಲ್ಲಿ ಷರತ್ತು ಬದ್ಧವಾಗಿ ಭೂ ಪರಿವರ್ತನೆ ಅಭಿಪ್ರಾಯಗಳನ್ನು ನೀಡಲು ಮಾನ್ಯ ಅಧ್ಯಕ್ಷರು ವಿಷಯ ಮಂಡಿಸಲು ಸೂಚಿಸಿರುತ್ತಾರೆ. ಆದರಂತೆ ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಅಭಿಪ್ರಾಯ:–**

ಮಹಾಯೋಜನೆ ಅಂತಿಮ ಅನುಮೋದನೆ ಸರ್ಕಾರದಿಂದ ಪದೆದ ನಂತರ ಭೂ ಪರಿವರ್ತನೆಗೆ ಅಭಿಪ್ರಾಯ ನೀಡುವುದಾಗಿ ತಾಂತ್ರಿಕವಾಗಿ ಅಭಿಪ್ರಾಯ ಪಡಲಾಗಿದೆ. ಈ ಬಗ್ಗೆ ನಗರ ಯೋಜನಾ ನಿರ್ದೇಶಕರಿಂದ ಸೂಕ್ತ ನಿರ್ದೇಶನ ಪಡೆದು ನಂತರ ಮುಂದಿನ ಕ್ರಮವಹಿಸಬಹುದಾಗಿದೆ. ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯವನ್ನು ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಮಹಾಯೋಜನೆ ತಯಾರಿಕೆ ನಿಯಮಗಳ ಅನ್ವಯ ಕರಡು ಅನುಮೋದನೆ ಆದಾರದಲ್ಲಿ ಯೋಜನೆಗಳ ಮಂಜೂರಾತಿ ಮಾಡಲು ಬರುವುದಿಲ್ಲವೆಂದು ನಗರ ಯೋಜನಾ ಸದಸ್ಯರು ಅಭಿಪ್ರಾಯ ಪಟ್ಟರು. ಇಂತಹ ಪ್ರಸ್ತಾವನೆ ಬಗ್ಗೆ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಅಭಿಪ್ರಾಯ ಮತ್ತು ಅನುಮತಿ ಪಡೆದು ಅದರಂತೆ ಕ್ರಮಕೈಗೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ದಿನಾಂಕ: 20-11-2009 ಮತ್ತು 19-12-2009 ರಂದು ನಿವೇಶನ ಹಂಚಿಕೆ ಉಪಸಮಿತಿ ಸಭೆಯು ಚರ್ಚಿಸಿ ಅನುಮೋದನೆ ನೀಡಿರುವ ಆಯ್ಕೆ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

ಉಪ ಸಮಿತಿಯು ಮೇಲಿನ ಎರಡು ದಿನಾಂಕಗಳಲ್ಲಿ ಸಭೆ ಸೇರಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ದಪಡಿಸಿರುತ್ತದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿವೇಶನ ಹಂಚಿಕೆಗಳ ಕಾಯ್ದೆ 1991 ಮತ್ತು ನಂತರದ ತಿದ್ದುಪಡಿಗಳ ಅನ್ವಯ ಎಲ್ಲಾ ನಿಯಮಗಳನ್ನು ಪಾಲಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಪ್ರಾಧಿಕಾರದ ಅನುಮೋದನೆ ಪಡೆಯಲು ವಿಷಯ ಮಂಡಿಸಿದೆ.

**ತೀರ್ಮಾನ :**

ವಿಷಯವನ್ನು ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಲ್ಲಿ ನಿವೇಶನ ಹಂಚಿಕೆಗಾಗಿ ರಚಿಸಲಾಗಿರುವ ಉಪ ಸಮಿತಿಯ ದಿನಾಂಕ: 20-11-2009 ಮತ್ತು 19-12-2009 ರಂದು ಸಭೆ ಸೇರಿ ಚರ್ಚಿಸಿ ಕೈಗೊಂಡ ನಿರ್ಣಯಗಳ ಅನುಸಾರ ನಿವೇಶನ ಹಂಚಿಕೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ದಪಡಿಸಿದ್ದು ಸದರಿ ಪಟ್ಟಿಯನ್ನು ಸಭೆಯು ಪರಿಶೀಲಿಸಿ, ಪ್ರಾಧಿಕಾರಗಳ ನಿವೇಶನ ಹಂಚಿಕೆಗಳ ಕಾಯ್ದೆ 1991 ಮತ್ತು ನಂತರದ ತಿದ್ದುಪಡಿಗಳ ಅನ್ವಯ ಎಲ್ಲಾ ನಿಯಮಗಳನ್ನು ಪಾಲಿಸಿ ತಯಾರಿಸಿರುವ ಆಯ್ಕೆ ಪಟ್ಟಿಬಿಡುಗಡೆಗೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ವಿಷಯ ನಂ 4.**

ಶ್ರೀ ಜೆರಾಲ್ಡ್ ಲೋಬೋ ಬಿನ್ ಪ್ಯಾಟ್ರಿಕ್ ಲೋಬೋ ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 1 ರಲ್ಲಿನ 00 ಎಕರೆ 37 ಗುಂಟೆ ಜಮೀನನ್ನು ಹಾಗೂ ಶ್ರೀಮತಿ ಮರಿಯ ಪ್ರಮೀಳಾ ಡಿಸೋಜ ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 2 ರಲ್ಲಿ 02 ಎ–32 ಗುಂಟೆ ಮತ್ತು ಸರ್ವೆ ನಂ. 288 ರಲ್ಲಿ 01 ಎ–08 ಗುಂಟೆ ಒಟ್ಟು 04 ಎ–37 ಗುಂಟೆ ಜಮೀನನ್ನು ಶಾಲಾ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ನೀಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ಜೆರಾಲ್ಡ್ ಲೋಬೋ ಬಿನ್ ಪ್ಯಾಟ್ರಿಕ್ ಲೋಬೋ ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 1 ರಲ್ಲಿನ 00 ಎಕರೆ 37 ಗುಂಟೆ ಜಮೀನನ್ನು ಹಾಗೂ ಶ್ರೀಮತಿ ಮರಿಯ ಪ್ರಮೀಳಾ ಡಿಸೋಜ ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 2 ರಲ್ಲಿ 02 ಎ–32 ಗುಂಟೆ ಮತ್ತು ಸರ್ವೆ ನಂ. 288 ರಲ್ಲಿ 01 ಎ–08 ಗುಂಟೆ ಒಟ್ಟು 04 ಎ–37 ಗುಂಟೆ ಜಮೀನನ್ನು ಶಾಲಾ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಪ್ರಸ್ತಾವನೆ ಕಳುಹಿಸಿರುತ್ತಾರೆ, ಸದರಿ ಜಾಗವು ಸಿ. ಡಿ. ಪಿ. ನಕ್ಷೆಯಲ್ಲಿ ಮತ್ತು ಮಹಾಯೋಜನೆ ಪರಿಷ್ಕೃತ–1 (ತಾತ್ಕಾಲಿಕ) ಎರಡರಲ್ಲೂ ಕೃಷಿ ವಲಯದಲ್ಲಿರುತ್ತದೆ.

ಕೃಷಿ ವಲಯದಲ್ಲಿ ಶಾಲಾ ಉದ್ದೇಶಕ್ಕೆ ಭೂ ಪರಿವರ್ತನೆಗೆ ಅಭಿಪ್ರಾಯ ನೀಡುವ ಸಂಬಂಧ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅಭಿಪ್ರಾಯ ನೀಡಲು ಅವಕಾಶ ಇರುತ್ತದೆ, ಆದ್ದರಿಂದ ಪ್ರಾಧಿಕಾರದ ಘಟನೋತ್ತರ ಅನುಮೋದನೆಗಾಗಿ ವಿಷಯ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಜೆರಾಲ್ಡ್ ಲೋಬೋ ಬಿನ್ ಪ್ಯಾಟ್ರಿಕ್ ಲೋಬೋ ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 1 ರಲ್ಲಿನ 00 ಎಕರೆ 37 ಗುಂಟೆ ಜಮೀನನ್ನು ಹಾಗೂ ಶ್ರೀಮತಿ ಮರಿಯ ಪ್ರಮೀಳಾ ಡಿಸೋಜ ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 296 / 2 ರಲ್ಲಿ 02 ಎ–32 ಗುಂಟೆ ಮತ್ತು ಸರ್ವೆ ನಂ. 288 ರಲ್ಲಿ 01 ಎ–08 ಗುಂಟೆ ಒಟ್ಟು 04 ಎ–37 ಗುಂಟೆ ಜಮೀನನ್ನು ಶಾಲಾ ಉದ್ದೇಶಕ್ಕೆ ಭೂ ಪರಿವರ್ತಿಸಲು ಅಭಿಪ್ರಾಯ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಪ್ರಸ್ತಾವನೆ ಕಳುಹಿಸಿರುತ್ತಾರೆ, ಸದರಿ ಜಾಗವು ಸಿ. ಡಿ. ಪಿ. ನಕ್ಷೆಯಲ್ಲಿ ಮತ್ತು ಮಹಾಯೋಜನೆ ಪರಿಷ್ಕೃತ–1 (ತಾತ್ಕಾಲಿಕ) ಎರಡರಲ್ಲೂ ಕೃಷಿ ವಲಯದಲ್ಲಿರುತ್ತದೆ, ಕೃಷಿ ವಲಯದಲ್ಲಿ ಶಾಲಾ ಉದ್ದೇಶಕ್ಕೆ ಭೂ ಪರಿವರ್ತನೆಗೆ ಅಭಿಪ್ರಾಯ ನೀಡುವ ಸಂಬಂಧ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅಭಿಪ್ರಾಯ ನೀಡಲು ಅವಕಾಶ ಇರುತ್ತದೆ, ಸದರಿ ಅಭಿಪ್ರಾಯವನ್ನು ಅನುಮೋದಿಸಬಹುದು.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ನಗರ ಯೋಜನಾ ಸದಸ್ಯರ ತಾಂತ್ರಿಕ ಅಭಿಪ್ರಾಯ ಅನುಸರಿಸಿ ಸಭೆಯು ಘಟನೋತ್ತರ ಅನುಮೋದನೆಗೆ ಸಭೆ ಒಪ್ಪಿಗೆ ನೀಡಿತು.

**ವಿಷಯ ನಂ 5.**

2010 ನೇ ಸಾಲಿಗೆ ಸಂಬಂಧಿಸಿದ 100 (ದಿನಚರಿ) ಡೈರಿಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಬಗ್ಗೆ ಸಭೆಯ ಅನುಮೋದನೆ ಕೋರಿ.

**ಟಿಪ್ಪಣಿ :**

ಮಾನ್ಯ ಅಧ್ಯಕ್ಷರ ಸೂಚನೆ ಮೇರೆಗೆ ಪ್ರಾಧಿಕಾರದ ವತಿಯಿಂದ 100 ದಿನಚರಿ (ಡೈರಿ) ಗಳನ್ನು ಮುದ್ರಿಸಲು ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ ಮಾನ್ಯ ಅಧ್ಯಕ್ಷರು ನಗರಾಬಿವೃದ್ಧಿ ಪ್ರಾಧಿಕಾರ ಇವರ ಸೂಚನೆಯಂತೆ 100 ಡೈರಿ (ದಿನಚರಿ) ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳಲು ಅದರ ವೆಚ್ಚವನ್ನು ನಿಯಮಾನುಸಾರ ವೆಚ್ಚಭರಿಸುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 06-03-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಮಾನ್ಯ ಶ್ರೀಮತಿ. ಗಾಯತ್ರಿ ಶಾಂತೇಗೌಡರು,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 3 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀ ಮಧು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ನಗರ ಯೋಜನಾ ಸದಸ್ಯರು) | ಸದಸ್ಯರು |
| 8 | ಕಾರ್ಯಪಾಲಕ ಅಭಿಯಂತರರು,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 9 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 10 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ.<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 12 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 13 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.**

| | | |
|---|---|---|
| 1 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 3 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 4 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 5 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಪರಿಸರ ಮಾಲಿನ್ಯ ಅಧಿಕಾರಿಗಳು,<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ<br>ಚಿಕ್ಕಮಗಳೂರು | ಸದಸ್ಯರು |

**ವಿಷಯ ನಂ 1.**

ದಿನಾಂಕ: 02-01-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 02-01-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗಳಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ:**

ದಿನಾಂಕ: 02-01-2010 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸಭೆಯಲ್ಲಿ ಮತ್ತೊಮ್ಮೆ ಚರ್ಚಿಸಿ ಸ್ಥಿರೀಕರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

2009 ನೇ ಸಾಲಿನ ಡಿಸೆಂಬರ್ ಮತ್ತು 2010 ನೇ ಸಾಲಿನ ಜನವರಿ ಮಾಹೆಗಳ ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

2009 ನೇ ಸಾಲಿನ ಡಿಸೆಂಬರ್ ಮತ್ತು 2010 ನೇ ಸಾಲಿನ ಜನವರಿ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ–1 ಮತ್ತು ಅನುಬಂಧ–2 ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ:**

2009 ನೇ ಸಾಲಿನ ಡಿಸೆಂಬರ್ ಮತ್ತು 2010 ನೇ ಸಾಲಿನ ಜನವರಿ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಸಭೆಯಲ್ಲಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 3.**

2010 - 11 ನೇ ಸಾಲಿನ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯ ಆಯವ್ಯಯ ಅಂದಾಜು ಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

2010 - 11 ನೇ ಸಾಲಿನ ನಗರಾಭಿವೃದ್ಧಿ ಪ್ರಾಧಿಕಾರದ ಆಯವ್ಯಯ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 43 ರ ಅನ್ವಯ ತಯಾರಿಸಲಾಗಿದೆ.

| | |
|---|---|
| ಆರಂಭದ ಶಿಲ್ಕು | **13,36,092.00.** |
| 2010-11 ನೇ ಸಾಲಿನ ಅಂದಾಜು ಆದಾಯ | 654,82,250.00. |
| ಒಟ್ಟು | **668,18,342.00.** |
| 2010-11 ನೇ ಸಾಲಿನ ಅಂದಾಜು ಖರ್ಚು | 624,19,000.00. |
| ಉಳಿತಾಯ (ಅಂತ್ಯದ ಶಿಲ್ಕು) | **43,99,342.00.** |

ಆಯವ್ಯಯ ಅಂದಾಜು ಪಟ್ಟಿಯನ್ನು ಸಂಕ್ಷಿಪ್ತ ವಿವರಗಳನ್ನು ತಯಾರಿಸಲಾಗಿದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 44 ರ ಅನ್ವಯ ಪ್ರಾಧಿಕಾರದ ಅನಮೋದನೆ ಪಡೆದುಕೊಂಡು ಸರ್ಕಾರದ ಸುತ್ತೋಲೆ ಸಂಖ್ಯೆ.ನಇ : 124 : ಬೆಂರುಪ್ರಾ : 2004, ದಿನಾಂಕ:13-12-2004 ರ ಅನ್ವಯ ಜಿಲ್ಲಾಧಿಕಾರಿಗಳವರ ಅನುಮೋದನೆ ಪಡೆಯಬೇಕಾಗಿರುತ್ತದೆ. 2010 - 11 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 44 ರ ಅನ್ವಯ ಆಯುಕ್ತರು ಮಂಡಿಸಿದ ಸಂಕ್ಷಿಪ್ತ ವಿವರಗಳ 2010 - 11 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು.

| | |
|---|---|
| ಆರಂಭದ ಶಿಲ್ಕು | **13,36,092.00.** |
| 2010-11 ನೇ ಸಾಲಿನ ಅಂದಾಜು ಆದಾಯ | 654,82,250.00. |
| ಒಟ್ಟು | **668,18,342.00.** |
| 2010-11 ನೇ ಸಾಲಿನ ಅಂದಾಜು ಖರ್ಚು | 624,19,000.00. |
| ಉಳಿತಾಯ (ಅಂತ್ಯದ ಶಿಲ್ಕು) | **43,99,342.00.** |

ಒಟ್ಟು ರೂ. 43,99,342.00 (ನಲವತ್ತಮೂರು ಲಕ್ಷದ ತೊಂಬತ್ತೊಂಬತ್ತು ಸಾವಿರದ ಮೂರುನೂರ ನಲವತ್ತೆರಡು) ಮೊತ್ತದ ಉಳಿತಾಯ ಆಯವ್ಯಯಕ್ಕೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 44 ರ ಅನ್ವಯ ಪ್ರಾಧಿಕಾರ ಅನುಮೋದಿಸಬಹುದೆಂದು ಇದಕ್ಕೆ ಜಿಲ್ಲಾಧಿಕಾರಿಗಳವರಿಂದ ಅನುಮೋದನೆ ಪಡೆಯಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 67 ರಲ್ಲಿನ 04 ಎಕರೆ 02 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 67 ರಲ್ಲಿನ 04 ಎಕರೆ 02 ಗುಂಟೆ ಜಮೀನು ಉಪ್ಪಳ್ಳಿ ಇಂದ ಹಿರೇಕೊಳಲೆಗೆ ಹೋಗುವ ಮಾರ್ಗದ ಎಡಭಾಗದಲ್ಲಿ ಯೋಜಿಸಲಾಗಿದೆ, ಈ ವ್ಯಾಪ್ತಿಯ ಎಲ್ಲಾ ಸರ್ವೆ ನಂಬರುಗಳ 200 ಎಕರೆ ಭೂಮಿಯು ಜಿಲ್ಲಾ ಮುಖ್ಯ ರಸ್ತೆಯ ಎಡ ಭಾಗದಲ್ಲಿ ಇರುತ್ತದೆ, ಸರ್ವೆ ನಂ. 67 ರ ಜಮೀನು ಮಾತ್ರ ರಸ್ತೆಯ ಬಲ ಭಾಗಕ್ಕೆ ಇದ್ದು ಯೋಜನಾ ದೃಷ್ಟಿಯಿಂದ ಸಮಂಜಸವಲ್ಲ, ರಸ್ತೆಯ ಬಲಭಾಗಕ್ಕೆ ಇರುವ ಜೊತೆಗೆ ಆ ಭಾಗದ ಒಟ್ಟು 200 ಎಕರೆ ಭೂಮಿಯನ್ನು ಮತ್ತು ಸರ್ವೆ ನಂ. 22, 23, 66, 67, 68, 69, 70, 89, 90 ಮತ್ತು 319 ರಲ್ಲಿನ ಸುಮಾರು 25 ಎಕರೆ ಜಮೀನು ಸೇರಿಸಿದಲ್ಲಿ ಇದನ್ನು ಪರಿಗಣಿಸಬಹುದಾಗಿರುತ್ತದೆ, ಸದರಿ ಸರ್ವೆ ನಂ. 67 ರ ಭೂಮಿಯಲ್ಲಿ ಅನೇಕ ವರ್ಷಗಳಿಂದ ಸಾಮಿಲ್ ನಡೆಸುತ್ತಿರುವ ಬಗ್ಗೆ ಸರ್ಕಾರದಿಂದ ನೀಡಿರುವ ಪರವಾನಗಿ ಮತ್ತಿತರೆ ದಾಖಲಾತಿಗಳೊಂದಿಗೆ ಮಾಲೀಕರು ಸರ್ಕಾರಕ್ಕೆ ದೂರು ನೀಡಿದ್ದು, ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಆಯುಕ್ತರು ಮೇಲ್ಕಂಡ ಟಿಪ್ಪಣಿ ಬಗ್ಗೆ ವಿವರಿಸಿದರು, ಈ ಭೂಮಿಯ ಗರಿಷ್ಠ ಭಾಗ ವಾಣಿಜ್ಯ ಉಪಯೋಗದಲ್ಲಿದೆ ಎಂದು ತಿಳಿಸಿದರು, ಮತ್ತು ಈಗಾಗಲೇ ಯೋಜಿಸಿರುವ ಬಡಾವಣೆಯು ರಸ್ತೆಯ ಎಡಭಾಗದ 200 ಎಕರೆ ಭೂಮಿಗೆ ಹೊಂದಿಕೊಂಡಿಲ್ಲ ಮತ್ತು ಯೋಜನೆಗೆ ಸೇರಿಸುವುದು ಸೂಕ್ತವಲ್ಲ ಎಂದು ತಿಳಿಸಿದರು, ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 67 ರಲ್ಲಿನ 04 ಎಕರೆ 02 ಗುಂಟೆ ಭೂಮಿಯನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳಲು ಹಾಗೂ 200 ಎಕರೆ ಜೊತೆಗೆ ಬಡಾವಣೆ ರಚನೆಗೆ ಸೇರಿಸಲು ಬಹುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 5.**

ಪ್ರಾಧಿಕಾರದ ವ್ಯಾಪ್ತಿಯಲ್ಲಿನ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ :**

1. ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು ರವರು ಪರಿಶಿಷ್ಟ ವರ್ಗದ ಸಮುದಾಯಭವನಗಳಿಗೆ ಸಾಂಸ್ಕೃತಿಕ ಮಂದಿರ ನಿರ್ಮಿಸಲು 40 x 60 ಅಳತೆಯ ನಿವೇಶನವನ್ನು ಜಿಲ್ಲಾ ಕೇಂದ್ರದಲ್ಲಿ ಸಾಂಸ್ಕೃತಿಕ ಮಂದಿರ ನಿರ್ಮಾಣ ಮಾಡಲು ನಗರದ ಹೃದಯಭಾಗದಲ್ಲಿ ನಿವೇಶನ ಮಂಜೂರು ಮಾಡಲು ದಿನಾಂಕ: 28-01-2010 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಆದುದರಿಂದ ಸದರಿ ಅರ್ಜಿಯನ್ನು ಪರಿಗಣಿಸಿ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಮಾಡುವ ಬಗ್ಗೆ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

2. ದಿನಾಂಕ: 20-12-2009 ರಂದು ಸರ್ಕಾರಿ ಕಛೇರಿಗಳಿಗಳು ಹಾಗೂ ವಿವಿಧ ಸಂಘ ಸಂಸ್ಥೆಯವರಿಂದ ಅರ್ಜಿ ಸಲ್ಲಿಸಲು ನೀಡಲಾಗಿ ಪತ್ರಿಕಾ ಪ್ರಕಟಣೆಯಲ್ಲಿ ದಿನಾಂಕ: 13-01-2010 ರೊಳಗೆ ಸೂಕ್ತ ಮಾಹಿತಿಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಸೂಚನೆ ನೀಡಲಾಗಿದ್ದು, ಆದರಂತೆ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆಗಾಗಿ ಎರಡು ಸಂಘ ಸಂಸ್ಥೆಗಳಿಂದ ಒಂದೇ ನಿವೇಶನಕ್ಕಾಗಿ ಅರ್ಜಿ ಬಂದಿರುತ್ತದೆ.

ದಿನಾಂಕ: 20-12-2009 ರಂದು ಪ್ರಾಧಿಕಾರದ ಕಛೇರಿಯ ವ್ಯಾಪ್ತಿಯಲ್ಲಿನ ಒಟ್ಟು 10 ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಲು ಪ್ರಕಟಣೆ ನೀಡಲಾಗಿದ್ದು, ಅದರಂತೆ ಹಿರೇಮಗಳೂರು ಸರ್ವೆ ನಂ. 506 / 2B, 507 / 1 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಒಟ್ಟು 565.64 ಚದರ ಮೀಟರ್ ಅಳತೆಯ ನಿವೇಶನ ಹಂಚಿಕೆಗಾಗಿ ಶ್ರೀ ನಾರಾಯಣಗುರು ಸಮಿತಿ (ರಿ) ಚಿಕ್ಕಮಗಳೂರು ಹಾಗೂ ಜಿಲ್ಲಾ ಒಕ್ಕಲಿಗರ ಮಹಿಳಾ ಸಂಘ (ರಿ) ಚಿಕ್ಕಮಗಳೂರು ಎರಡೂ ಸಂಸ್ಥೆಯವರು ನಿವೇಶನ ಹಂಚಿಕೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ, ಶ್ರೀ ನಾರಾಯಣ ಗುರು ಸಮಿತಿಯವರು ಈಡಿಗ ಮತ್ತು ಅವರ ಉಪ ಪಂಗಡಗಳ ಬಡ ವಿದ್ಯಾರ್ಥಿಗಳಿಗೆ ಶಾಲೆ ತೆರೆಯಲು ಮತ್ತು ಸಮುದಾಯದ ಕುಲಬಾಂದವರ ಸಂಘಟನೆಗೆ ಸಭಾ ಭವನ ನಿರ್ಮಾಣ ಮಾಡುವ ಉದ್ದೇಶ ಹೊಂದಿರುವುದಾಗಿ ಅರ್ಜಿಯಲ್ಲಿ ವಿವರ ನೀಡಿರುತ್ತಾರೆ.

ಜಿಲ್ಲಾ ಒಕ್ಕಲಿಗರ ಮಹಿಳಾ ಸಮಿತಿಯವರು ಅನಾಥಾಶ್ರಮ, ವೃದ್ಧಾಶ್ರಮ, ಕರಕುಶಲ ತರಬೇತಿ ಕೇಂದ್ರ, ಹೆಣ್ಣುಮಕ್ಕಳ ಶಾಲೆ ಇತ್ಯಾದಿಗಳಿಗೆ ಕಟ್ಟಡ ನಿರ್ಮಾಣ ಮಾಡುವುದಾಗಿ ತಿಳಿಸಿರುತ್ತಾರೆ. ಶಾಲಾ ಉದ್ದೇಶಕ್ಕೆ ಪರಿಗಣಿಸಬಹುದು, ಆದರೆ ಈ ರೀತಿಯ ಚಟುವಟಿಕೆಗಳು ಪ್ರಸ್ತುತ ಇವರು ನಿರ್ವಹಿಸುತ್ತಿಲ್ಲ ಮತ್ತು ಈ ಸಂಬಂಧ ಸರ್ಕಾರದಿಂದ ಯಾವುದೇ ಅನುಮತಿ ಸಹ ಇರುವುದಿಲ್ಲ, ಬಡಾವಣೆಗೆ ನಾಗರೀಕ ಸೌಲಭ್ಯ ಕಲ್ಪಿಸುವ ಇತರೆ ಉದ್ದೇಶಗಳಿಗೆ ಇವರು ಅರ್ಜಿ ಸಲ್ಲಿಸಿಲ್ಲ ಆದ್ದರಿಂದ ನಾಗರೀಕ ಸೌಕರ್ಯ ಕಲ್ಪಿಸಲು ಅರ್ಹರಿರುವ ಸಂಸ್ಥೆಗೆ ನೀಡುವುದು ಸೂಕ್ತವಾಗಿರುತ್ತದೆ, ವಿಷಯವನ್ನು ಸಭೆ ಮುಂದೆ ಮಂಡಿಸಿದೆ.

3. ರೀಜನಲ್ ಪಿ. ಎಫ್. ಕಮೀಶನರ್– III, ಎಂಪ್ಲಾಯಿಸ್ ಪ್ರಾವಿಡೆಂಟ್ ಫಂಡ್, ಆರ್ಗನೈಜೇಷನ್, ಯಶೋರಾಮ್ ಛೇಂಬರ್ಸ್, ಆರ್. ಜಿ. ರಸ್ತೆ, ಚಿಕ್ಕಮಗಳೂರು, ಇವರು ಬಸವನಹಳ್ಳಿ ಗ್ರಾಮದ ಸರ್ವೆ ನಂ. 108, 109, 110, 111 ಮತ್ತು 112 ರಲ್ಲಿನ ನಾಗರೀಕ ಸೌಲಭ್ಯದ ನಿವೇಶನವು ಒಟ್ಟು 981.34 ಚದರ ಮೀಟರ್ ಅಳತೆಯ ನಿವೇಶನದಲ್ಲಿ ಎರಡು ಭಾಗಗಳಾಗಿ ವಿಂಗಡಿಸಿ ಅದರಲ್ಲಿ 615.86 ಚದರ ಮೀಟರ್ ಅಳತೆಯ ನಿವೇಶನವನ್ನು ಪಿ. ಎಫ್. ಕಛೇರಿಗೆ ನೀಡಲಾಗಿತ್ತು, ಉಳಿದ 365.48 ಚದರ ಮೀಟರ್ ಅಳತೆಯ ನಾಗರೀಕ ಸೌಲಭ್ಯದ ನಿವೇಶನವನ್ನು ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಚಿಕ್ಕಮಗಳೂರು ಇವರಿಗೆ ಹಂಚಿಕೆ ಮಾಡಲು ಮೀಸಲಿಡಲಾಗಿತ್ತು.

ರೀಜನಲ್ ಪಿ. ಎಫ್. ಕಮೀಶನರ್– III, ಎಂಪ್ಲಾಯಿಸ್ ಪ್ರಾವಿಡೆಂಟ್ ಫಂಡ್, ಆರ್ಗನೈಜೇಷನ್, ಯಶೋರಾಮ್ ಛೇಂಬರ್ಸ್, ಆರ್. ಜಿ. ರಸ್ತೆ, ಚಿಕ್ಕಮಗಳೂರು, ಇವರ ಸಂಸ್ಥೆಯು ಕೇಂದ್ರ ಸರ್ಕಾರದ ಸಂಸ್ಥೆಯಾಗಿರುವುದರಿಂದ ಸದರಿಯವರಿಗೆ ನೀಡುತ್ತಿರುವ ನಿವೇಶನದ ವಿಸ್ತೀರ್ಣವು ಕಡಿಮೆಯಾಗುವುದೆಂದು ತಿಳಿಸಿರುತ್ತಾರೆ, ಈಗಾಗಲೇ ನೀಡಿರುವ ನಿವೇಶನದ ಜೊತೆಗೆ 365.48 ಚದರ ಮೀಟರ್ ಅಳತೆಯ ನಿವೇಶನವನ್ನು ಸೇರಿಸಿ ಒಟ್ಟು 981.34 ಚದರ ಮೀಟರ್ ಅಳತೆಯ ಪೂರ್ಣ ನಿವೇಶನವನ್ನು ನಮ್ಮ ಸಂಸ್ಥೆಗೆ ನೀಡಬೇಕೆಂದು ಮನವಿ ಸಲ್ಲಿಸಿರುತ್ತಾರೆ, ಹಾಗೆಯೆ ಮಾನ್ಯ ಶಾಸಕರು ಸಹ ಸದರಿ ಸಂಸ್ಥೆಗೆ ಪೂರ್ಣ ನಿವೇಶನವನ್ನು ಹಂಚಿಕೆ ಮಾಡುವಂತೆ ಶಿಫಾರಸ್ಸು ಮಾಡಿರುತ್ತಾರೆ, ಆದ್ದರಿಂದ ಸದರಿ ಸಂಸ್ಥೆಗೆ ಪೂರ್ಣ ನಿವೇಶನವನ್ನು ಹಂಚಿಕೆ ಮಾಡುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, 1. ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಕಛೇರಿಗೆ ಕಟ್ಟಡ ನಿರ್ಮಾಣಕ್ಕಾಗಿ ಜಯನಗರದ ಮುನೀರ್ ಅಹಮದ್ ಲೇಔಟ್‌ನಲ್ಲಿ ಲಭ್ಯವಿರುವ 1303.57 ಚದರ ಮೀಟರ್ ಅಳತೆಯ ನಿವೇಶನವನ್ನು ಎರಡು ಭಾಗ ಮಾಡಿ 12.0 x (39.92 + 35.00) / 2 = 449.52 ಚದರ ಮೀಟರ್ ಅಳತೆಯ ಒಂದು ಭಾಗವನ್ನು ಹಂಚಿಕೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2. ಶ್ರೀ ನಾರಾಯಣಗುರು ಸಮಿತಿ ಚಿಕ್ಕಮಗಳೂರು ಇವರು ಈಡಿಗ ಸಮುದಾಯದ ವಿದ್ಯಾರ್ಥಿಗಳಿಗೆ ಶಾಲೆ ತೆರೆಯಲು ಹಾಗೂ ಸಮುದಾಯದ ಕುಲಬಾಂದವರ ಸಂಘಟನೆಗೆ ಸಭಾ ಭವನ ನಿರ್ಮಾಣ ಮಾಡುವ ಉದ್ದೇಶಕ್ಕೆ ನಿವೇಶನ ಕೇಳಿದ್ದು ಇದು ಸಮಗ್ರ ಸಾರ್ವಜನಿಕರ ಸೌಕರ್ಯದ ವ್ಯಾಪ್ತಿಗೆ ಬರುವುದಿಲ್ಲ ಎಂದು ಅಭಿಪ್ರಾಯ ಪಡಲಾಯಿತು ಸದರೀ ಸಂಸ್ಥೆಗೆ ಪತ್ರ ಬರೆದು ಸಾರ್ವಜನಿಕ ಸೌಕರ್ಯ ನಿವೇಶನಗಳ ಹಂಚಿಕೆಗೆ ಇರಬೇಕಾದ ಅರ್ಹತೆ ಮತ್ತು ವಿವರಗಳನ್ನು ತಿಳಿಸಿ ಅದರಂತೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ ಮುಂದಿನ ಸಭೆಗೆ ವಿಷಯ ಮಂಡಿಸಲು ತೀರ್ಮಾನಿಸಲಾಯಿತು.

ಒಕ್ಕಲಿಗರ ಮಹಿಳಾ ಸಂಘ ಚಿಕ್ಕಮಗಳೂರು ಇವರು ಅರ್ಜಿಗೆ ನಿಗದಿಪಡಿಸಿದ್ದ ದಿನಾಂಕ ಮೀರಿದ ನಂತರ ನಿವೇಶನ ಶುಲ್ಕ ಪಾವತಿಸಿರುವುದರಿಂದ ಈ ಅರ್ಜಿಯನ್ನು ಸಹ ಸೂಕ್ತ ವಿವರಗಳನ್ನು ತರಿಸಿಕೊಂಡು ಮುಂದಿನ ಸಭೆಗೆ ಮಂಡಿಸಲು ಸಭೆ ತೀರ್ಮಾನಿಸಿತು.

3. ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ರೀಜನಲ್ ಪಿ. ಎಫ್. ಕಮೀಶನರ್– III, ಎಂಪ್ಲಾಯಿಸ್ ಪ್ರಾವಿಡೆಂಟ್ ಫಂಡ್, ಆರ್ಗನೈಜೇಷನ್, ಯಶೋರಾಮ್ ಛೇಂಬರ್ಸ್, ಆರ್. ಜಿ. ರಸ್ತೆ, ಚಿಕ್ಕಮಗಳೂರು, ಇವರು ಬಸವನಹಳ್ಳಿ ಗ್ರಾಮದ ಸರ್ವೆ ನಂ. 108, 109, 110, 111 ಮತ್ತು 112 ರಲ್ಲಿನ ನಾಗರೀಕ ಸೌಲಭ್ಯದ ನಿವೇಶನವು ಒಟ್ಟು 981.34 ಚದರ ಮೀಟರ್ ಅಳತೆಯಲ್ಲಿ ವಿಂಗಡಿಸಿದ್ದ 2 (ಎರಡು) ಭಾಗವನ್ನು ಒಂದೇ ನಿವೇಶನವನ್ನಾಗಿ ಮಾಡಿ ರೀಜನಲ್ ಪಿ. ಎಫ್. ಕಮೀಶನರ್– III, ಎಂಪ್ಲಾಯಿಸ್ ಪ್ರಾವಿಡೆಂಟ್ ಫಂಡ್, ಆರ್ಗನೈಜೇಷನ್ ಇವರಿಗೆ ಕಛೇರಿ ಕಟ್ಟಡಕ್ಕೆ ಹಂಚಿಕೆ ಮಾಡಲು ಸಭೆಯು ನಿರ್ದರಿಸಿತು, ಇಲ್ಲಿ ಪ್ರತಿ ಚದರ ಅಡಿಗೆ ಮಾರುಕಟ್ಟೆ ಬೆಲೆ ಸುಮಾರು ರೂ. 500.00 (ಚದರ ಮೀಟರಿಗೆ ರೂ. 5382.00) ಇದ್ದು ರೂ. 250.00 (ಚದರ ಮೀಟರಿಗೆ ರೂ. 2691.00) ರ ದರದಂತೆ ಹಂಚಿಕೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ಈ ನಿವೇಶನದ ಒಂದು ಭಾಗವನ್ನು ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರಿಗೆ ಹಂಚಿಕೆ ಮಾಡಲು ಆಗಿದ್ದ ತೀರ್ಮಾನವನ್ನು ರದ್ದುಪಡಿಸಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 506 / 2B, 507 / 1, ಸರ್ವೆ ನಂಬರುಗಳಲ್ಲಿನ 565.64 ಚದರ ಮೀಟರ್ ಅಳತೆ ನಿವೇಶನವನ್ನು ಹಂಚಿಕೆ ಮಾಡಲು ಸಭೆಯು ಬಹುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 6.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಹೊಸದಾಗಿ ನಿರ್ಮಿಸುತ್ತಿರುವ ಎರಡನೇ ಹಂತದ ಕಾಮಗಾರಿಗಳಿಗೆ ಪ್ರಾಧಿಕಾರದ ಬೇರೆ ಬೇರೆ ಖಾತೆಗಳಿಂದ ಅನುದಾನ ವರ್ಗಾಯಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಹೊಸದಾಗಿ ನಿರ್ಮಿಸುತ್ತಿರುವ ಎರಡನೇ ಹಂತದ ಕಾಮಗಾರಿಗಳು ಒಟ್ಟು 17 ಎಕರೆ 37½ ಗುಂಟೆ ಭೂಮಿಯ ಪೈಕಿ 04 ಎಕರೆ 35 ಗುಂಟೆ ಜಮೀನಿಗೆ ನ್ಯಾಯಾಲಯದ ತಡೆಯಾಜ್ಞೆ ನೀಡಿದೆ, ಆದ್ದರಿಂದ ನಿವೇಶನ ಹಂಚಿಕೆ ತಾತ್ಕಾಲಿಕ ಪಟ್ಟಿ ಪ್ರಕಟಣೆ ಮತ್ತು ಹಂಚಿಕೆ ಅಂತಿಮ ಆದೇಶ ಈಗ ನೀಡಲು ಸಾದ್ಯವಿಲ್ಲ ಆದ್ದರಿಂದ ನಿವೇಶನಗಳಿಗೆ ಹಣ ಸ್ವೀಕರಿಸಲು ಆಗುವುದಿಲ್ಲ, ಈಗಾಗಲೇ ಕಾಮಗಾರಿಗಳು ಪ್ರಗತಿಯಲ್ಲಿರುವುದರಿಂದ ಬೇರೆ ಖಾತೆಗಳಿಂದ ಹಣ ವರ್ಗಾಯಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಬಹುದಾಗಿರುತ್ತದೆ, ನಿವೇಶನಗಳ ಮೊತ್ತ ಬಂದ ನಂತರ ಆಯಾ ಖಾತೆಗೆ ಮರು ಜಮಾವಣೆ ಮಾಡಬಹುದಾಗಿರುತ್ತದೆ, ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಲಭ್ಯವಿರುವ ಪ್ರಾಧಿಕಾರದ ಹಣವನ್ನು ಕಾಮಗಾರಿ ಪೂರ್ಣಗೊಂಡ ನಂತರ ಪಾವತಿ ಮಾಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 7.**

ಹಿರೇಮಗಳೂರು ಗ್ರಾಮದ ಸರ್ವೆ ನಂ. 322 / P1 ರಲ್ಲಿನ 00 ಎಕರೆ 21 ಗುಂಟೆ ಮತ್ತು ಸರ್ವೆ ನಂ. 322 / P2 ರಲ್ಲಿನ 00 ಎಕರೆ 21 ಗುಂಟೆ ಜಮೀನು ಒಟ್ಟು 01 ಎಕರೆ 02 ಗುಂಟೆ ಭೂಮಿಯಲ್ಲಿ ನಿವೇಶನಗಳನ್ನು ರಚಿಸಿ ನಿಯಮಾನುಸಾರ ಹಂಚಿಕೆ ಮಾಡುವ ಕುರಿತು.

**ಟಿಪ್ಪಣಿ :**

ಹಿರೇಮಗಳೂರು ಗ್ರಾಮದ ಸರ್ವೆ ನಂ. 322 / P1 ರಲ್ಲಿನ 00 ಎಕರೆ 21 ಗುಂಟೆ ಮತ್ತು ಸರ್ವೆ ನಂ. 322 / P2 ರಲ್ಲಿನ 00 ಎಕರೆ 21 ಗುಂಟೆ ಜಮೀನು ಒಟ್ಟು 01 ಎಕರೆ 02 ಗುಂಟೆ ಭೂಮಿಯನ್ನು 16 / 2 ಅಧಿಸೂಚನೆ ಆಗಿ ಪ್ರಾಧಿಕಾರಕ್ಕೆ ಹಸ್ತಾಂತರವಾಗಿರುತ್ತದೆ, ಸದರಿ ಭೂಮಿಯಲ್ಲಿ ಬಡಾವಣೆ ರಚಿಸಲು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ, ಈ ಭೂಮಿಯಲ್ಲಿ ಮತ್ತು ಈಗಾಗಲೇ ರಚಿಸಿರುವ ಬಡಾವಣೆಯಲ್ಲಿ ಉಳಿದಿರುವ ಲ್ಯಾಂಡ್ ಬ್ಯಾಂಕ್ ಒಟ್ಟು 01 ಎಕರೆ 05 ಗುಂಟೆ ಭೂಮಿಯಲ್ಲಿ ನಿವೇಶನಗಳನ್ನು ರಚಿಸಿ ನಿಯಮಾನುಸಾರ ಹಂಚಿಕೆ ಮಾಡಬಹುದಾಗಿರುತ್ತದೆ.

ಸದರಿ ನಿವೇಶನಗಳಿಗೆ ಪ್ರತಿ ಚದರ ಅಡಿಗೆ ಬೆಲೆಯನ್ನು ನಿಗದಿಪಡಿಸಬೇಕಾಗಿದ್ದು, ಬಡಾವಣೆ ರಚನೆ ಮತ್ತು ಉಳಿಕೆ ಭೂಮಿಯಲ್ಲಿ ನಿಯಮಾನುಸಾರ ಹಂಚಿಕೆ ಮಾಡಬಹುದಾಗಿರುತ್ತದೆ, ಈಗಾಗಲೇ 17 ಎಕರೆ 37½ ಗುಂಟೆ ಭೂಮಿಯಲ್ಲಿ ಹಂಚಿಕೆ ಮಾಡುತ್ತಿರುವ ಪ್ರತಿ ಚದರ ಅಡಿಗೆ ರೂ. 175.00 ಗಳನ್ನು ಈ ನಿವೇಶನಗಳಿಗೂ ಸಹ ದರ ನಿಗದಿ ಮಾಡಬಹುದಾಗಿರುತ್ತದೆ, ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಹಿರೇಮಗಳೂರು ಗ್ರಾಮದ ಸರ್ವೆ ನಂ. 322 / P1 ರಲ್ಲಿನ 00 ಎಕರೆ 21 ಗುಂಟೆ ಮತ್ತು ಸರ್ವೆ ನಂ. 322 / P2 ರಲ್ಲಿನ 00 ಎಕರೆ 21 ಗುಂಟೆ ಜಮೀನು ಒಟ್ಟು 01 ಎಕರೆ 02 ಗುಂಟೆ ಭೂಮಿಯನ್ನು ಈಗಾಗಲೇ ನಿರ್ಮಾಣ ಮಾಡುತ್ತಿರುವ 17 ಎಕರೆ 37½ ಗುಂಟೆ ಭೂಮಿಯ ಬಡಾವಣೆಗೆ ಹೊಂದಿಸಿ ಹೆಚ್ಚುವರಿ ಬಡಾವಣೆ ನಕ್ಷೆಗೆ ಪರಿಗಣಿಸಲು ಸಭೆಯು ತೀರ್ಮಾನಿಸಿತು, ಮತ್ತು ನಿವೇಶನ ಹಂಚಿಕೆ ನಿಯಮಗಳ ಅನುಸಾರ ನಿವೇಶನಗಳ ಹಂಚಿಕೆಗೆ ಕ್ರಮ ಕೈಗೊಳ್ಳಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು, (ನ್ಯಾಯಾಲಯದ ತಡೆಯಾಜ್ಞೆ ತೆರವುಗೊಳಿಸಿ ಅದರಂತೆ ಅನುಷ್ಠಾನಗೊಳಿಸುವ ಷರತ್ತಿಗೊಳಪಟ್ಟಿದೆ.)

ಹಿರೇಮಗಳೂರು ಪ್ರಾಧಿಕಾರದ ಹಳೆ ಬಡಾವಣೆಯಲ್ಲಿ ಉಳಿದಿರುವ ಲ್ಯಾಂಡ್‌ಬ್ಯಾಂಕ್ ಮತ್ತು ಉಳಿಕೆ ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಹಂಚಿಕೆ ಮಾಡುವ ಬಗ್ಗೆ ಚರ್ಚಿಸಲಾಯಿತು, ಈ ಭೂಮಿಯು 1993 ರಿಂದ ರಚಿಸಿರುವ ಬಡಾವಣೆಯ ಭಾಗವಾಗಿದ್ದು ಈಗಾಗಲೇ ಈ ಬಡಾವಣೆಯಲ್ಲಿ ಹೆಚ್ಚಿನ ಲಾಭಗಳಿಸಿರುವುದರಿಂದ ಉಪನೋಂದಣಾಧಿಕಾರಿಗಳ ಮಾರ್ಗದರ್ಶಿ ಬೆಲೆಯಂತೆ ಪ್ರತಿ ಚದರ ಅಡಿಗೆ ರೂ. 60.00 ನಿಗದಿಪಡಿಸಿ ಹಂಚಿಕೆ ಮಾಡಲು ಅಧ್ಯಕ್ಷರು ಮತ್ತು ಸದಸ್ಯರು ಅಭಿಪ್ರಾಯಪಟ್ಟರು ಸದರಿ ಭೂಮಿಯು ಕಚ್ಚಾ ಭೂಮಿಯಾಗಿದ್ದು ಅಭಿವೃದ್ಧಿ ಕಾರ್ಯಗಳಾದ ರಸ್ತೆ, ಚರಂಡಿ, ಒಳಚರಂಡಿ, ವಿದ್ಯುತ್ ಮತ್ತು ನೀರು ಸರಬರಾಜು ಕಾಮಗಾರಿಗಳನ್ನು ನಿರ್ವಹಿಸಲು ಪ್ರತಿ ಎಕರೆಗೆ ಅಂದಾಜು ರೂ. 20.00 ಲಕ್ಷಕ್ಕೂ ಹೆಚ್ಚು ಖರ್ಚು ಬರುವುದರಿಂದ ಪ್ರತಿ ಚದರ ಅಡಿಗೆ ರೂ. 175.00 ನಿಗದಿಪಡಿಸುವುದು ಸೂಕ್ತವೆಂದು ಆಯುಕ್ತರು ಅಭಿಪ್ರಾಯ ಪಟ್ಟರು ಸದರೀ ಖರ್ಚುಗಳನ್ನು ಪ್ರಾಧಿಕಾರದಿಂದ ಭರಿಸಿ ಪ್ರತಿ ಚದರ ಅಡಿಗೆ ರೂ. 60.00 ರಂತೆಯೇ ನಿಗದಿಪಡಿಸಿ ನಿವೇಶನ ಹಂಚಿಕೆ ನಿಯಮಗಳ ಅನ್ವಯ ಹಂಚಿಕೆ ಮಾಡಲು ಸಭೆಯು ಬಹುಮತದಿಂದ ತೀರ್ಮಾನಿಸಿತು.

**ವಿಷಯ ನಂ 8.**

ದಿನಾಂಕ: 05-10-2007 ರಲ್ಲಿ ವಿಷಯ ಸಂಖ್ಯೆ. 3 ರ ನಿರ್ಣಯವನ್ನು ರದ್ದುಪಡಿಸುವ ಬಗ್ಗೆ.

**ಟಿಪ್ಪಣಿ :**

ಮಾನ್ಯ ಅಧ್ಯಕ್ಷರು ಈ ಬಗ್ಗೆ ಸೂಚನೆ ನೀಡಿ ಹಿರೇಮಗಳೂರು ಹಳೇ ಬಡಾವಣೆಯ ಸರ್ವೆ ನಂ. 519 ರ 06 ಎಕರೆ 02 ಗುಂಟೆ ಜಮೀನಿನ ಬದಲಿಗೆ ಇದೇ ಹಿರೇಮಗಳೂರು ಗ್ರಾಮದ ಸರ್ವೆ ನಂ. 433, 465, 434 ಮತ್ತಿತರೆ ಸರ್ವೆ ನಂಬರುಗಳ 06 ಎಕರೆ 10 ಗುಂಟೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಆಗಿದ್ದ ದಿನಾಂಕ: 05-10-2007 ರ ನಿರ್ಣಯವನ್ನು ಕೈಬಿಡಲು ಸೂಚಿಸಿರುತ್ತಾರೆ, ಸರ್ವೆ ನಂ. 519 ರ ಭೂಮಿಯು ಹೈಕೋರ್ಟಿನಿಂದ 4 (1) ಮತ್ತು 6 (1) ಅಧಿಸೂಚನೆ ರದ್ದು ಪಡಿಸಿರುವುದರಿಂದ ಸದರೀ ನಿರ್ಣಯವನ್ನು ಕೈಗೊಳ್ಳಲಾಗಿತ್ತು, ಸರ್ವೆ ನಂ. 433, 465, 434 ಮತ್ತಿತರೆ ಸರ್ವೆ ನಂಬರುಗಳ ಭೂಮಿಯು ಬಡಾವಣೆಗೆ ಹೊಂದಿಕೊಂಡು ಇರುವುದರಿಂದ ಈ ಹಿಂದಿನ ನಿರ್ಣಯ ಸೂಕ್ತವಾಗಿರುತ್ತದೆ, ಇದನ್ನು ಕೈಬಿಡಬೇಕಾದಲ್ಲಿ ಬೇರೆ 06 ಎಕರೆ 02 ಭೂಮಿಯನ್ನು ಕಡ್ಡಾಯವಾಗಿ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ, ಸದರೀ ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ:**

ಸದರಿ ವಿಷಯವನ್ನು ದೀರ್ಘವಾಗಿ ಚರ್ಚಿಸಲಾಯಿತು, ಹಿರೇಮಗಳೂರು ಗ್ರಾಮದ ಸರ್ವೆ ನಂ. 433, 465 ಮತ್ತು 434 ಮತ್ತಿತರೆ ಸರ್ವೆ ನಂಬರುಗಳಲ್ಲಿನ 06 ಎಕರೆ 10 ಗುಂಟೆ ಭೂಮಿಯನ್ನು ಭೂ ಸ್ವಾಧೀನಕ್ಕೆ ಸರ್ಕಾರದ ಪತ್ರ ಸಂಖ್ಯೆ. ನಅಇ : 21 : ಮೈಅಪ್ರಾ : 2009, ದಿನಾಂಕ: 26-02-2010 ರಂದು ಅನುಮೋದನೆ ನೀಡಿರುವುದಾಗಿ ಆಯುಕ್ತರು ತಿಳಿಸಿದರು, ಆದರೆ ಸದರೀ ಸರ್ವೆ ನಂಬರುಗಳ ಭೂಮಿಯು ಅತೀ ಸಣ್ಣ ಬಡ ರೈತರಿಗೆ ಸೇರಿದ್ದಾಗಿದ್ದು ಅವರ ಆರ್ಥಿಕ ಸಂಕಷ್ಟವನ್ನು ಗಮನಿಸಿ ಭೂ ಸ್ವಾಧೀನದಿಂದ ಕೈಬಿಡಲು ಮಾನ್ಯ ಅಧ್ಯಕ್ಷರು ಮತ್ತು ಮಾನ್ಯ ವಿದಾನ ಪರಿಷತ್ ಸದಸ್ಯರು ಅಭಿಪ್ರಾಯಪಟ್ಟರು, ಸಭೆಯ ಹಲವು ಸದಸ್ಯರೂ ಸಹ ಇದಕ್ಕೆ ಅಭಿಪ್ರಾಯ ವ್ಯಕ್ತಪಡಿಸಿದರು, ಕಾನೂನುಗಳ ಅನ್ವಯ ಈ ಬಡಾವಣೆಗೆ ಅವಶ್ಯವಿರುವ 06 ಎಕರೆ 02 ಗುಂಟೆ ಭೂಮಿಗೆ ಈ ಪ್ರದೇಶದ ಬೇರೆ ಯಾವುದಾದರೂ ಭೂಮಿಯನ್ನು ಭೂಸ್ವಾಧೀನಕ್ಕೆ ಸೂಚಿಸಿ ಸದರೀ ಸರ್ವೆ ನಂಬರ್ 433, 434 ಮತ್ತು 465 ರ ಭೂಮಿಯನ್ನು ಭೂಸ್ವಾಧೀನದ ಪ್ರಕ್ರಿಯೆಯಿಂದ ಕೈಬಿಡಲು ನಿರ್ಣಯಿಸಿ ಸರ್ಕಾರದ ಅನುಮತಿಗೆ ಕಳುಹಿಸಿಕೊಡಲು ಬಹುಮತದಿಂದ ತೀರ್ಮಾನಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು.

**ವಿಷಯ ನಂ 1.**

ಶ್ರೀ ಬಿ. ಎಸ್. ಈಶ್ವರಪ್ಪ ಬಿನ್ ನಂಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 652 / 3 ರಲ್ಲಿನ 0.08.08 ಗುಂಟೆ ವಿಸ್ತೀರ್ಣಕ್ಕೆ ವಸತಿ (ಬೆಲ್ಲಾ ತಯಾರಿಕಾ ಘಟಕ) ಉದ್ದೇಶಕ್ಕೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಬಿ. ಎಸ್. ಈಶ್ವರಪ್ಪ ಬಿನ್ ನಂಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 652 / 3 ರಲ್ಲಿನ 0.08.08 ಗುಂಟೆ ವಿಸ್ತೀರ್ಣಕ್ಕೆ ವಸತಿ (ಬೆಲ್ಲಾ ತಯಾರಿಕಾ ಘಟಕ) ಉದ್ದೇಶಕ್ಕೆ ಭೂ ಪರಿವರ್ತಿಸಲು ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಗೆ ಅರ್ಜಿ ಸಲ್ಲಿಸಿ ತಾಂತ್ರಿಕ ಅಭಿಪ್ರಾಯ ಕೋರಿ ಈ ಕಛೇರಿಗೆ ಸಲ್ಲಿಸಿರುತ್ತಾರೆ, ಸದರಿ ಪ್ರದೇಶವು ಹಾಲಿ 24.00 ಮೀಟರ್ ಅಗಲದ ಬಿಳೀಕೆರೆ ತರೀಕೆರೆ ರಾಜ್ಯ ಹೆದ್ದಾರಿ ರಸ್ತೆಗೆ ಅಭಿಮುಖವಾಗಿರುತ್ತದೆ, ಮತ್ತು ಸದರಿ ಪ್ರದೇಶವು ಸಿ. ಡಿ. ಪಿ. ನಕ್ಷೆಯಲ್ಲಿ ಮತ್ತು ಮಹಾ ಯೋಜನೆ ಪರಿಷ್ಕೃತ– 1 ರಲ್ಲಿಯೂ ಸಹ ಕೃಷಿ ವಲಯದಲ್ಲಿರುತ್ತದೆ, ವಲಯ ನಿಯಮಾವಳಿ ಪುಟ ಸಂಖ್ಯೆ 65 (ಬಿ) ರ ಅನ್ವಯ ಕೃಷಿ ವಲಯದಲ್ಲಿ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಬಿ. ಎಸ್. ಈಶ್ವರಪ್ಪ ಬಿನ್ ನಂಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 652 / 3 ರಲ್ಲಿನ 0.08.08 ಗುಂಟೆ ವಿಸ್ತೀರ್ಣಕ್ಕೆ ವಸತಿ (ಬೆಲ್ಲಾ ತಯಾರಿಕಾ ಘಟಕ) ಉದ್ದೇಶಕ್ಕೆ ಭೂ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯ ಕೋರಿರುತ್ತಾರೆ, ಸದರಿ ಪ್ರಕರಣಕ್ಕೆ ಸರ್ವೆ ಸ್ಕೆಚ್‌ನಲ್ಲಿ ಖರಾಬು ಬಗ್ಗೆ ಮಾಹಿತಿ ಅವಶ್ಯ ಇರುತ್ತದೆ ಮತ್ತು ಸ್ಥಳ ಪರಿಶೀಲನೆ ಅವಶ್ಯ ಇರುತ್ತದೆ, ಸದರಿ ಜಾಗವು ಮಹಾಯೋಜನೆಯಲ್ಲಿ ಕೃಷಿ ವಲಯದಲ್ಲಿದ್ದು ಬೆಲ್ಲಾ ತಯಾರಿಕಾ ಘಟಕಕ್ಕೆ ಅವಕಾಶ ಇರುತ್ತದೆ, ವಲಯ ನಿಯಮಾವಳಿ ಪುಟ ಸಂಖ್ಯೆ 65 (ಬಿ) ರ ಅನ್ವಯ ಕೃಷಿ ವಲಯದಲ್ಲಿ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಗೆ ಮಂಡಿಸಿ ನಂತರ ನೀಡಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಬಿ. ಎಸ್. ಈಶ್ವರಪ್ಪ ಬಿನ್ ನಂಜೇಗೌಡ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 652 / 3 ರಲ್ಲಿನ 0.08.08 ಗುಂಟೆ ವಿಸ್ತೀರ್ಣಕ್ಕೆ ವಸತಿ (ಬೆಲ್ಲಾ ತಯಾರಿಕಾ ಘಟಕ) ಉದ್ದೇಶಕ್ಕೆ ಭೂ ಪರಿವರ್ತಿಸಲು ತಾಂತ್ರಿಕ ಅಭಿಪ್ರಾಯ ಕೋರಿರುವ ಪ್ರದೇಶವು ಮಹಾಯೋಜನೆಯಲ್ಲಿ ಕೃಷಿ ವಲಯದಲ್ಲಿದ್ದು, ಅರ್ಜಿದಾರರು ಕೋರಿರುವ ಬೆಲ್ಲಾ ತಯಾರಿಕಾ ಘಟಕಕ್ಕೆ ವಲಯ ನಿಯಮಾವಳಿ ಪುಟ ಸಂಖ್ಯೆ 65 (ಬಿ) ರ ಅನ್ವಯ ಕೃಷಿ ವಲಯದಲ್ಲಿ ಬೆಲ್ಲಾ ತಯಾರಿಕಾ ಘಟಕಕ್ಕೆ ಅನುಮೋದನೆ ನೀಡಲು ಸಭೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 2.**

ಶ್ರೀ ಎನ್. ಆರ್. ತೇರದಾಳ್, ಶ್ರೀಮತಿ ಕಸ್ತೂರಿ ಎಸ್. ಪವಾರ್, ಪೆನ್‌ಷನ್ ಮೊಹಲ್ಲ. ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣಕ್ಕೆ ವಸತಿ ಉದ್ದೇಶಕ್ಕೆ ರೂಪ ರೇಖೆ ನಕ್ಷೆ ಅನುಮೋದನೆಗೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀ ಎನ್. ಆರ್. ತೇರದಾಳ್, ಶ್ರೀಮತಿ ಕಸ್ತೂರಿ ಎಸ್. ಪವಾರ್, ಪೆನ್‌ಷನ್ ಮೊಹಲ್ಲ. ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣಕ್ಕೆ ವಸತಿ ಉದ್ದೇಶಕ್ಕೆ ರೂಪ ರೇಖೆ ನಕ್ಷೆ ಅನುಮೋದನೆಗೆ ಕೋರಿರುತ್ತಾರೆ.

ಸದರಿ ಪ್ರದೇಶಕ್ಕೆ ಮಾನ್ಯ ಜಿಲ್ಲಾಧಿಕಾರಿಗಳವರಿಂದ ಭೂ ಅನ್ಯಕ್ರಾಂತವಾಗಿರುವ ಪ್ರದೇಶವಾಗಿರುತ್ತದೆ, ಮತ್ತು ವಸತಿ ವಲಯದಲ್ಲಿರುತ್ತದೆ, ಹಾಲಿ ರಸ್ತೆ ಸಂಪರ್ಕ ಹೊಂದಿರುತ್ತದೆ, ಸದರಿ ಪ್ರದೇಶಕ್ಕೆ ರೂಪ ರೇಖಾ ನಕ್ಷೆ ಅನುಮೋದನೆಯನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನೀಡಬಹುದಾಗಿದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಎನ್. ಆರ್. ತೇರದಾಳ್, ಶ್ರೀಮತಿ ಕಸ್ತೂರಿ ಎಸ್. ಪವಾರ್, ಪೆನ್‌ಷನ್ ಮೊಹಲ್ಲ. ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣಕ್ಕೆ ವಸತಿ ಉದ್ದೇಶಕ್ಕೆ ರೂಪ ರೇಖೆ ನಕ್ಷೆ ಅನುಮೋದನೆಗೆ ಕೋರಿರುತ್ತಾರೆ, ಸದರಿ ಜಾಗವು ಜಿಲ್ಲಾಧಿಕಾರಿಗಳವರಿಂದ ವಸತಿಗಾಗಿ ಭೂ ಪರಿವರ್ತನೆ ಆಗಿರುತ್ತದೆ, ಆದುದರಿಂದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಎನ್. ಆರ್. ತೇರದಾಳ್, ಶ್ರೀಮತಿ ಕಸ್ತೂರಿ ಎಸ್. ಪವಾರ್, ಪೆನ್‌ಷನ್ ಮೊಹಲ್ಲ. ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣಕ್ಕೆ ವಸತಿ ಉದ್ದೇಶಕ್ಕೆ ರೂಪ ರೇಖೆ ನಕ್ಷೆ ಅನುಮೋದನೆಗೆ ಕೋರಿರುವ ಪ್ರದೇಶವು ಜಿಲ್ಲಾಧಿಕಾರಿಗಳವರಿಂದ ವಸತಿಗಾಗಿ ಭೂ ಪರಿವರ್ತನೆ ಆಗಿರುತ್ತದೆ, ಆದುದರಿಂದ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಮತ್ತು ಏಕ ನಿವೇಶನ ಅನುಮೋದನೆ ಮಾಡಿಕೊಳ್ಳುವ ಮಾಲೀಕರು ಅದನ್ನು ಅನಧೀಕೃತವಾಗಿ ಉಪ ವಿಭಾಗಗಳನ್ನಾಗಿ ವಿಂಗಡಿಸಿ ಮಾರಾಟ ಮಾಡುತ್ತಿದ್ದಾರೆ, ನಗರದಲ್ಲಿ ಅನಧೀಕೃತ ನಿವೇಶನ ಹಾಗೂ ನಿರ್ಮಾಣ ಕಾರ್ಯ ಆಗುತ್ತಿದ್ದು ಈ ಬಗ್ಗೆ ಏಕ ನಿವೇಶನ ಅನುಮೋದನೆ ರದ್ದುಗೊಳಿಸಿ ಕಡ್ಡಾಯವಾಗಿ ಬಡಾವಣೆ ಅನುಮೋದನೆ ಆಗುವಂತೆ ಸರ್ಕಾರ ಸೂಕ್ತ ಆದೇಶ ನೀಡಲು ಕೋರಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಶ್ರೀಮತಿ ಕಮಲ ಕೊಂ ಶ್ರೀನಿವಾಸನಾಯ್ಡು ಮತ್ತು ಶ್ರೀ ಸಿ. ಆರ್. ಗೋಪಾಲನಾಯ್ಡು, ಶ್ರೀ ಸಿ. ಆರ್. ಆನಂದ ಕುಮಾರ್ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 151 / P1 ಮತ್ತು 151 / P2 ರಲ್ಲಿನ ಒಟ್ಟು 01 ಎಕರೆ 01 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯಕ್ಕಾಗಿ ಭೂ ಪರಿವರ್ತನೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀಮತಿ ಕಮಲ ಕೊಂ ಶ್ರೀನಿವಾಸ ನಾಯ್ಡು ಮತ್ತು ಶ್ರೀ ಸಿ. ಆರ್. ಗೋಪಾಲ ನಾಯ್ಡು, ಶ್ರೀ ಸಿ. ಆರ್. ಆನಂದ ಕುಮಾರ್ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 151 / P1 ಮತ್ತು 151 / P2 ರಲ್ಲಿನ ಒಟ್ಟು 01 ಎಕರೆ 01 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯಕ್ಕಾಗಿ ಭೂ ಪರಿವರ್ತನೆ ಕೋರಿರುವ ಪ್ರದೇಶಕ್ಕೆ ರಸ್ತೆ ಸಂಪರ್ಕ ಹೊಂದಿರುತ್ತದೆ, ಸಿ.ಡಿ.ಪಿ. ನಕ್ಷೆಯಲ್ಲಿ ವಸತಿ ಮತ್ತು ರಸ್ತೆ ಸಂಪರ್ಕಕ್ಕಾಗಿ ಕಾಯ್ದಿರಿಸಿದೆ ಹಾಲಿ ಸರ್ಕಾರದಿಂದ ಅನುಮೋದನೆಯಾಗಿರುವ ತಾತ್ಕಾಲಿಕ ಮಹಾಯೋಜನಾ ನಕ್ಷೆಯಲ್ಲಿ ಉದ್ಯಾನವನಕ್ಕಾಗಿ ಕಾಯ್ದಿರಿಸಿದೆ. ಆದರೆ ಸಿ.ಡಿ.ಪಿ. ನಕ್ಷೆಯಲ್ಲಿ ಕೈಗಾರಿಕಾ ಪ್ರದೇಶಕ್ಕೆ ಮತ್ತು ಮಹಾಯೋಜನೆ (ತಾತ್ಕಾಲಿಕ) ನಕ್ಷೆಯಲ್ಲಿ ಉದ್ಯಾನವನಕ್ಕಾಗಿ ಮೀಸಲಿಟ್ಟಿಟುವುದರಿಂದ ಇದನ್ನು ವಾಣಿಜ್ಯಕ್ಕಾಗಿ ಮೀಸಲಿಡಲು ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಅದರಂತೆ ಸಿ.ಡಿ.ಪಿ. ನಕ್ಷೆಯನ್ವಯ ಕೈಗಾರಿಕೆಯಲ್ಲಿ ಇರುವುದರಿಂದ ವಾಣಿಜ್ಯ ಉದ್ದೇಶಕ್ಕಾಗಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ಕಮಲ ಕೊಂ ಶ್ರೀನಿವಾಸ ನಾಯ್ಡು ಮತ್ತು ಶ್ರೀ ಸಿ. ಆರ್. ಗೋಪಾಲ ನಾಯ್ಡು, ಶ್ರೀ ಸಿ. ಆರ್. ಆನಂದ ಕುಮಾರ್ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 151 / P1 ಮತ್ತು 151 / P2 ರಲ್ಲಿನ ಒಟ್ಟು 01 ಎಕರೆ 01 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯಕ್ಕಾಗಿ ಭೂ ಪರಿವರ್ತನೆ ಕೋರಿರುವ ಪ್ರದೇಶಕ್ಕೆ ರಸ್ತೆ ಸಂಪರ್ಕ ಹೊಂದಿರುತ್ತದೆ, ಸದರಿ ಜಾಗದಲ್ಲಿ ಸಿ.ಡಿ.ಪಿ. ನಕ್ಷೆಯನ್ವಯ ಕೈಗಾರಿಕೆಗಾಗಿ ಮೀಸಲಿಡಲಾಗಿದೆ, ಮಹಾಯೋಜನಾ ನಕ್ಷೆಯಲ್ಲಿ ಉದ್ಯಾನವನ ಇದ್ದು ಇದನ್ನು ವಾಣಿಜ್ಯಕ್ಕಾಗಿ ಮೀಸಲಿಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ, ಆದುದರಿಂದ ಸದರಿ ಪ್ರಕರಣಕ್ಕೆ ಸಿ.ಡಿ.ಪಿ. ನಕ್ಷೆಯನ್ವಯ ಕೈಗಾರಿಕೆಯಲ್ಲಿ ಇರುವುದರಿಂದ ವಾಣಿಜ್ಯ ಉದ್ದೇಶಕ್ಕಾಗಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನೀಡಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀಮತಿ ಕಮಲ ಕೊಂ ಶ್ರೀನಿವಾಸ ನಾಯ್ಡು ಮತ್ತು ಶ್ರೀ ಸಿ. ಆರ್. ಗೋಪಾಲ ನಾಯ್ಡು, ಶ್ರೀ ಸಿ. ಆರ್. ಆನಂದ ಕುಮಾರ್ ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 151 / P1 ಮತ್ತು 151 / P2 ರಲ್ಲಿನ ಒಟ್ಟು 01 ಎಕರೆ 01 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯಕ್ಕಾಗಿ ಭೂ ಪರಿವರ್ತನೆ ಕೋರಿರುವ ಪ್ರದೇಶಕ್ಕೆ ರಸ್ತೆ ಸಂಪರ್ಕ ಹೊಂದಿರುತ್ತದೆ, ಸದರಿ ಜಾಗದಲ್ಲಿ ಸಿ.ಡಿ.ಪಿ. ನಕ್ಷೆಯನ್ವಯ ಕೈಗಾರಿಕೆಗಾಗಿ ಮೀಸಲಿಡಲಾಗಿದೆ, ಮಹಾಯೋಜನಾ ನಕ್ಷೆಯಲ್ಲಿ ಉದ್ಯಾನವನ ಇದ್ದು ಇದನ್ನು ವಾಣಿಜ್ಯಕ್ಕಾಗಿ ಮೀಸಲಿಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ, ಆದುದರಿಂದ ಸದರಿ ಪ್ರಕರಣಕ್ಕೆ ಸಿ.ಡಿ.ಪಿ. ನಕ್ಷೆಯನ್ವಯ ಕೈಗಾರಿಕೆಯಲ್ಲಿ ಇರುವುದರಿಂದ ವಾಣಿಜ್ಯ ಉದ್ದೇಶಕ್ಕಾಗಿ ಭೂಪರಿವರ್ತಿಸಬಹುದೆಂದು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 4.**

ಶ್ರೀಮತಿ ಎಂ. ಎಸ್. ಲತಾ ಕೊಂ ಶ್ರೀ ಬಿ. ಎ. ಬಾಲಕೃಷ್ಣ, ಬೆಲ್ಟ್ ರಸ್ತೆ, ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 6 / 1 ಮತ್ತು 6 / 2 ರಲ್ಲಿನ ಒಟ್ಟು 04 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯ ಮತ್ತು ಸಾರ್ವಜನಿಕ / ಅರೇಸಾರ್ವಜನಿಕ ಉಪಯೋಗಕ್ಕಾಗಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ :**

ಶ್ರೀಮತಿ ಎಂ. ಎಸ್. ಲತಾ ಕೊಂ ಶ್ರೀ ಬಿ. ಎ. ಬಾಲಕೃಷ್ಣ, ಬೆಲ್ಟ್ ರಸ್ತೆ, ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 6 / 1 ಮತ್ತು 6 / 2 ರಲ್ಲಿನ ಒಟ್ಟು 04 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯ ಮತ್ತು ಸಾರ್ವಜನಿಕ / ಅರೇಸಾರ್ವಜನಿಕ ಉಪಯೋಗಕ್ಕಾಗಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರಿಂದ ಭೂ ಅನ್ಯಕ್ರಾಂತ ಆದೇಶವಾಗಿರುವ ಪ್ರದೇಶವಾಗಿರುತ್ತದೆ, ಸದರಿ ಪ್ರದೇಶವು ಹಾಲಿ 15.00 ಮೀಟರ್ ಅಗಲದ ಬೈ–ಪಾಸ್ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ. ಸಿ. ಡಿ. ಪಿ. ನಕ್ಷೆಯಲ್ಲಿ ಪ್ರಸ್ತಾವಿತ ಜಾಗವು ಭಾಗಶಃ ವಾಣಿಜ್ಯಕ್ಕೆ ಭಾಗಶಃ ವಸತಿಗೆ ಭಾಗಶಃ ಸಾರ್ವಜನಿಕ ಮತ್ತು ಅರೇಸಾರ್ವಜನಿಕ ಹಾಗೂ ರಸ್ತೆಗೆ ಇರುತ್ತದೆ, ಹಾಲಿ ಸರ್ಕಾರದಿಂದ ಅನುಮೋದನೆಯಾಗಿರುವ ತಾತ್ಕಾಲಿಕ ಮಹಾಯೋಜನಾ ನಕ್ಷೆಯಲ್ಲಿ ಭಾಗಶಃ ವಸತಿಗೆ ಮತ್ತು ಭಾಗಶಃ ವಾಣಿಜ್ಯಕ್ಕೆ ಕಾಯ್ದಿರಿಸಿದೆ, ಆದುದರಿಂದ ಸದರಿ ಪ್ರದೇಶದ ರೂಪ ರೇಖಾ ನಕ್ಷೆಗೆ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ಎಂ. ಎಸ್. ಲತಾ ಕೊಂ ಶ್ರೀ ಬಿ. ಎ. ಬಾಲಕೃಷ್ಣ, ಬೆಲ್ಟ್ ರಸ್ತೆ, ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 6 / 1 ಮತ್ತು 6 / 2 ರಲ್ಲಿನ ಒಟ್ಟು 04 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯ ಮತ್ತು ಸಾರ್ವಜನಿಕ / ಅರೇಸಾರ್ವಜನಿಕ ಉಪಯೋಗಕ್ಕಾಗಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರಿಂದ ಭೂ ಅನ್ಯಕ್ರಾಂತ ಆದೇಶವಾಗಿರುವ ಪ್ರದೇಶವಾಗಿರುತ್ತದೆ, ಸದರಿ ಪ್ರದೇಶವು ಹಾಲಿ 15.00 ಮೀಟರ್ ಅಗಲದ ಬೈ–ಪಾಸ್ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ, ಸಿ.ಡಿ.ಪಿ. ನಕ್ಷೆಯಲ್ಲಿ ಪ್ರಸ್ತಾವಿತ ಜಾಗವು ಭಾಗಶಃ ವಾಣಿಜ್ಯಕ್ಕೆ ಭಾಗಶಃ ವಸತಿಗೆ ಭಾಗಶಃ ಸಾರ್ವಜನಿಕ ಮತ್ತು ಅರೇಸಾರ್ವಜನಿಕ ಹಾಗೂ ರಸ್ತೆಗೆ ಇರುತ್ತದೆ, ಹಾಲಿ ಸರ್ಕಾರದಿಂದ ಅನುಮೋದನೆಯಾಗಿರುವ ತಾತ್ಕಾಲಿಕ ಮಹಾಯೋಜನಾ ನಕ್ಷೆಯಲ್ಲಿ ಭಾಗಶಃ ವಸತಿಗೆ ಮತ್ತು ಭಾಗಶಃ ವಾಣಿಜ್ಯಕ್ಕೆ ಕಾಯ್ದಿರಿಸಿದೆ, ಆದುದರಿಂದ ಸದರಿ ಪ್ರದೇಶದ ರೂಪ ರೇಖಾ ನಕ್ಷೆಗೆ ಅನುಮೋದನೆ ನೀಡಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀಮತಿ ಎಂ. ಎಸ್. ಲತಾ ಕೊಂ ಶ್ರೀ ಬಿ. ಎ. ಬಾಲಕೃಷ್ಣ, ಬೆಲ್ಟ್ ರಸ್ತೆ, ಚಿಕ್ಕಮಗಳೂರು ಇವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸರ್ವೆ ನಂ. 6 / 1 ಮತ್ತು 6 / 2 ರಲ್ಲಿನ ಒಟ್ಟು 04 ಎಕರೆ 00 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಾಣಿಜ್ಯ ಮತ್ತು ಸಾರ್ವಜನಿಕ / ಅರೇಸಾರ್ವಜನಿಕ ಉಪಯೋಗಕ್ಕಾಗಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರಿಂದ ಭೂ ಅನ್ಯಕ್ರಾಂತ ಆದೇಶವಾಗಿರುವ ಪ್ರದೇಶವಾಗಿರುತ್ತದೆ, ಸದರಿ ಪ್ರದೇಶವು ಹಾಲಿ 15.00 ಮೀಟರ್ ಅಗಲದ ಬೈ–ಪಾಸ್ ರಸ್ತೆಯಿಂದ ಸಂಪರ್ಕ ಹೊಂದಿರುತ್ತದೆ, ಸಿ.ಡಿ.ಪಿ. ನಕ್ಷೆಯಲ್ಲಿ ಪ್ರಸ್ತಾವಿತ ಜಾಗವು ಭಾಗಶಃ ವಾಣಿಜ್ಯಕ್ಕೆ ಭಾಗಶಃ ವಸತಿಗೆ ಭಾಗಶಃ ಸಾರ್ವಜನಿಕ ಮತ್ತು ಅರೇಸಾರ್ವಜನಿಕ ಹಾಗೂ ರಸ್ತೆಗೆ ಇರುತ್ತದೆ, ಹಾಲಿ ಸರ್ಕಾರದಿಂದ ಅನುಮೋದನೆಯಾಗಿರುವ ತಾತ್ಕಾಲಿಕ ಮಹಾಯೋಜನಾ ನಕ್ಷೆಯಲ್ಲಿ ಭಾಗಶಃ ವಸತಿಗೆ ಮತ್ತು ಭಾಗಶಃ ವಾಣಿಜ್ಯಕ್ಕೆ ಕಾಯ್ದಿರಿಸಿದೆ, ಆದುದರಿಂದ ಸದರಿ ಪ್ರದೇಶದ ರೂಪ ರೇಖಾ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.